## ಅಖಿಲ ಭಾರತ ಪತ್ರಿಕೆ

## ಫೆಬ್ರವರಿ 2018



# ಅರುಣೋದಯದ ನಗರ

ಬೆಲೆ : 15/–



*Leave all care to the Divine's Grace, including your progress, and you will be in peace.*

- The Mother

## ಅಖಿಲ ಭಾರತ ಪತ್ರಿಕೆ

**ಸಂಪಾದಕರು :**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್.ಡಿ.
ಶಿವಗಿರಿ, ಧಾರವಾಡ – 580007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪ್ಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ.**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.

**ಆಫ್‌ಸೆಟ್ ಮುದ್ರಣ :**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.
ಫೋನ್ : 080 – 2244 9882
http://abp.sirinudi.org

## ಪರಿವಿಡಿ

## "ಅರುಣೋದಯದ ನಗರ"

**ಅನು: ಡಾ. ಕೆ.ಎಸ್. ಆಮೂರ**
ಪರಮೋಚ್ಚನ ಕನಸು 3
ಅರೋವಿಲೆಯ ಜನ್ಮ 15
ಅರೋವಿಲೆಯ ಉದ್ದೇಶ 19
ಭವಿಷ್ಯತ್ತಿನ ನಗರವನ್ನು ನಿರ್ಮಾಣ ಮಾಡುವುದು 26

**ಅನು: ಡಾ. ಬಿ.ಆರ್. ಭೀಡ**
ಅರೋವಿಲೆಯ ಸಂಕೇತ 38

**ಅನು: ಡಾ. ಕೆ.ಎಸ್. ಆಮೂರ**
ಮಾತೃಮಂದಿರ: ಅರೋವಿಲೆಯ ಆತ್ಮ 50

**ಅನು: ಶ್ರೀ ಪುರುಷೋತ್ತಮ ಗಲಗಲಿ**
ಚಂಪಕಲಾಲನ ದರ್ಶನಗಳು 60

**ವಾರ್ತಾಪತ್ರ** 63

## (All India Magazine) ಸಂಪಾದಕೀಯ:

ಮನುಕುಲ ತನ್ನಂತರಂಗದಲ್ಲಿ ನಡೆಸಿದ ಕೊನೆಯಿಲ್ಲದ ಸಮರಗಳ ಇತಿಹಾಸವಿದ್ದಾಗಲೂ ಅದು ಹೆಚ್ಚು ಸಂತೋಷಕರ, ಶಾಂತಿಯುತ ಹಾಗೂ ಸಾಮರಸ್ಯವಿರುವ ಸಾಮುದಾಯಿಕ ಜೀವನಕ್ಕಾಗಿ ಅಭೀಪ್ಸೆಯನ್ನು, ಯಾವಾಗಲೂ, ಪೋಷಿಸಿಕೊಂಡು ಬಂದಿದೆ. ಈ ಅಭೀಪ್ಸೆ ಮನುಷ್ಯನ ಧಾರ್ಮಿಕ ಹಾಗೂ ಜಾತ್ಯಾತೀತ ಯೋಚನೆಯಲ್ಲಿ ಅನೇಕ ರೂಪ ತಾಳಿದೆ. ಆದರೆ ಇಲ್ಲಿಯವರೆಗೆ ಕೇವಲ ತಾತ್ಕಾಲಿಕ, ಬಹುಮಟ್ಟಿಗೆ ಹೋಲುವಂತಹವುಗಳಲ್ಲಿ ಯಶಸ್ವಿಯಾಗಿದ್ದೇವೆ ಮತ್ತು ನಿಜವಾದ ಏಕತೆಯಲ್ಲಲ್ಲ. ಬಹುಶಃ ನಿಜವಾದ ಆಧಾರ ತಪ್ಪಿಸಿಕೊಂಡಿದೆ. ಈ ಸಮಯದಲ್ಲಿ ಅತಿಮಾನಸ ಪ್ರಜ್ಞೆಯೊಂದಿಗೆ ಶಸ್ತ್ರಸಜ್ಜಿತಗೊಂಡು ಮತ್ತೆ ಈ ಪ್ರಯತ್ನ ಪ್ರಾರಂಭವಾಗುತ್ತಿರುವುದನ್ನು ನಾವು ನೋಡುತ್ತೇವೆ, ಅದನ್ನು ಅವತಾರ ತಾಳಿದ್ದ ಸ್ವತಃ ದೈವೀ ಮಾತೆಯವರಿಂದಲೇ ಆರಂಭಿಸಲಾಗಿತ್ತು. ಹೆಚ್ಚು ಪ್ರಕಾಶಮಯ, ಸಾಮರಸ್ಯದಿಂದ ಕೂಡಿದ ಹಾಗೂ ಸುಂದರವಾದ ಅಸ್ತಿತ್ವಕ್ಕಾಗಿರುವ ಈ ಅಭೀಪ್ಸೆಯನ್ನೇ ನಾವು ಅರೋವಿಲೆಯ ಬೇರುಗಳಲ್ಲಿ ನೋಡುತ್ತೇವೆ. ದೈವೀ ಯೋಜನೆಯಾದ ಅರೋವಿಲೆಯನ್ನು ಆರಂಭ ಮಾಡಿದ್ದ ಶ್ರೀಮಾತೆಯವರೇ ಅದಕ್ಕೆ ಮಾರ್ಗದರ್ಶನ ಹಾಗೂ ಆಸರೆ ನೀಡುತ್ತಿದ್ದರು. ನಿಸ್ಸಂಶಯವಾಗಿ ಅದು ಮನುಕುಲಕ್ಕೆ ಒಂದು ಕನಸಿನ ಯೋಜನೆಯಾಗಿದೆ, ಆದರೆ ಆ ಕನಸು ಸ್ವತಃ ಪರಮೋಚ್ಚ ದೈವೀ ಪ್ರಭುವಿನದೇ ಆಗಿದೆ. ಅದು ಜನ್ಮತಾಳಿ ಐವತ್ತು ವರ್ಷಗಳಾಗುತ್ತಿರುವ ಈ ಸಂದರ್ಭದಲ್ಲಿ ನಾವು ಈ ಸಂಚಿಕೆಯನ್ನು ಶ್ರೀಮಾತೆಯವರ ಈ ವಿಶ್ವಂಭರ ಸಣ್ಣನಗರದ ಜನ್ಮದಿನಕ್ಕೆ ಮುಡುಪಾಗಿರಿಸುತ್ತಿದ್ದೇವೆ.

*



**ವಿಶ್ವಂಭರ ನಗರ**

ಅರೋವಿಲೆ ವಿಶ್ವಂಭರ ನಗರವಾಗಲು ಬಯಸುತ್ತದೆ, ಅಲ್ಲಿ ಎಲ್ಲ ದೇಶಗಳ ಪುರುಷರು, ಸ್ತ್ರೀಯರು ಎಲ್ಲ ಮತ ಪಂಥಗಳ, ರಾಜಕೀಯದ ಹಾಗೂ ರಾಷ್ಟ್ರೀಯತೆಗಳ ಮೇಲಿದ್ದುಕೊಂಡು ಶಾಂತಿಯಿಂದ ಹಾಗೂ ಪ್ರಗತಿಪರ ಸಾಮರಸ್ಯದಿಂದ ಜೀವಿಸಲು ಶಕ್ತರಾಗುತ್ತಾರೆ.

ಅರೋವಿಲೆಯ ಉದ್ದೇಶ ಮಾನವ ಏಕತೆಯನ್ನು ಸಿದ್ಧಿಸಿಕೊಳ್ಳುವುದಾಗಿದೆ.

**CWM, 13/188** **- ಶ್ರೀಮಾತೆ**

*

## ಪರಮೋಚ್ಚನ ಕನಸು

**1. ಪ್ರಶ್ನೆ:** *ಅರೋವಿಲೆಯ ನಿರ್ಮಾಣದ ಪ್ರಾರಂಭವನ್ನು ಯಾರು ಕೈಗೆತ್ತಿ–ಕೊಂಡಿದ್ದಾರೆ?*

**ಶ್ರೀಮಾತೆ:** ಪರಮೋಚ್ಚ ದೈವೀ ಪ್ರಭು.

**2. ಪ್ರಶ್ನೆ:** *ಅರೋವಿಲೆಗೆ ಹಣಕಾಸು ಒದಗಿಸುವವರಲ್ಲಿ ಯಾರು ಭಾಗ–ವಹಿಸುತ್ತಾರೆ?*

**ಶ್ರೀಮಾತೆ:** ಪರಮೋಚ್ಚ ದೈವೀ ಪ್ರಭು.

**3. ಪ್ರಶ್ನೆ:** *ಮನುಷ್ಯನೊಬ್ಬ ಅರೋವಿಲೆಯಲ್ಲಿ ಇರಲು ಬಯಸಿದರೆ ಅದು ಅವನಿಗೆ ಏನನ್ನು ವ್ಯಕ್ತಗೊಳಿಸುತ್ತದೆ?*

**ಶ್ರೀಮಾತೆ:** ಪರಮೋಚ್ಚ ಪರಿಪೂರ್ಣತೆಯನ್ನು ದೊರಕಿಸಲು ಪ್ರಯತ್ನ ಮಾಡುವುದಿರುತ್ತದೆ.

**4. ಪ್ರಶ್ನೆ:** *ಅರೋವಿಲೆಯಲ್ಲಿ ಜೀವಿಸಲು ಮನುಷ್ಯ ಯೋಗದ ವಿದ್ಯಾರ್ಥಿ–ಯಾಗಬೇಕಾಗುತ್ತದೆಯೆ?*

**ಶ್ರೀಮಾತೆ:** ಎಲ್ಲ ಜೀವನ ಯೋಗವಾಗಿದೆ. ಹಾಗಾಗಿ ಮನುಷ್ಯ ಪರಮೋಚ್ಚ ಯೋಗವನ್ನು ಆಚರಿಸದೆ ಜೀವಿಸಲಾರ.

**5. ಪ್ರಶ್ನೆ:** *ಅರೋವಿಲೆಯಲ್ಲಿ ಆಶ್ರಮದ ಪಾತ್ರವೇನು?*

**ಶ್ರೀಮಾತೆ:** ಅದು ಏನಾಗಿರಬೇಕು ಎಂದು ಪರಮೋಚ್ಚ ಪ್ರಭು ಬಯಸಿದ ಹಾಗಿರುತ್ತದೆ.

**6. ಪ್ರಶ್ನೆ:** *ಅರೋವಿಲೆಯಲ್ಲಿ ಶಿಬಿರಗಳಿಗೆ ಸ್ಥಾನಗಳಿರುತ್ತವೆಯೆ?*

**ಶ್ರೀಮಾತೆ:** ಎಲ್ಲ ವಿಷಯಗಳು ಅವುಗಳಿರಬೇಕಾದ ರೀತಿಯಲ್ಲಿ ಹಾಗೂ ಇರಬೇಕಾದ ಕಾಲದಲ್ಲಿ ಇರುತ್ತವೆ.

**7. ಪ್ರಶ್ನೆ:** *ಅರೋವಿಲೆಯಲ್ಲಿ ಕುಟುಂಬ ಜೀವನವನ್ನು ಮುಂದುವರಿಸಿಕೊಂಡು ಹೋಗಲಾಗುವುದೆ?*

**ಶ್ರೀಮಾತೆ:** ಮನುಷ್ಯ ಅದರಾಚೆಗೆ ಹೋಗಲು ಶಕ್ತನಾಗಿರದಿದ್ದರೆ ಮುಂದುವರಿಸಿ–ಕೊಂಡು ಹೋಗಬಹುದು.

**8. ಪ್ರಶ್ನೆ:** *ಅರೋವಿಲೆಯಲ್ಲಿ ಮನುಷ್ಯ ತನ್ನ ಧರ್ಮವನ್ನು ಉಳಿಸಿಕೊಂಡು ಹೋಗಬಲ್ಲನೆ?*

**ಶ್ರೀಮಾತೆ:** ಮನುಷ್ಯ ಅದರಾಚೆಗೆ ಹೋಗಲು ಶಕ್ತನಾಗಿರದಿದ್ದರೆ ಉಳಿಸಿಕೊಳ್ಳ–ಬಹುದು.

**9. ಪ್ರಶ್ನೆ:** *ಅರೋವಿಲೆಯಲ್ಲಿ ಮನುಷ್ಯ ನಾಸ್ತಿಕನಾಗಿರಬಹುದೆ?*

**ಶ್ರೀಮಾತೆ:** ಮನುಷ್ಯ ಅದರಾಚೆಗೆ ಹೋಗಲು ಶಕ್ತನಾಗಿರದಿದ್ದರೆ ನಾಸ್ತಿಕನಾಗಿ ಉಳಿದುಕೊಳ್ಳಬಹುದು.

**10. ಪ್ರಶ್ನೆ:** *ಅರೋವಿಲೆಯಲ್ಲಿ ಸಾಮಾಜಿಕ ಜೀವನವಿರುತ್ತದೆಯೆ?*

**ಶ್ರೀಮಾತೆ:** ಮನುಷ್ಯ ಅದರಾಚೆಗೆ ಸಾಗಿ ಹೋಗಿರದಿದ್ದರೆ ಅದು ಇರುತ್ತದೆ.

**11. ಪ್ರಶ್ನೆ:** *ಅರೋವಿಲೆಯಲ್ಲಿ ಒತ್ತಾಯಪೂರ್ವಕವಾದವುಗಳು ಎನಿಸುವ ಸಾಮೂಹಿಕ ಚಟುವಟಿಕೆಗಳು ಇರುತ್ತವೆಯೆ?*

**ಶ್ರೀಮಾತೆ:** ಯಾವುದೂ ಒತ್ತಾಯಪೂರ್ವಕ ಎನಿಸುವಂತಹದಿರುವುದಿಲ್ಲ.

**12. ಪ್ರಶ್ನೆ:** *ಅರೋವಿಲೆಯಲ್ಲಿ ಹಣವನ್ನು ಉಪಯೋಗಿಸಲಾಗುವುದೆ?*

**ಶ್ರೀಮಾತೆ:** ಇಲ್ಲ, ಅರೋವಿಲೆ ಹೊರಗಿನ ಜಗತ್ತಿನೊಂದಿಗೆ ಮಾತ್ರ ಹಣದ ಸಂಬಂಧಗಳನ್ನಿರಿಸಿಕೊಂಡಿರುತ್ತದೆ.

**13. ಪ್ರಶ್ನೆ:** *ಅರೋವಿಲೆಯಲ್ಲಿ ಕಾರ್ಯವನ್ನು ಹೇಗೆ ಸಂಘಟಿಸಲಾಗುತ್ತದೆ ಹಾಗೂ ಹಂಚಲಾಗುತ್ತದೆ?*

**ಶ್ರೀಮಾತೆ:** ಇನ್ನು ಮುಂದೆ ಹಣ ಸಾರ್ವಭೌಮ ಪ್ರಭುವಾಗಿರುವುದಿಲ್ಲ. ಪ್ರಾಪಂಚಿಕ ಸಂಪತ್ತಿಗಿಂತ, ಹಾಗೂ ಸಾಮಾಜಿಕ ಸ್ಥಾನಮಾನಕ್ಕಿಂತ ವ್ಯಕ್ತಿಯ ಯೋಗ್ಯತೆಗೆ ಬಹಳ ಹೆಚ್ಚಿನ ಮಹತ್ವವಿರುತ್ತದೆ. ಅಲ್ಲಿ ಕಾರ್ಯ ಮನುಷ್ಯ ತನ್ನ ಜೀವನಕ್ಕಾಗಿ ಹಣ ಗಳಿಸುವುದಿರುವುದಿಲ್ಲ, ಆದರೆ ಅದು ಅವನನ್ನು ಅಭಿವ್ಯಕ್ತಗೊಳಿಸುವ ಹಾಗೂ ಅವನ ಕ್ಷಮತೆಗಳನ್ನು ಮತ್ತು ಸಾಧ್ಯತೆಗಳನ್ನು ಅಭಿವೃದ್ಧಿಗೊಳಿಸುವ ಒಂದು ರೀತಿಯಾಗಿರುತ್ತದೆ, ಅದೇ ವೇಳೆಗೆ ಇಡೀ ಸಮುದಾಯಕ್ಕೆ ಅವನ ಸೇವೆಯ ಕಾರ್ಯ ನಡೆದಿರುತ್ತದೆ. ಆ ಸಮುದಾಯ ತನ್ನ ವತಿಯಿಂದ ವ್ಯಕ್ತಿಯ ಉಪ–ಜೀವನಕ್ಕೆ ಹಾಗೂ ಕ್ರಿಯೆಯ ಗೋಲಕ್ಕೆ ಅವಕಾಶವನ್ನೊದಗಿಸುತ್ತದೆ.

**14. ಪ್ರಶ್ನೆ:** *ಅರೋವಿಲೆಯ ನಿವಾಸಿಗಳು ಹಾಗೂ ಬಾಹ್ಯ ಜಗತ್ತಿನಲ್ಲಿರುವವರು ಇವರ ನಡುವೆ ಸಂಬಂಧಗಳು ಯಾವ ರೀತಿಯವಾಗಿರುತ್ತವೆ?*

**ಶ್ರೀಮಾತೆ:** ಪ್ರತಿಯೊಬ್ಬ ವ್ಯಕ್ತಿ ಪೂರ್ತಿ ಸ್ವತಂತ್ರನಾಗಿರುವುದಕ್ಕೆ ಅನುವು ಮಾಡಿಕೊಡಲಾಗಿರುತ್ತದೆ. ಅರೋವಿಲೆಯಲ್ಲಿ ವಾಸಿಸುವವರ ಬಾಹ್ಯ ಸಂಬಂಧಗಳು ಪ್ರತಿಯೊಬ್ಬನಿಗೂ ಅವನ ವೈಯಕ್ತಿಕ ಅಭೀಪ್ಸೆಗಳು ಹಾಗೂ ಅರೋವಿಲೆಯ ಒಳಗೆ ಅವನ ಚಟುವಟಿಕೆಗಳು ಇವುಗಳಿಗನುಗುಣವಾಗಿ ಸ್ಥಾಪಿತಗೊಂಡಿರುತ್ತವೆ.

**15. ಪ್ರಶ್ನೆ:** *ಅರೋವಿಲೆಯ ಸ್ಥಳವನ್ನು ಹಾಗೂ ಕಟ್ಟಡಗಳನ್ನು ಯಾರು ವಶದಲ್ಲಿಟ್ಟುಕೊಂಡಿರುತ್ತಾರೆ?*

**ಶ್ರೀಮಾತೆ:** ಪರಮೋಚ್ಚ ದೈವೀ ಪ್ರಭು.

**CWM, 13/188–90** **- ಶ್ರೀಮಾತೆ**

*

**ಒಂದು ಆದರ್ಶ ನಗರ**

ಬಹಳ ಕಾಲದವರೆಗೆ 'ಆದರ್ಶ ನಗರ'ದ ಒಂದು ಯೋಜನೆ ನನ್ನಲ್ಲಿತ್ತು. ಆದರೆ ಅದು ಶ್ರೀ ಅರವಿಂದರ ಜೀವನ ಕಾಲದಲ್ಲಿತ್ತು, ಅವರು ಅದರ ಕೇಂದ್ರದಲ್ಲಿರುತ್ತಿದ್ದರು. ನಂತರ ಅದರ ಬಗ್ಗೆ ನಾನು ಆಸಕ್ತಿ ಉಳಿಸಿಕೊಂಡಿರಲಿಲ್ಲ. ಆಗ ಅರೋವಿಲೆಯ – ನಾನು ಅರೋವಿಲೆ ಎಂಬ ಹೆಸರನ್ನು ಕೊಟ್ಟಿದ್ದೆ – ವಿಚಾರವನ್ನು ಮತ್ತೆ ಕೈಗೆತ್ತಿಕೊಳ್ಳಲಾಯಿತು, ಆದರೆ ಅದು ಇನ್ನೊಂದು ತುದಿಯಿಂದ ಬಂದಿತ್ತು: ರೂಪ ತಾಳುವಿಕೆ ತನ್ನ ಸ್ಥಳವನ್ನು ಹುಡುಕಿಕೊಳ್ಳುವುದರ ಬದಲಾಗಿ ಕೆರೆಯ ಹತ್ತಿರವಿರುವ ಆ ಸ್ಥಳವೇ ರೂಪತಾಳುವಿಕೆಗೆ ಜನ್ಮ ನೀಡಿತು, ಮತ್ತು ಇಲ್ಲಿಯವರೆಗೆ ಅದರಲ್ಲಿ ಬಹಳ ಕಡಿಮೆ ಆಸಕ್ತಿಯನ್ನು ಹೊಂದಿದ್ದೆ, ಏಕೆಂದರೆ ನಾನು ಏನನ್ನೂ ನೇರವಾಗಿ ಸ್ವೀಕರಿಸಿರಲಿಲ್ಲ. ಆಗ ನಮ್ಮ ಚಿಕ್ಕ A ಕೆರೆಯ ಬಳಿ ತನಗಾಗಿ ಒಂದು ಮನೆ ಹೊಂದುವುದನ್ನು ಹಾಗೂ ಅದರ ಪಕ್ಕಕ್ಕಿರುವ ಮನೆಯನ್ನು ನನಗೆ ಅರ್ಪಿಸುವುದನ್ನು ಕುರಿತು ತನ್ನ ತಲೆಯಲ್ಲಿ ಯೋಚನೆಯನ್ನಿರಿಸಿಕೊಂಡಿದ್ದಳು. ಅವಳು ತನ್ನ ಎಲ್ಲ ಕನಸುಗಳನ್ನು ಕುರಿತು ನನಗೆ ಪತ್ರ ಬರೆದಳು: ಅದರಲ್ಲಿಯ ಒಂದೆರಡು ವಾಕ್ಯಗಳು ಹಠಾತ್ತನೆ

ಪ್ರಕಟವಾಗಲು ಬಯಸುತ್ತಿದ್ದ ಏನೋ ಒಂದರ ನೆನಪನ್ನು ಅಲುಗಾಡಿಸಿದವು. ಆ ಏನೋ ಒಂದು ಸೃಷ್ಟಿಯೊಂದನ್ನು ಕುರಿತಾಗಿತ್ತು, ನಾನು ಬಹಳ ಚಿಕ್ಕವಳಾಗಿದ್ದಾಗ ಹಾಗೂ ಥಿಯೋನ್‌ನ ಹತ್ತಿರ ಇದ್ದಾಗ, ಆ ಶತಮಾನ ಪ್ರಾರಂಭವಾಗುತ್ತಿದ್ದಾಗ ಅದು ಮತ್ತೆ ಪ್ರಕಟವಾಗುವ ಪ್ರಯತ್ನವನ್ನು ಪ್ರಾರಂಭಿಸಿತ್ತು. ನಂತರ ಎಲ್ಲವನ್ನೂ ಮರೆತು ಬಿಡಲಾಗಿತ್ತು. ಈ ಪತ್ರದೊಂದಿಗೆ ಅದು ಮರಳಿ ಬಂದಿತು; ಒಮ್ಮಿಂದೊಮ್ಮೆಗೆ ಅರೋವಿಲೆಗಾಗಿ ನನ್ನ ಯೋಜನೆ ನನ್ನಲ್ಲಿತ್ತು.

**CWM, 13/251–52** **- ಶ್ರೀಮಾತೆ**

*

**ಮುಂಚಿನ ಒಂದು ರೂಪತಾಳುವಿಕೆ**

ನಾನು ಕೈಕೊಂಡಿದ್ದ ಆ ಹಳೆಯ ರೂಪ ತಾಳುವಿಕೆಯಲ್ಲಿ ಒಂದು ಗುಡ್ಡ ಹಾಗೂ ಒಂದು ನದಿ ಇರುವುದಿತ್ತು. ಅಲ್ಲಿ ಒಂದು ಗುಡ್ಡ ಬೇಕಾಗಿತ್ತು, ಏಕೆಂದರೆ ಶ್ರೀ ಅರವಿಂದರ ಮನೆ ಆ ಗುಡ್ಡದ ತುದಿಯ ಮೇಲಿತ್ತು, ಆದರೆ ಅಲ್ಲಿ ಶ್ರೀ ಅರವಿಂದರು ಕೇಂದ್ರ ಸ್ಥಳದಲ್ಲಿದ್ದರು. ಅದನ್ನು ನನ್ನ ಸಂಕೇತದ ಯೋಜನೆಗೆ ಅನುಗುಣವಾಗಿ ವ್ಯವಸ್ಥೆಗೆ ಒಳಪಡಿಸಲಾಗಿತ್ತು, ಎಂದರೆ ಶ್ರೀ ಅರವಿಂದರು ಹಾಗೂ ಅವರ ಜೀವನಕ್ಕೆ ಸಂಬಂಧಿಸಿದ ಎಲ್ಲದರೊಂದಿಗೆ ಮಧ್ಯದಲ್ಲಿ ಒಂದು ಬಿಂದು ಹಾಗೂ ನಾಲ್ಕು ದೊಡ್ಡ ಪಕಳೆಗಳು – ಅವು ಈ ಚಿತ್ರದಲ್ಲಿದ್ದ ಹಾಗೇ ಇರಲಿಲ್ಲ, ಅದು ಬೇರೆ ಏನೋ ಒಂದಾಗಿತ್ತು – ಮತ್ತು ಸುತ್ತಲೆಲ್ಲ ಹನ್ನೆರಡು ಪಕಳೆಗಳು, ಅವುಗಳಲ್ಲಿ ಆ ನಗರವೇ ಸ್ವತಃ ಇತ್ತು ಮತ್ತು ಅದರ ಸುತ್ತ ಅಲ್ಲಿ ಅನುಯಾಯಿಗಳ ಮನೆಗಳಿದ್ದವು, ನಿಮಗೆ ನನ್ನ ಸಂಕೇತದ ಬಗ್ಗೆ ತಿಳಿದಿದೆ. ಅಲ್ಲಿ ಗೆರೆಗಳ ಬದಲಾಗಿ ಪಟ್ಟಿಗಳಿವೆ; ಸರಿ, ಕೊನೆಯ ವೃತ್ತಾಕಾರದ ಪಟ್ಟಿ ಅನುಯಾಯಿಗಳ ವಾಸ ಸ್ಥಳಗಳಿಗಾಗಿತ್ತು ಮತ್ತು ಪ್ರತಿಯೊಬ್ಬನಿಗೂ ಅವನದೇ ಮನೆ ಹಾಗೂ ತೋಟ ಇದ್ದವು – ಪ್ರತಿಯೊಬ್ಬನಿಗೂ ಒಂದು ಚಿಕ್ಕ ಮನೆ ಹಾಗೂ ತೋಟ. ಅಲ್ಲಿ ಒಂದು ಬಗೆಯ ವಾಹನ ಸೌಕರ್ಯವಿತ್ತು, ಅದು ವೈಯಕ್ತಿಕವಾಗಿತ್ತೋ ಇಲ್ಲವೆ ಸಾಮೂಹಿಕವಾಗಿತ್ತೋ ಎಂಬುದರ ಬಗ್ಗೆ ನನಗೆ ನಿಶ್ಚಿತತೆಯಿಲ್ಲ – ಪರ್ವತಗಳ ಮೇಲೆ ಎಲ್ಲ ದಿಕ್ಕುಗಳಲ್ಲಿ ಸಂಚರಿಸಬಲ್ಲ ಟ್ರಾಮ ಕಾರಿನ ರೀತಿಯದು – ಆ ಸೌಕರ್ಯ ಅನುಯಾಯಿಗಳನ್ನು ಎಲ್ಲ ದಿಕ್ಕುಗಳಲ್ಲಿ ಕರೆದುಕೊಂಡು ಹೋಗಿ ಮರಳಿ ಆ ನಗರದ ಮಧ್ಯೆ ತಂದು ಬಿಡುವುದಕ್ಕಾಗಿತ್ತು.

ಅದೆಲ್ಲದರ ಸುತ್ತ ಒಂದು ಗೋಡೆಯಿತ್ತು ಅದು ಒಂದು ಪ್ರವೇಶ ದ್ವಾರವನ್ನು ಹೊಂದಿತ್ತು, ದ್ವಾರದ ಬಳಿ ರಕ್ಷಕರಿರುತ್ತಿದ್ದರು. ಅನುಮತಿ ದೊರಕಿಸದೆ ಒಳಗೆ ಯಾರೂ ಬರುವಂತಿರಲಿಲ್ಲ. ಗೋಡೆಗಳ ಮಧ್ಯೆ ಹಣವಿರಲಿಲ್ಲ. ಬೇರೆ ಬೇರೆ ಪ್ರವೇಶ ದ್ವಾರಗಳ ಬಳಿ ಬ್ಯಾಂಕುಗಳು ಇಲ್ಲವೆ ಒಂದು ಬಗೆಯ ದುಡ್ಡೆಣಿಸುವ ಯಾವುದೇ ವಹಿವಾಟಿನ ಮೇಜುಗಳು ಇರುತ್ತಿದ್ದವು. ಅಲ್ಲಿ ಜನರು ತಮ್ಮ ಹಣವನ್ನು ಜಮೆ ಮಾಡಿ ಪ್ರತಿಯಾಗಿ ಟಿಕೆಟುಗಳನ್ನು ದೊರಕಿಸಬಹುದಾಗಿತ್ತು, ಆ ರಸೀದಿಗಳೊಂದಿಗೆ ವಾಸ ಸ್ಥಳ, ಊಟ, ಅದು ಇದು ಇತ್ಯಾದಿಗಳನ್ನು ದೊರಕಿಸಬಹುದಾಗಿತ್ತು, ಆದರೆ ಹಣವಿಲ್ಲ. ಟಿಕೀಟುಗಳು ಕೇವಲ ಭೇಟಿ ನೀಡುವವರಿಗಾಗಿದ್ದವು, ಅವರು ಅನುಮತಿಯಿಲ್ಲದೆ ಒಳಗೆ ಪ್ರವೇಶ ಮಾಡಲಾಗುತ್ತಿರಲಿಲ್ಲ. ಅದು ಭಯವಿಸ್ಮಿತಗೊಳಿಸುವ ಸಂಘಟನೆಯಾಗಿತ್ತು. ಹಣವಿಲ್ಲ, ನನಗೆ ಹಣ ಬೇಕಾಗಿರಲಿಲ್ಲ.

**CWM, 13/188** **- ಶ್ರೀಮಾತೆ**

*

**ಪ್ರಶ್ನೆ:** *ಅನುಯಾಯಿಗಳು ಆಶ್ರಮದಲ್ಲಿಯೇ ಉಳಿದುಕೊಳ್ಳುವರೇ?*

**ಶ್ರೀಮಾತೆ:** ಅಹಾ! ಆಶ್ರಮ ಇಲ್ಲೇ ಉಳಿದುಕೊಳ್ಳುತ್ತದೆ – ನಾನಿಲ್ಲಿ ಉಳಿದುಕೊಳ್ಳುತ್ತೇನೆ. ಅದನ್ನು ಅರ್ಥಮಾಡಿಕೊಳ್ಳಲಾಗಿದೆ. ಅರೋವಿಲೆಯು ...

**ಪ್ರಶ್ನೆ:** *ಸಂಪರ್ಕ ಸಾಧನ (satellite) ಆಗಿರುತ್ತದೆಯೆ?*

**ಶ್ರೀಮಾತೆ:** ಹೌದು, ಅದು ಬಾಹ್ಯ ಜಗತ್ತಿನೊಡನೆ ಸಂಪರ್ಕ ಸಾಧನವಾಗಿದೆ. ನನ್ನ ಚಿತ್ರದ ಮೇಲಿರುವ ಕೇಂದ್ರ ಸಾಂಕೇತಿಕ ಕೇಂದ್ರವಾಗಿದೆ.

**ಪ್ರಶ್ನೆ:** *ಸ್ವಲ್ಪದರಲ್ಲಿ ಹೇಳುವುದಾದರೆ ಅರೋವಿಲೆ ಬಾಹ್ಯದ ಸಲುವಾಗಿ ಇದೆಯೆ?*

**ಶ್ರೀಮಾತೆ:** ಹೌದು! ಅದೊಂದು ನಗರ! ಪರಿಣಾಮವಾಗಿ ಅದು ಬಾಹ್ಯದೊಡನೆ ಇಡಿಯಾಗಿ ಸಂಪರ್ಕದಲ್ಲಿರುವುದಾಗಿದೆ. ಪೃಥ್ವಿಯ ಮೇಲೆ ಹೆಚ್ಚಿನ ಆದರ್ಶವಿರುವ ಜೀವನವೊಂದನ್ನು ಸಿದ್ಧಿಸಿಕೊಳ್ಳುವ ಪ್ರಯತ್ನಕ್ಕಾಗಿ ಅದಿದೆ.

**CWM, 13/256** **- ಶ್ರೀಮಾತೆ**

*

## ನಾಳಿನ ದಿನಗಳಿಗಾಗಿ ಆಹಾರವನ್ನು ಶೋಧಿಸುವುದು

ಕೆಲವು ವಿಷಯಗಳು ನಿಜವಾಗಿ ಸ್ವಾರಸ್ಯಕರವಾಗಿರುತ್ತವೆ: ಮೊಟ್ಟಮೊದಲು, ಉದಾಹರಣೆಗಾಗಿ, ಪ್ರತಿಯೊಂದು ದೇಶ ಅದರ ಡೇರೆ (pavilian) ಹೊಂದಿರಬೇಕು. ಆ ಡೇರೆ ಆ ದೇಶದ ಆಹಾರ ತಯಾರಿಸುವುದಕ್ಕಾಗಿರುತ್ತದೆ, ಎಂದರೆ ಜಪಾನೀಯರು ಬಯಸಿದರೆ ತಮ್ಮ ದೇಶದ ಆಹಾರವನ್ನು ತಿನ್ನಲು ಶಕ್ತರಾಗಿರುತ್ತಾರೆ ಇತ್ಯಾದಿ. ಆದರೆ ನಗರದಲ್ಲಿಯೇ ಸ್ವತಃ ಶಾಕಾಹಾರಿಗಳಿಗಾಗಿ ಹಾಗೂ ಮಾಂಸಾಹಾರಿಗಳಿಗಾಗಿ ಆಹಾರ ದೊರೆಯುತ್ತದೆ ಮತ್ತು ಅಲ್ಲಿ ನಾಳಿನ ದಿನಗಳಿಗಾಗಿ ಆಹಾರವನ್ನು ಕಂಡುಕೊಳ್ಳುವ ಪ್ರಯತ್ನವೂ ಇರುತ್ತದೆ.

ನಿಮ್ಮನ್ನು ಭಾರಕ್ಕೊಳಪಡಿಸುವಂತಹ ಜೀರ್ಣಿಸಿಕೊಳ್ಳುವ ಇಡೀ ವಿಧಾನ – ಅದು ವ್ಯಕ್ತಿಯ ಎಷ್ಟೊಂದು ಸಮಯವನ್ನು ಹಾಗೂ ಚೈತನ್ಯವನ್ನು ತೆಗೆದುಕೊಳ್ಳುತ್ತದೆ – ಆದನ್ನು ಮೊದಲು ಕೈಕೊಳ್ಳಬೇಕು, ಈಗ ತಯಾರಿಸುತ್ತಿರುವ ವಸ್ತುಗಳಂತಹ ಕೂಡಲೆ ಜೀರ್ಣವಾಗುವ ಏನೋ ಒಂದನ್ನು ನಿಮಗೆ ಕೊಡಬೇಕು; ಉದಾಹರಣೆಗೆ ಅವರಲ್ಲಿ ವ್ಹಿಟಾಮಿನ್ ಹಾಗೂ ಪ್ರೋಟೀನ್ ಗುಳಿಗೆಗಳಿವೆ, ಅವುಗಳನ್ನು ನೇರವಾಗಿ ಜೀರ್ಣಿಸಿಕೊಳ್ಳಬಹುದು, ಅವು ಪೋಷಕಾಂಶಗಳಾಗಿದ್ದು ಒಂದಿಲ್ಲೊಂದು ವಸ್ತುವಿನಲ್ಲಿ ದೊರಕುತ್ತವೆ, ಅವುಗಳಿಗೆ ದೊಡ್ಡ ಜಾಗ ಬೇಕಾಗಿರುವುದಿಲ್ಲ. – ಅತ್ಯಲ್ಪವಾದದ್ದನ್ನು ಜೀರ್ಣಿಸಿಕೊಳ್ಳುವುದಕ್ಕೆ ದೊಡ್ಡ ಪ್ರಮಾಣದ ವಸ್ತು ಬೇಕಾಗಿರುತ್ತದೆ. ಈಗ ಅವರು ರಸಾಯನ ಶಾಸ್ತ್ರದಲ್ಲಿ ಸಾಕಷ್ಟು ಪರಿಣತರಾಗಿದ್ದಾರೆ, ಅದನ್ನು ಸರಳೀಕರಿಸಬಹುದು.

ಸರಳವಾಗಿ ಇದು ಜನರಿಗೆ ಇಷ್ಟವಾಗುವುದಿಲ್ಲ, ಏಕೆಂದರೆ ಅವರು ತಿನ್ನುವುದರಲ್ಲಿ ಗಾಢ ಸಂತೋಷ ಕಂಡುಕೊಳ್ಳುತ್ತಾರೆ, ತಿನ್ನುವುದರಲ್ಲಿ ಸಂತೋಷ ಕಂಡುಕೊಳ್ಳುವುದನ್ನು ಬಿಟ್ಟುಕೊಟ್ಟಾಗ, ಸಮಯ ಹಾಳುಮಾಡದೆ ನಿಮಗೆ ಪೋಷಕಾಂಶ ದೊರಕಿಸುವ ಆವಶ್ಯಕತೆ ಇನ್ನೂ ಇರುತ್ತದೆ. ತಿನ್ನುವುದಕ್ಕಾಗಿ, ಜೀರ್ಣಿಸುವುದಕ್ಕಾಗಿ ಹಾಗೂ ಇತರ ಕಾರ್ಯಗಳಿಗಾಗಿ ಬಹಳಷ್ಟು ಸಮಯವನ್ನು ಜನರು ಹಾಳುಮಾಡುತ್ತಾರೆ. ಅಲ್ಲಿ ಒಂದು ಪ್ರಾಯೋಗಿಕ ಪಾಕಶಾಲೆ, ಪ್ರಯೋಗ ಕೈಕೊಳ್ಳುವುದಕ್ಕಾಗಿ ಪಾಕಶಾಲೆಯ ಒಂದು ಪ್ರಯೋಗಶಾಲೆ ಇರುವುದನ್ನು ನಾನು

ಇಷ್ಟಪಡುತ್ತೇನೆ. ಜನರು ಒಂದು ಇಲ್ಲವೆ ಇನ್ನೊಂದು ಸ್ಥಳಕ್ಕೆ ಅವರ ರುಚಿಗಳು ಹಾಗೂ ಒಲವುಗಳಿಗನುಗುಣವಾಗಿ ಹೋಗುತ್ತಾರೆ.

**CWM, 13/263** **- ಶ್ರೀಮಾತೆ**

*

**ಒಂದು ಹೊಸ ಬಗೆಯ ಜೀವನದ ರೀತಿಗಾಗಿ ಅಭ್ಯಾಸ ಹಾಗೂ ಶೋಧ**

ಅವರು ತಮ್ಮ ಆಹಾರಕ್ಕಾಗಿ ಹಣ ಕೊಡುವುದಿಲ್ಲ, ಆದರೆ ಅವರು ತಮ್ಮ ಕಾರ್ಯವನ್ನು ಇಲ್ಲವೆ ಉತ್ಪಾದನೆಯನ್ನು ಅರ್ಪಿಸಬೇಕು, ಉದಾಹರಣೆಗೆ ಹೊಲಗಳನ್ನು ಹೊಂದಿದವರು ಅವುಗಳಿಂದ ಬರುವ ಉತ್ಪಾದನೆಯನ್ನು ಕೊಡಬೇಕು, ಕಾರ್ಖಾನೆ (factory)ಗಳನ್ನು ಹೊಂದಿದವರು ಅವುಗಳಿಂದ ಬರುವ ಉತ್ಪಾದನೆಗಳನ್ನು ಕೊಡಬೇಕು, ಇಲ್ಲವೆ ಮನುಷ್ಯ ಆಹಾರಕ್ಕಾಗಿ ವಿನಿಮಯ ರೂಪದಲ್ಲಿ ತನ್ನ ಶ್ರಮವನ್ನು ಕೊಡಬೇಕು.

ಅದೇ ಸ್ವತಃ ಹಣದ ಆಂತರಿಕ ವಿನಿಮಯವನ್ನು ಬಹಳಷ್ಟು ಮಟ್ಟಿಗೆ ತೆಗೆದುಹಾಕುತ್ತದೆ ಮತ್ತು ಪ್ರತಿಯೊಂದಕ್ಕೂ ನಾವು ಈ ರೀತಿಯ ವಸ್ತು–ವಿಷಯಗಳನ್ನು ಕಂಡುಕೊಳ್ಳಬಹುದು. ಮೂಲಭೂತವಾಗಿ ಅದು ಅಭ್ಯಾಸ ಹಾಗೂ ಶೋಧಕ್ಕಾಗಿರುವ ಒಂದು ನಗರವಾಗಬೇಕು; ಅದನ್ನು ಜೀವನದ ರೀತಿಯನ್ನು ಸರಳಗೊಳಿಸುವುದಕ್ಕಾಗಿ ಹಾಗೂ ಉಚ್ಚಮಟ್ಟದ ಗುಣಲಕ್ಷಣಗಳನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ ಹೆಚ್ಚು ಸಮಯ ದೊರಕಿಸಲು ಕೈಕೊಳ್ಳಬೇಕಾಗಿರುತ್ತದೆ.

ಅದು ಕೇವಲ ಒಂದು ಚಿಕ್ಕ ಪ್ರಾರಂಭ...

ಅದು ಒಂದು ಪ್ರಯೋಗಕ್ಕಾಗಿ ಇದೆ ಎಂಬ ವಾಸ್ತವತೆಯ ಮೇಲೆ ನಾನು ಒತ್ತುಕೊಡಲು ಬಯಸುತ್ತೇನೆ, ಅದು ಪ್ರಯೋಗಗಳನ್ನು ಕೈಕೊಳ್ಳುವುದಕ್ಕಾಗಿದೆ – ಪ್ರಯೋಗಗಳು, ಶೋಧ, ಅಭ್ಯಾಸ.

**CWM, 13/263–64** **- ಶ್ರೀಮಾತೆ**

*

## ಸಾಧನಕ್ಕನುಗುಣವಾಗಿ ವ್ಯಕ್ತಿಯ ಪಾಲುಗೊಳ್ಳುವಿಕೆ

**ಪ್ರಶ್ನೆ:** *ಅಲ್ಲಿ ಜೀವಿಸುವವರೆಲ್ಲ ಅದರ ಜೀವನದಲ್ಲಿ ಹಾಗೂ ಅಭಿವೃದ್ಧಿಯಲ್ಲಿ ಪಾಲುಗೊಳ್ಳುತ್ತಾರೆ.*

**ಶ್ರೀಮಾತೆ:** ಅಲ್ಲಿ ಜೀವಿಸುವವರೆಲ್ಲ ತಮ್ಮ ಕ್ಷಮತೆಗಳಿಗನುಗುಣವಾಗಿ ಹಾಗೂ ಸಾಧನಗಳಿಗನುಗುಣವಾಗಿ ಅದರ ಜೀವನದಲ್ಲಿ ಹಾಗೂ ಅಭಿವೃದ್ಧಿಯಲ್ಲಿ ಪಾಲುಗೊಳ್ಳುತ್ತಾರೆ – ಒಬ್ಬರಿಗೆ ಇಷ್ಟು ಎನ್ನುವ ಯಾಂತ್ರಿಕ ರೂಪದಲ್ಲಲ್ಲ. ಅದೇ ಅದು, ಅದು ಜೀವಂತವಿರುವ ಹಾಗೂ ಸತ್ಯವಾಗಿರುವ ಏನೋ ಒಂದಾಗಿರಬೇಕು, ಯಾಂತ್ರಿಕ ವಿಷಯವಾಗಿರಬಾರದು; ಹಾಗೂ ಪ್ರತಿಯೊಬ್ಬನ ಕ್ಷಮತೆಗನುಗುಣವಾಗಿ ಇರಬೇಕು: ಎಂದರೆ ಪ್ರಾಪಂಚಿಕ ಸಾಧನವನ್ನು ಹೊಂದಿದವನು. ಕಾರ್ಖಾನೆ–ಯೊಂದನ್ನು ಹೊಂದಿದವನು ಅದರಿಂದ ಬರುವ ಉತ್ಪಾದನೆಯ ಪ್ರಮಾಣಕ್ಕನು–ಸಾರವಾಗಿ ಕೊಡಬೇಕು, ತಲೆಗಿಷ್ಟು, ವ್ಯಕ್ತಿಗಿಷ್ಟು ಎನ್ನುವ ರೀತಿಯಲ್ಲಲ್ಲ.

**ಪ್ರಶ್ನೆ:** *"ಭಾಗವಹಿಸುವಿಕೆ ನಿಷ್ಕ್ರಿಯ ರೂಪದ್ದಾಗಿರಬಹುದು ಇಲ್ಲವೆ ಸಕ್ರಿಯ–ದ್ದಾಗಿರಬಹುದು."*

*ಜಾಣರಾದವರು, ಅಂತರಂಗದಲ್ಲಿ ಕಾರ್ಯ ಕೈಕೊಳ್ಳುವವರು ಬಾಹ್ಯ ಕ್ರಿಯೆಯಲ್ಲಿ ತೊಡಗಿಕೊಳ್ಳುವ ಆವಶ್ಯಕತೆ ಇಲ್ಲ ಎಂದು ನೀವು ಹೇಳುತ್ತಿರುವುದರ ಅರ್ಥವಾಗಿದೆಯೆ?*

**ಶ್ರೀಮಾತೆ:** ಹೌದು, ಅದೇ ಅದು. ಉಚ್ಚತರ ಜ್ಞಾನವಿದ್ದವರು ತಮ್ಮ ಕೈಗಳಿಂದ ಕಾರ್ಯ ಮಾಡುವ ಆವಶ್ಯಕತೆ ಇರುವುದಿಲ್ಲ, ನಾನು ಹೇಳಿದುದರ ಅರ್ಥ ಅದೇ ಆಗಿತ್ತು.

**ಪ್ರಶ್ನೆ:** *ಕರಗಳನ್ನು ಕೊಡುವುದಿರುವುದಿಲ್ಲ, ಆದರೆ ಪ್ರತಿಯೊಬ್ಬನು ಕಾರ್ಯದಲ್ಲಿ ಸಾಮೂಹಿಕ ಯೋಗಕ್ಷೇಮಕ್ಕಾಗಿ ಕಾರ್ಯರೂಪದಲ್ಲಿ, ಒಂದು ಬಗೆಯಲ್ಲಿ ಇಲ್ಲವೆ ಹಣದ ರೂಪದಲ್ಲಿ ನೆರವು ನೀಡುತ್ತಾನೆ.*

**ಶ್ರೀಮಾತೆ:** ಹೀಗೆ ಅದು ಸ್ಪಷ್ಟವಾಗಿದೆ: ಅಲ್ಲಿ ಕರಕೊಡುವುದಿರುವುದಿಲ್ಲ, ಆದರೆ ಪ್ರತಿಯೊಬ್ಬನು ತನ್ನ ಕಾರ್ಯದ ಮೂಲಕ ಒಂದು ಬಗೆಯಲ್ಲಿ ಇಲ್ಲವೆ ಹಣದ ರೂಪದಲ್ಲಿ ಸಾಮೂಹಿಕ ಯೋಗಕ್ಷೇಮಕ್ಕೆ ನೆರವು ನೀಡುತ್ತಾನೆ. ಕೇವಲ

ಹಣವನ್ನಿಟ್ಟುಕೊಂಡವನು ಹಣವನ್ನು ಕೊಡುತ್ತಾನೆ. ಆದರೆ ಸತ್ಯ ಹೇಳುವುದಾದರೆ 'ಕಾರ್ಯ' ಆಂತರಿಕ ಕಾರ್ಯವಾಗಬಹುದು – ಆದರೆ ಅದನ್ನು ಹೇಳಲಾಗುವುದಿಲ್ಲ, ಏಕೆಂದರೆ ಜನರು ಸಾಕಷ್ಟು ಪ್ರಾಮಾಣಿಕರಾಗಿರುವುದಿಲ್ಲ. ಕಾರ್ಯ ರಹಸ್ಯ–ವಾದದ್ದಾಗಿರಬಹುದು, ಸಂಪೂರ್ಣವಾಗಿ ಆಂತರಿಕವಾದದ್ದಾಗಿರಬಹುದು, ಆದರೆ ಅದಕ್ಕಾಗಿ ಅದು ಸಂಪೂರ್ಣ ನಿಷ್ಕಾಪಟ್ಯದ್ದು ಹಾಗೂ ಸತ್ಯವಾದದ್ದು, ಅದಕ್ಕಾಗಿ ಕ್ಷಮತೆಯುಳ್ಳದ್ದು ಆಗಿರಬೇಕು: ನಟನೆಯಿರಬಾರದು, ಆದರೆ ಅವಶ್ಯವಾಗಿ ಭೌತಿಕ ಕಾರ್ಯವಾಗಿರಬೇಕಿಲ್ಲ.

ಸತ್ಯವಾದದ್ದೇನೆಂದರೆ ಪ್ರಾಪಂಚಿಕವಾಗಿ ಪ್ರತಿಯೊಬ್ಬ ಮಾನವ ಸತ್ತೆಗೆ ಹಕ್ಕಿರುತ್ತದೆ – ಆದರೆ ಅದು ಒಂದು ಹಕ್ಕಲ್ಲ. ಸಂಘಟನೆ ಹೇಗಿರಬೇಕೆಂದರೆ ಹಾಗೂ ಹೇಗೆ ಸಂಘಟನೆಗೆ ಒಳಗಾಗಿರಬೇಕೆಂದರೆ ಪ್ರತಿಯೊಬ್ಬನಿಗೆ ಅವನ ಪ್ರಾಪಂಚಿಕ ಆವಶ್ಯಕತೆಗಳನ್ನು ಪೂರೈಸುವ ನಿಶ್ಚಿತತೆ ಹೊಂದಿರಬೇಕು, ಹಕ್ಕುಗಳು ಹಾಗೂ ಸಮತೆ ಇವುಗಳನ್ನು ಕುರಿತು ಇರುವ ವಿಚಾರಗಳಿಗನುಗುಣವಾಗಿ ಅಲ್ಲ, ಆದರೆ ಕನಿಷ್ಠ ಮಟ್ಟದ ಆವಶ್ಯಕತೆಗಳ ಆಧಾರದ ಮೇಲಾಗಿರಬೇಕು ಮತ್ತು ಒಮ್ಮೆ ಅದು ಸ್ಥಾಪಿತಗೊಂಡ ನಂತರ ಪ್ರತಿಯೊಬ್ಬನು ತನ್ನ ಜೀವನವನ್ನು ಸಂಘಟಿಸಲು ಮುಕ್ತನಾಗಿರಬೇಕು – ಆ ಸಂಘಟನೆ ಆರ್ಥಿಕ ಸಾಧನಗಳ ಮೂಲಕವಲ್ಲ, ಆದರೆ ಅವನ ಆಂತರಿಕ ಕ್ಷಮತೆಗನುಗುಣವಾಗಿ ಇರಬೇಕು.

**CWM, 13/265** **- ಶ್ರೀಮಾತೆ**

*

**ಮನಸ್ಸಿನ ಸ್ಥಾನದಲ್ಲಿ ಆಧ್ಯಾತ್ಮಿಕ ಪ್ರಜ್ಞೆಯನ್ನು ತರುವುದು**

"ಯಾವ ನಿಯಮಗಳನ್ನಾಗಲಿ, ಶಾಸನಗಳನ್ನಾಗಲಿ ರಚಿಸುವುದಿಲ್ಲ. ಕೆಳಗೆ ಅಡಗಿರುವ ನಗರದ ಸತ್ಯ ಹೊರಹೊಮ್ಮುತ್ತಿದ್ದಂತೆ ಹಾಗೂ ಪ್ರಗತಿಪರವಾಗಿ ಆಕಾರ ಪಡೆಯುತ್ತಿದ್ದಂತೆ ವಿಷಯಗಳು ಸೂತ್ರರೂಪಕ್ಕಿಳಿಯುತ್ತವೆ. ನಾವು ನಿರೀಕ್ಷೆಯನ್ನು ಇರಿಸಿಕೊಂಡಿರುವುದಿಲ್ಲ."

ನಾನು ಹೇಳುವುದರ ಅರ್ಥವೆಂದರೆ ಸಾಮಾನ್ಯವಾಗಿ – ಇಲ್ಲಿಯವರೆಗೆ ಯಾವಾಗಲೂ ಮತ್ತು ಈಗ ಹೆಚ್ಚು ಹೆಚ್ಚಾಗಿ ಜನರು ಮಾನಸಿಕ ನಿಯಮಗಳನ್ನು

ಅವರ ಕಲ್ಪನೆಗಳ ಹಾಗೂ ಆದರ್ಶಗಳ ಪ್ರಕಾರ ಇರಿಸುತ್ತ ಬಂದಿದ್ದಾರೆ, ನಂತರ ಅವುಗಳನ್ನು ಅನ್ವಯಿಸುತ್ತಾರೆ (ಶ್ರೀಮಾತೆಯವರು ಜಗತ್ತು ಮನಸ್ಸಿನ ಹಿಡಿತದಲ್ಲಿದೆ ಎಂಬುದನ್ನು ತೋರಿಸುವುದಕ್ಕಾಗಿ ಮುಷ್ಠಿಯನ್ನು ಕೆಳಗೆ ತರುತ್ತಾರೆ), ಅದು ಸಂಪೂರ್ಣವಾಗಿ ಮಿಥ್ಯೆಯದಾಗಿರುತ್ತದೆ, ಸ್ವೇಚ್ಛೆಯದಾಗಿರುತ್ತದೆ, ನೈಜವಲ್ಲದ್ದಾ–ಗಿರುತ್ತದೆ – ಮತ್ತು ಪರಿಣಾಮವಾಗಿ ವಿಷಯಗಳು ಬಂಡಾಯವೇಳುತ್ತವೆ, ಕುಂದಿಹೋಗುತ್ತವೆ ಇಲ್ಲವೆ ಮಾಯವಾಗುತ್ತವೆ... ಅದು ಜೀವನದ ಅನುಭವವೇ ಆಗಿದೆ ಮತ್ತು ಅದು ನಿಧಾನಗತಿಯಲ್ಲಿ ಸಾಧ್ಯವಿದ್ದಷ್ಟು ನಮ್ಯ ಹಾಗೂ ವಿಸ್ತಾರವಾಗಿ–ರುವಂತೆ, ಯಾವಾಗಲೂ ಪ್ರಗತಿಪರವಾಗಿರುವಂತೆ ಅತ್ಯುತ್ತಮವಾಗಿ ಪರಿಷ್ಕರಣೆಗೆ ಒಳಗಾದ ನಿಯಮಗಳಿರಬೇಕು. ಯಾವುದನ್ನೂ ಸ್ಥಿರಗೊಳಿಸಿ ಇಡಬಾರದು.

ಅದೇ ಸರಕಾರಗಳ ದೊಡ್ಡ ದೋಷ; ಅವರು ಆಧಾರಕಟ್ಟನ್ನು (frame work) ಮಾಡುತ್ತಾರೆ ಮತ್ತು "ಅಲ್ಲಿ ನೀವಿದ್ದೀರಿ, ನಾವು ಇದನ್ನು ತಯಾರಿಸಿ ಇಟ್ಟಿದ್ದೇವೆ, ಈಗ ನಾವು ಅದರ ಮೂಲಕ ಜೀವಿಸಬೇಕು" ಎಂದು ಹೇಳುತ್ತಾರೆ ಮತ್ತು ಸಹಜವಾಗಿ ಜೀವನವನ್ನು ಜಜ್ಜುತ್ತಾರೆ ಮತ್ತು ಅದು ಪ್ರಗತಿ ಹೊಂದುವುದನ್ನು ತಡೆಯುತ್ತಾರೆ: ಜೀವನವೇ ಸ್ವತಃ ಹೆಚ್ಚು ಹೆಚ್ಚಾಗಿ ಅಭಿವೃದ್ಧಿ ಹೊಂದಬೇಕು ಆ ಅಭಿವೃದ್ಧಿ ದೈವೀ ಪ್ರಕಾಶದತ್ತ, ದೈವೀ ಜ್ಞಾನದತ್ತ ಹಾಗೂ ದೈವೀ ಸಾಮರ್ಥ್ಯದತ್ತ ಮುನ್ನಡೆಯಬೇಕು; ಸ್ವಲ್ಪ ಸ್ವಲ್ಪವಾಗಿ ಸಾಧ್ಯವಿದ್ದಷ್ಟು ಸರ್ವಸಾಧಾರಣವಾದ ನಿಯಮಗಳನ್ನು ಸ್ಥಾಪಿಸುತ್ತ ಹೋಗಬೇಕು, ಅದರಿಂದಾಗಿ ಅವು ಅತ್ಯಂತ ನಮ್ಯವಾಗುವವು ಮತ್ತು ಆವಶ್ಯಕತೆಯ ಪ್ರಕಾರ ಬದಲಾಗುವವು – ಆವಶ್ಯಕತೆ ಹಾಗೂ ರೂಢಿಗಳಂತೆ ತೀವ್ರಗತಿಯಿಂದ ಬದಲಾಗುವವು.

(ಮೌನ)

ಸಮಸ್ಯೆ ಕೊನೆಗೆ ಕಂಡುಬರುವುದು ಹೀಗಿರುತ್ತದೆ: ಮಾನಸಿಕವಾಗಿ ರಚಿತವಾದ ಸರಕಾರದ ಸ್ಥಾನದಲ್ಲಿ ಆಧ್ಯಾತ್ಮಿಕ ಪ್ರಜ್ಞೆಯುಳ್ಳ ಸರಕಾರವನ್ನು ತರುವುದಾಗಿರುತ್ತದೆ.

**CWM, 13/267** **- ಶ್ರೀಮಾತೆ**

*



**ಹೊಸ ಸೃಷ್ಟಿಯ ಸೌಂದರ್ಯ (ಅರೋವಿಲೆಯ ಸೌಂದರ್ಯ)**

ಹೊಸ ಸೃಷ್ಟಿ ಭಗವಂತನನ್ನು ಹೆಚ್ಚು ಒಳ್ಳೆಯ ರೀತಿಯಲ್ಲಿ ಪ್ರಕಟಿಸಲು ಹೆಣಗುತ್ತದೆ
(ಶ್ರೀಮಾತೆಯವರು ನೀಡಿದ ಆಧ್ಯಾತ್ಮಿಕ ಪ್ರಾಮುಖ್ಯತೆ ಹಾಗೂ ವಿವರಣೆ)

**Botanical Name: Hibiscus rosa-sinensis 'Debble Ann'**

*

ಅರೋವಿಲೆ ಒಂದು ಕನಸೆಂದು ನೀವು ಹೇಳುವಿರಿ. ಹೌದು, ಅದು ದೈವೀ ಪ್ರಭುವಿನ ಒಂದು "ಕನಸು" ಮತ್ತು ಸರ್ವಸಾಧಾರಣವಾಗಿ ಈ "ಕನಸುಗಳು" ನಿಜವಾಗುವಂತೆ ಸಜ್ಜುಗೊಳ್ಳುತ್ತವೆ – ಮಾನವರ ನೈಜತೆಗಳೆಂದು ಕರೆಯ–ಲಾದವುಗಳಿಗಿಂತ ಹೆಚ್ಚು ನೈಜವಾಗಿರುತ್ತವೆ.

**CWM, 13/191** **- ಶ್ರೀಮಾತೆ**

*

# ಅರೋವಿಲೆಯ ಜನ್ಮ

## ಫೆಬ್ರುವರಿ 28, 1968

(ಅರೋವಿಲೆಯ ಪ್ರತಿಷ್ಠಾಪನೆಗಾಗಿ ಸಂದೇಶ)

ಸದ್ಭಾವನೆಯುಳ್ಳ ಎಲ್ಲ ಜನರಿಗೆ ಅರೋವಿಲೆಯಿಂದ ಶುಭಾಶಯಗಳು

ಪ್ರಗತಿಗಾಗಿ ದಾಹವಿದ್ದವರು ಹಾಗೂ ಹೆಚ್ಚು ನಿಜವಾದ ಜೀವನ ಕುರಿತು ಅಭೀಪ್ಸೆಪಡುವವರು ಇವರೆಲ್ಲರನ್ನು ಅರೋವಿಲೆಗೆ ಆಮಂತ್ರಿಸಲಾಗಿದೆ.

**CWM, 13/193** **- ಶ್ರೀಮಾತೆ**

*

**ಅರೋವಿಲೆಯ ಶಾಸನ ಪತ್ರ**

1. ಅರೋವಿಲೆ ಯಾರಿಗೂ ವಿಶೇಷವಾಗಿ ಸೇರಿರುವುದಿಲ್ಲ. ಅರೋವಿಲೆ ಮನುಕುಲಕ್ಕೆ ಇಡಿಯಾಗಿ ಸೇರಿರುತ್ತದೆ.

   ಆದರೆ ಅರೋವಿಲೆಯಲ್ಲಿ ಜೀವಿಸಲು ಮನುಷ್ಯ ದೈವೀ ಪ್ರಜ್ಞೆಗೆ ಇಷ್ಟವಿರುವ ಸೇವಕನಾಗಿರಬೇಕು.

2. ಅರೋವಿಲೆ ಕೊನೆಯಿರದ ಶಿಕ್ಷಣವಿರುವ, ಸತತ ಪ್ರಗತಿ ಸಾಧಿಸುತ್ತಿರುವ ಸ್ಥಳವಾಗಿರುತ್ತದೆ ಮತ್ತು ಮುಪ್ಪಾಗದ ತಾರುಣ್ಯದಿಂದಿರುತ್ತದೆ.

3. ಅರೋವಿಲೆ ಗತಕಾಲ ಹಾಗೂ ಭವಿಷ್ಯತ್ಕಾಲ ಇವುಗಳ ನಡುವೆ ಸೇತುವೆಯಾಗಲು ಬಯಸುತ್ತದೆ.

   ಎಲ್ಲ ಬಾಹ್ಯ ಹಾಗೂ ಆಂತರಿಕ ಶೋಧಗಳ ಅನುಕೂಲತೆ ಪಡೆದು ಅರೋವಿಲೆ ಭವಿಷ್ಯತ್ತಿನ ಸಿದ್ಧಿಗಳತ್ತ ದಿಟ್ಟತನದಿಂದ ನೆಗೆತ ಮಾಡುವುದು.

4. ಅರೋವಿಲೆ ಯಥಾರ್ಥ ಮಾನವ ಏಕತೆಯಿರುವುದರ ಜೀವಂತ ಮೈದಾಳುವಿಕೆಗಾಗಿ ಭೌತಿಕ ಹಾಗೂ ಆಧ್ಯಾತ್ಮಿಕ ಸಂಶೋಧನೆಗಳಿಗಾಗಿ ಒಂದು ಸ್ಥಳವಾಗುವುದು.

**CWM, 13/193** **- ಶ್ರೀಮಾತೆ**

*



**ಹೊಸ ಸೃಷ್ಟಿಯ ಸಿದ್ಧಿ (ಅರೋವಿಲೆಯ ಸಿದ್ಧಿ)**

ಇದಕ್ಕಾಗಿ ನಾವು ತಯಾರು ಮಾಡಿಕೊಳ್ಳಲೇಬೇಕು

(ಶ್ರೀಮಾತೆಯವರು ನೀಡಿದ ಆಧ್ಯಾತ್ಮಿಕ ಪ್ರಾಮುಖ್ಯತೆ ಹಾಗೂ ವಿವರಣೆ)

**Botanical Name: Hibiscus rosa-sinensis 'Vasco'**

*

**ಭಗವಂತನ ಇಷ್ಟವಿರುವ ಸೇವಕನಾಗುವುದು**

ಅರೋವಿಲೆ ಶಾಸನ ಪತ್ರದ ಮೊದಲನೆಯ ಭಾಗ ಕುರಿತು "ಆದರೆ ಅರೋವಿಲೆಯಲ್ಲಿ ಜೀವಿಸಲು ಮನುಷ್ಯ ದೈವೀ ಪ್ರಜ್ಞೆಗೆ (Divine Consciousness) ಇಷ್ಟವಿರುವ ಸೇವಕನಾಗಿರಬೇಕು."

ಅರೋವಿಲೆ ಕುರಿತು ಸದ್ಯದ ಕ್ಷಣದಲ್ಲಿ ಇದು ದೊಡ್ಡ ವಾಗ್ವಾದಕ್ಕೆ ಕಾರಣವಾಗಿದೆ. ಶಾಸನ ಪತ್ರದಲ್ಲಿ ನಾನು "ದೈವೀ ಪ್ರಜ್ಞೆ" ಶಬ್ದವನ್ನಿರಿಸಿದ್ದೇನೆ, ಹಾಗಾಗಿ ಅವರು "ಅದು ನಮಗೆ ದೇವನ ನೆನಪು ತಂದುಕೊಡುತ್ತದೆ" ಎಂದು ಹೇಳುತ್ತಾರೆ. ನಾನು "ಅದು ನನಗೆ ದೇವನ ನೆನಪು ತಂದುಕೊಡುವುದಿಲ್ಲ" (ಶ್ರೀಮಾತೆಯವರು ನಗುತ್ತಾರೆ) ಎಂದು ಹೇಳಿದೆ.

ಹೀಗೆ ಕೆಲವರು ಅದನ್ನು "ಅತ್ಯುಚ್ಚ ಪ್ರಜ್ಞೆ" ಎಂದು ಅನುವಾದ ಮಾಡುತ್ತಾರೆ, ಇತರರು ಮತ್ತೇನೋ ಒಂದರಿಂದ ಗುರುತಿಸುತ್ತಾರೆ.

"ಪರಿಪೂರ್ಣ ಪ್ರಜ್ಞೆ" ಎಂದು ಕರೆದಿದ್ದ ರಶಿಯನ್‌ರಿಗೆ ನಾನು ಒಪ್ಪಿಗೆ ನೀಡಿದೆ. ಆದರೆ ಅದು ಒಂದು ಅಂದಾಜು ಆಗಿತ್ತು... ಮತ್ತು ಅದು – ಅದಕ್ಕೆ ಹೆಸರಿಡಲಾಗುವುದಿಲ್ಲ, ವ್ಯಾಖ್ಯೆ ನೀಡಲಾಗುವುದಿಲ್ಲ... ಪರಮೋಚ್ಚ ಸಾಮರ್ಥ್ಯ. ಆ ದೈವೀ ಸಾಮರ್ಥ್ಯವನ್ನು ಮನುಷ್ಯ ಕಂಡುಕೊಳ್ಳಬಹುದು ಮತ್ತು ಅದು ಪರಮೋಚ್ಚ ಸಾಮರ್ಥ್ಯ, ಕೇವಲ ಒಂದು ಮುಖ: ಅದು ಸೃಷ್ಟಿಗೆ ಸಂಬಂಧಿಸಿದ ಮುಖ.

**CWM, 13/269** **- ಶ್ರೀಮಾತೆ**

*

**ಕೊನೆಗೊಂದು ಸ್ಥಳ: ಭಿನ್ನತೆ ಇರುವ ನಗರ**

ಮನುಷ್ಯ ಕೇವಲ ಪ್ರಗತಿ ಪಡೆಯುವುದನ್ನು, ತನ್ನನ್ನೇ ಮೀರಿಹೋಗುವುದನ್ನು ಕುರಿತು ಯೋಚಿಸಲು ಶಕ್ತನಾಗಲು ಕೊನೆಯ ಒಂದು ಸ್ಥಳ.

ಸಂಘರ್ಷಗಳಿಲ್ಲದ ಹಾಗೂ ದೇಶಗಳ, ಧರ್ಮಗಳ ಹಾಗೂ ಮಹತ್ವಾಕಾಂಕ್ಷೆಗಳ ಪೈಪೋಟಿಯಿಲ್ಲದ, ಮನುಷ್ಯ ಶಾಂತಿಯಿಂದ ಜೀವಿಸಬಹುದಾದ ಕೊನೆಯ ಒಂದು ಸ್ಥಳ.

ತನ್ನದು ಪ್ರತ್ಯೇಕ ಸತ್ಯವೆಂದು ತನ್ನನ್ನು ಹೇರಲು ಯಾವುದಕ್ಕೂ ಹಕ್ಕಿಲ್ಲದ ಕೊನೆಯ ಒಂದು ಸ್ಥಳ.

**CWM, 13/195–96** **- ಶ್ರೀಮಾತೆ**

*

**ಆಶ್ರಮ ಹಾಗೂ ಅರೋವಿಲೆ**

ಆಶ್ರಮ ಕೇಂದ್ರ ಪ್ರಜ್ಞೆಯಿರುವ ಸ್ಥಳವಾಗಿದೆ. ಅರೋವಿಲೆ ಬಾಹ್ಯ ಅಭಿವ್ಯಕ್ತಿಗಳಲ್ಲಿ ಒಂದು. ಎರಡೂ ಸ್ಥಳಗಳಲ್ಲಿ ಕಾರ್ಯವನ್ನು ಭಗವಂತನಿಗಾಗಿ ಕೈಕೊಳ್ಳಲಾಗುತ್ತದೆ.

ಆಶ್ರಮದಲ್ಲಿ ಜೀವಿಸುವವರಿಗೆ ಅವರದೇ ಕಾರ್ಯವಿರುತ್ತದೆ. ಬಹಳಷ್ಟು ಜನರು ಬಹಳ ಕಾರ್ಯಮಗ್ನರಾಗಿರುತ್ತಾರೆ, ಅರೋವಿಲೆಗೆ ಸಮಯ ಕೊಡಲು ಅವರಿಗೆ ಸಾಧ್ಯವಾಗುವುದಿಲ್ಲ.

ಪ್ರತಿಯೊಬ್ಬನೂ ತನ್ನದೇ ಕಾರ್ಯದಲ್ಲಿ ತೊಡಗಿಕೊಂಡಿರಬೇಕು, ಯೋಗ್ಯ ಸಂಘಟನೆಗೆ ಇದು ಅತ್ಯವಶ್ಯವಾದದ್ದು.

**CWM, 13/205** **- ಶ್ರೀಮಾತೆ**

*

**ಪ್ರಶ್ನೆ:** *ಆಶ್ರಮದ ಆದರ್ಶ ಹಾಗೂ ಅರೋವಿಲೆಯ ಆದರ್ಶ ಇವುಗಳ ನಡುವೆ ಇರುವ ಮೂಲಭೂತ ವ್ಯತ್ಯಾಸವೇನು?*

**ಶ್ರೀಮಾತೆ:** ಭವಿಷ್ಯತ್ತನ್ನು ಕುರಿತು ಹಾಗೂ ಭಗವಂತನಿಗೆ ಸೇವೆ ಸಲ್ಲಿಸುವುದನ್ನು ಕುರಿತು ಮನೋಭಾವದಲ್ಲಿ ಯಾವ ಮೂಲಭೂತ ವ್ಯತ್ಯಾಸವಿರುವುದಿಲ್ಲ.

ಆದರೆ ಆಶ್ರಮದಲ್ಲಿರುವ ಜನರು ತಮ್ಮ ಜೀವನಗಳನ್ನು ಯೋಗಕ್ಕಾಗಿ ಮುಡುಪಾಗಿರಿಸಿರುತ್ತಾರೆ ಎಂದು ಪರಿಗಣಿಸಲಾಗಿರುತ್ತದೆ (ಸಹಜವಾಗಿ ವಿದ್ಯಾಭ್ಯಾಸಕ್ಕೆಂದು ಇಲ್ಲಿರುವ ವಿದ್ಯಾರ್ಥಿಗಳನ್ನು ಹೊರತುಪಡಿಸಲಾಗಿರುತ್ತದೆ, ಅವರು ತಮ್ಮ ಜೀವನದಲ್ಲಿ ಆಯ್ಕೆ ಮಾಡಿಕೊಂಡಿರುತ್ತಾರೆ ಎಂದು ನಿರೀಕ್ಷಿಸಲಾಗುವುದಿಲ್ಲ.)

ಅದು ಹಾಗಿರುವಾಗ ಅರೋವಿಲೆಯಲ್ಲಿ ಮನುಕುಲದ ಪ್ರಗತಿಗಾಗಿ ಸಾಮೂಹಿಕ ಪ್ರಯತ್ನ ಕೈಕೊಳ್ಳುವುದಕ್ಕೆ ಸದ್ಭಾವನೆ ಹೊಂದಿದವರು ಅಲ್ಲಿ ಪ್ರವೇಶ ಪಡೆಯಬಹುದು.

**CWM, 13/203–04** **- ಶ್ರೀಮಾತೆ**

*

**ಯುನೆಸ್ಕೊ (UNESCO) ಸಮಿತಿಗಾಗಿ ಬರೆದದ್ದು**

ಶ್ರೀ ಅರವಿಂದರ ದರ್ಶನಕ್ಕೆ ಮೂರ್ತರೂಪ ಕೊಡಲು ಕೈಕೊಳ್ಳಬೇಕಾಗಿದ್ದ ಕಾರ್ಯವನ್ನು ಶ್ರೀಮಾತೆಯವರಿಗೆ ಒಪ್ಪಿಸಿಕೊಡಲಾಗಿತ್ತು. ಹೊಸ ಜಗತ್ತಿನ, ಹೊಸ ಮನುಕುಲದ, ಹೊಸ ಪ್ರಜ್ಞೆಯನ್ನು ಅಭಿವ್ಯಕ್ತಪಡಿಸುವ ಹಾಗೂ ಮೈವೆತ್ತ ಹೊಸ ಸಮಾಜವನ್ನು ಸೃಷ್ಟಿಸುವುದು ಅವರು ಕೈಗೆತ್ತಿಕೊಂಡ ಕಾರ್ಯವಾಗಿದೆ. ವಿಷಯಗಳ ಸ್ವಭಾವದಿಂದಾಗಿಯೇ ಸಾಮೂಹಿಕ ಪ್ರಯತ್ನಕ್ಕೆ ಕರೆಕೊಡುವ ಅದು ಸಾಮೂಹಿಕ ಆದರ್ಶವಾಗಿದೆ, ಅದರಿಂದಾಗಿ ಸಮಗ್ರ ಮಾನವ ಪರಿಪೂರ್ಣತೆಯ ಪರಿಭಾಷೆಯಲ್ಲಿ ಅದನ್ನು ಸಿದ್ಧಿಸಿಕೊಳ್ಳಬಹುದು.

ಈ ಗುರಿಯನ್ನು ಸಿದ್ಧಿಸಿಕೊಳ್ಳುವತ್ತ ಶ್ರೀಮಾತೆಯವರು ಸ್ಥಾಪಿಸಿದ ಹಾಗೂ ನಿರ್ಮಾಣ ಮಾಡಿದ ಆಶ್ರಮ ಮೊದಲ ಹೆಜ್ಜೆಯಾಗಿತ್ತು. ಅರೋವಿಲೆಯ ಯೋಜನೆ ಅದರ ಮುಂದಿನ ಹೆಜ್ಜೆಯಾಗಿತ್ತು, ಅದು ಹೆಚ್ಚು ಬಾಹ್ಯವಾದದ್ದು, ಮನುಕುಲದ ಸಾಮೂಹಿಕ ಜೀವನದಲ್ಲಿ ಜೀವ ಹಾಗೂ ದೇಹ, ಆತ್ಮ ಹಾಗೂ ಸ್ವಭಾವ, ಸ್ವರ್ಗ ಹಾಗೂ ಪೃಥ್ವಿ ಇವುಗಳ ನಡುವೆ ಸಾಮರಸ್ಯವನ್ನು ಸ್ಥಾಪಿಸಲು ಇರುವ ಪ್ರಯತ್ನದ ಆಧಾರವನ್ನು ವಿಸ್ತಾರಗೊಳಿಸುವಂತಹದು.

**CWM, 13/203–04** **- ಶ್ರೀಮಾತೆ**

*

**ಯುನೆಸ್ಕೋಕ್ಕೆ ಒಂದು ಸಂದೇಶ**

ಪೃಥ್ವಿಯ ಮೇಲೆ ಅತಿಮಾನಸ ದೈವೀ ನೈಜತೆಯ ಆಗಮನವನ್ನು ತೀವ್ರಗೊಳಿಸುವುದಕ್ಕಾಗಿ ಅರೋವಿಲೆಯಿದೆ.

ಜಗತ್ತು ಹೇಗಿರಬೇಕೋ ಹಾಗಿಲ್ಲ ಎಂದು ಕಂಡುಕೊಳ್ಳುವ ಜನರ ಸಹಾಯಕ್ಕೆ ಸ್ವಾಗತವಿದೆ.

ಮೃತ್ಯು ಹೊಂದಲು ತಯಾರಾಗುತ್ತಿರುವ ಹಳೆಯ ಜಗತ್ತಿನ ಸಹವಾಸ–ದಲ್ಲಿರುವುದನ್ನು ಬಯಸಬೇಕೋ ಇಲ್ಲವೆ ಜನ್ಮ ತಾಳಲು ತಯಾರಾಗುತ್ತಿರುವ ಹೊಸ, ಹೆಚ್ಚು ಒಳ್ಳೆಯ ಜಗತ್ತಿಗಾಗಿ ಕಾರ್ಯ ಕೈಕೊಳ್ಳಬೇಕೋ ಎಂಬುದನ್ನು ಪ್ರತಿಯೊಬ್ಬ ಮನುಷ್ಯ ತಿಳಿದುಕೊಳ್ಳಬೇಕು.

**CWM, 13/215** **- ಶ್ರೀಮಾತೆ**

*

## ಅರೋವಿಲೆಯ ಉದ್ದೇಶ

**ಸಮೀಪಿಸುತ್ತಿರುವ ಅನಾಹುತ ಹಾಗೂ ರಹಸ್ಯ ಕ್ರಿಯೆ**

ಬಾಹ್ಯ ಕಾರಣಗಳಿಗಾಗಿ, ನಾನು ದುಃಖಿತ ಸ್ಥಿತಿಯತ್ತ ನೋಡುತ್ತಿದ್ದೆ, ಆ ಸ್ಥಿತಿಯಲ್ಲಿ ಎಲ್ಲ ದೇಶಗಳು ತಮ್ಮನ್ನು ಕಂಡುಕೊಳ್ಳುತ್ತಿವೆ, ಅದು ನಿಜವಾಗಿ ನೋವಿನಿಂದ ಕೂಡಿದ ಹಾಗೂ ಅಪಾಯದಿಂದ ಕೂಡಿದ ಪೃಥ್ವಿಯ ಸ್ಥಿತಿ ಮತ್ತು ಅಲ್ಲಿ ಒಂದು ಬಗೆಯ ಎಲ್ಲವನ್ನೂ ಅಪ್ಪಿಕೊಳ್ಳುವ ದೃಷ್ಟಿಯಿತ್ತು, ಅದು ದೇಶಗಳು

ಹೇಗೆ ಕಾರ್ಯ ಕೈಕೊಂಡವು ಮತ್ತು ಬೆಳೆಯುತ್ತಿರುವ ಮಿಥ್ಯೆಯಲ್ಲಿ ಹೆಚ್ಚುತ್ತಿರುವ ರೀತಿಯಿಂದ ಹೆಚ್ಚು ಹೆಚ್ಚಾಗಿ ಹೇಗೆ ಕಾರ್ಯ ಕೈಕೊಳ್ಳುತ್ತಿವೆ, ಅವರು ತಮ್ಮ ಎಲ್ಲ ಸೃಷ್ಟ್ಯಾತ್ಮಕ ಸಾಮರ್ಥ್ಯವನ್ನು ನಾಶಮಾಡುವ ಭಯಾನಕ ಸಾಧನಗಳನ್ನು ಸೃಷ್ಟಿಸುವುದಕ್ಕೆ ಉಪಯೋಗಿಸಿದ್ದಾರೆ, ಅವರ ಮನಸ್ಸಿನ ಹಿನ್ನೆಲೆಯಲ್ಲಿ ನಿಜವಾಗಿ ಬಾಲಿಶವಾದ ಒಂದು ಯೋಚನೆಯಿದೆ, ಅದೆಂದರೆ ನಾಶ ಎಷ್ಟೊಂದು ಭೀಕರವಾಗುತ್ತದೆಂದರೆ ಆ ಸಾಧನವನ್ನು ಯಾರೂ ಉಪಯೋಗಿಸುವುದಿಲ್ಲ ಎಂಬುದಾಗಿದೆ. ಅವರಿಗೆ ತಿಳಿದಿರದ ವಿಷಯಗಳೆಂದರೆ ವಸ್ತುಗಳಿಗೆ ಪ್ರಜ್ಞೆಯಿರುತ್ತದೆ, ಪ್ರಕಟಣೆಯ ಒಂದು ಸಾಮರ್ಥ್ಯವಿರುತ್ತದೆ ಎಂಬುದಾಗಿರುತ್ತವೆ. ನಾಶಗೊಳಿಸುವ ಆ ಎಲ್ಲ ಸಾಧನಗಳು ತಮ್ಮ ಉಪಯೋಗವಾಗಲೆಂದು ಒತ್ತಾಯ ತರುತ್ತಿರುತ್ತವೆ, ಮನುಷ್ಯರು ಅವುಗಳನ್ನು ಉಪಯೋಗ ಮಾಡಲು ಬಯಸದಿದ್ದರೂ, ಅವರಿಗಿಂತ ಹೆಚ್ಚು ಬಲಿಷ್ಠವಾದ ಶಕ್ತಿ ಉಪಯೋಗ ಮಾಡುವತ್ತ ಅವರನ್ನು ಮುಂದೂಡುತ್ತಿರುತ್ತದೆ.

ಆಗ ಈ ಎಲ್ಲವನ್ನೂ ಹಾಗೂ ಸಮೀಪಿಸುತ್ತಿರುವ ಅಪಾಯವನ್ನು ನೋಡುತ್ತಿದ್ದಂತೆ ಅಲ್ಲಿ ಒಂದು ಬಗೆಯ ಕರೆ ಅಥವಾ ಅಭೀಪ್ಸೆಯಿತ್ತು, ಅದು ಆ ದೋಷವನ್ನು ಕನಿಷ್ಠ ಪಕ್ಷ ನಿಷ್ಪರಿಣಾಮಗೊಳಿಸುವುದಕ್ಕಾಗಿತ್ತು ಮತ್ತು ಅದು ಬಂದಿತು, ಒಂದು ಉತ್ತರ... ನಾನದನ್ನು ಕಿವಿಯಿಂದ ಕೇಳಿದೆ ಎಂದು ಹೇಳಲಾರೆ, ಆದರೆ ಅದು ಎಷ್ಟೊಂದು ಸ್ಪಷ್ಟ, ಎಷ್ಟೊಂದು ಬಲಿಷ್ಠ ಹಾಗೂ ನಿಖರವಾದದ್ದು ಆಗಿತ್ತೆಂದರೆ ಅದು ವಾದಕ್ಕೆ ಎಡೆಗೊಡದಂತಹದಾಗಿತ್ತು. ನಾನದನ್ನು ಶಬ್ದಗಳಲ್ಲಿ ತರ್ಜುಮೆ ಮಾಡುವ ನಿರ್ಬಂಧಕ್ಕೊಳಗಾಗಿದ್ದೇನೆ, ನಾನದನ್ನು ಈ ರೀತಿಯಲ್ಲಿ ಹೇಳಬಹುದು: “ಆ ಕಾರಣದಿಂದಾಗಿಯೇ ನೀನು ಅರೋವಿಲೆಯನ್ನು ಸೃಷ್ಟಿಸಿರುವಿ.”

ಅರೋವಿಲೆ ಶಕ್ತಿಯ, ಸೃಷ್ಟಿಯ, ಸತ್ಯದ ಬೀಜವಿರುವ ಕೇಂದ್ರವಾಗಿದೆ ಎಂಬ ಸ್ಪಷ್ಟ ದೃಷ್ಟಿಯಿದೆ ಹಾಗೂ ಅದು ಚಿಗುರೊಡೆಯುವಂತೆ, ಅಭಿವೃದ್ಧಿ ಹೊಂದುವಂತಾದರೆ, ಅದರ ಬೆಳವಣಿಗೆಯ ಚಲನೆಯೇ ಸ್ವತಃ ಶಸ್ತ್ರಾಸ್ತ್ರಗಳ ದೋಷವಿರುವ ಅನಾಹುತಕಾರಕ ಪರಿಣಾಮಗಳ ವಿರುದ್ಧ ಪ್ರತಿಕ್ರಿಯೆಯಾಗುತ್ತದೆ.

**ಅನುಯಾಯಿಯೊಡನೆ ಮಾತುಕತೆ, ಸಪ್ಟಂಬರ 21, 1966** **- ಶ್ರೀಮಾತೆ**

*

## ಅರೋವಿಲೆ: ಕೊನೆಯ ಭರವಸೆ

ಇದು ಬಹಳ ಸ್ವಾರಸ್ಯಕರವಾಗಿರುವುದನ್ನು ನಾನು ಕಂಡುಕೊಂಡೆ, ಏಕೆಂದರೆ ಅರೋವಿಲೆ ಜನ್ಮತಾಳುವ ಮೊದಲು ಅದನ್ನು ಕುರಿತು ಯಾವ ವಿಚಾರವೂ ಇರಲಿಲ್ಲ, ಯಾವಾಗಲೂ ಆಗುವ ಹಾಗೆ ಅದು ಸರಳವಾಗಿ ದೈವೀಶಕ್ತಿಯೊಂದು ಕೈಕೊಂಡ ಕ್ರಿಯೆಯಾಗಿತ್ತು, ಪರಿಪೂರ್ಣವಾದದ್ದು ಪ್ರಕಟವಾಗುವ ಹಾಗಿತ್ತು ಮತ್ತು ಅದು ಎಷ್ಟೊಂದು ಬಲಿಷ್ಠವಾಗಿತ್ತೆಂದರೆ [ಅರೋವಿಲೆಯ ವಿಚಾರ ತನ್ನನ್ನು ಶ್ರೀಮಾತೆಯವರ ಮುಂದಿರಿಸಿದಾಗ] ನಾನು ಜನರಿಗೆ ಹೇಳಬಹುದಾಗಿತ್ತು. "ನೀವು ಅದನ್ನು ನಂಬದಿದ್ದರೂ, ಎಲ್ಲ ಪರಿಸ್ಥಿತಿಗಳು ಅನಾನುಕೂಲಕರವಾಗಿಯೆಂದು ತೋರಿಬಂದರೂ ಅರೋವಿಲೆ ಇರುವುದೆಂಬುದು ನನಗೆ ತಿಳಿದಿದೆ. ಅದು ನೂರು ವರ್ಷಗಳಲ್ಲಾಗಬಹುದು, ಸಾವಿರ ವರ್ಷಗಳಲ್ಲಾಗಬಹುದು, ನನಗೆ ತಿಳಿದಿಲ್ಲ, ಅರೋವಿಲೆ ಇರುತ್ತದೆ, ಏಕೆಂದರೆ ಅದನ್ನು ವಿಧಿಸಲಾಗಿದೆ." ಹೀಗೆ ಅದನ್ನು ವಿಧಿಸಲಾಗಿತ್ತು – ಮತ್ತು ಆ ರೀತಿಯಲ್ಲಿ ಅದನ್ನು ಸರಳವಾಗಿ ಕೈಕೊಳ್ಳಲಾಯಿತು, ಅದು ಯಾವ ಯೋಚನೆಯನ್ನೂ ಮಾಡದೆ ದೈವೀ ಆಜ್ಞೆಗೆ ವಿಧೇಯ–ವಾಗುವುದಾಗಿತ್ತು. ನನಗೆ ಅದನ್ನು ಹೇಳಿದಾಗ ('ನನಗೆ ಹೇಳಲಾಯಿತು' ಎಂದು ನಾನು ಹೇಳುತ್ತೇನೆ, ಅದರರ್ಥ ಏನು ಎಂಬುದು ನಿಮಗೆ ತಿಳಿದಿರುತ್ತದೆ) ಅದು ನನಗೆ "ನೀನು ಅರೋವಿಲೆಯನ್ನು ಏಕೆ ನಿರ್ಮಾಣ ಮಾಡಿದೆ ಎಂಬುದಕ್ಕೆ ಕಾರಣ ಇಲ್ಲಿದೆ, ನಿನಗೆ ಅದರ ಬಗ್ಗೆ ಅರಿವಿರಲಿಲ್ಲ, ಆದರೆ ಅದು ಆ ಕಾರಣಕ್ಕಾಗಿ..." ಏಕೆಂದರೆ ಸಮೀಪಿಸುತ್ತಿರುವ ಅನಾಹುತದ ವಿರುದ್ಧ ಪ್ರತಿಕ್ರಿಯಿಸಲು ಅದು ಕೊನೆಯ ಭರವಸೆಯಾಗಿತ್ತು. ಈ ಸೃಷ್ಟಿಗಾಗಿ ಎಲ್ಲ ದೇಶಗಳಲ್ಲಿ ಸ್ವಲ್ಪ ಮಟ್ಟಿಗಿನ ಆಸಕ್ತಿ ಜಾಗ್ರತಗೊಂಡರೆ, ಸ್ವಲ್ಪ ಸ್ವಲ್ಪವಾಗಿ ಅವರು ಎಸಗಿದ ದೋಷದ ವಿರುದ್ಧ ಪ್ರತಿಕ್ರಿಯಿಸಲು ಅದಕ್ಕೆ ಸಾಮರ್ಥ್ಯವಿರುತ್ತದೆ.

ಮತ್ತು ಸ್ವಾಭಾವಿಕವಾಗಿ, ನನಗೆ ಅದನ್ನು ತೋರಿಸಿಕೊಟ್ಟಾಗ ನಾನು ಅರ್ಥ ಮಾಡಿಕೊಂಡೆ; ಅಗೋಚರದಲ್ಲಿ ಅರೋವಿಲೆಯ ಸೃಷ್ಟಿಗೆ ಒಂದು ಕ್ರಿಯೆಯಿರುತ್ತದೆ ಮತ್ತು ಆ ಕ್ರಿಯೆ ಏನಾಗಿರುತ್ತದೆ ಎಂಬುದನ್ನು ಗ್ರಹಿಸಿದೆ. ಅದು ಭೌತಿಕ, ಬಾಹ್ಯದಲ್ಲಿ ಕಂಡುಬರುವ ಕ್ರಿಯೆಯಲ್ಲ: ಅದು ಅಗೋಚರದಲ್ಲಿಯ ಕ್ರಿಯೆ ಮತ್ತು ಅಂದಿನಿಂದ ದೇಶಗಳು ಅದನ್ನು ತಿಳಿದುಕೊಳ್ಳುವಂತೆ ಮಾಡಲು ಪ್ರಯತ್ನಿಸುತ್ತಿದ್ದೇನೆ, ಸಹಜವಾಗಿ ಬಾಹ್ಯ ರೀತಿಯಲ್ಲಲ್ಲ, ಏಕೆಂದರೆ ಅವರೆಲ್ಲರೂ ತಾವು ಹೆಚ್ಚು ಜಾಣರಾಗಿದ್ದೇವೆ,

ಬೇರೆಯವರಿಂದ ಕಲಿತುಕೊಳ್ಳುವುದೇನಿಲ್ಲ ಎಂದು ಯೋಚನೆ ಮಾಡುತ್ತಾರೆ, ಆದರೆ ಅದನ್ನು ಆಂತರಿಕವಾಗಿ ಅಗೋಚರದಲ್ಲಿ ಕೈಕೊಳ್ಳಲಾಗುತ್ತದೆ.

ಇದೆಲ್ಲವೂ ನಿಮಗೆ ಸರಳವಾಗಿ ಹೇಳುವುದೇನೆಂದರೆ ಅರೋವಿಲೆಯ ಕಾರ್ಯದಲ್ಲಿ ದೇಶಗಳು ಸಹಯೋಗ ನೀಡಿದರೆ, ಅದು ಬಹಳ ವಿನೀತ ಮಟ್ಟದ್ದಾದರೂ ಆಗಿರಲಿ, ಅವರಿಗೆ ಒಳ್ಳೆಯದನ್ನು ಮಾಡುತ್ತದೆ – ಅದು ಅವರಿಗೆ ಬಹಳಷ್ಟು ಒಳ್ಳೆಯದನ್ನು ಮಾಡುತ್ತದೆ, ಅದು ಎಷ್ಟು ಒಳ್ಳೆಯದಾಗಿರುತ್ತದೆಂದರೆ ಅವರ ಕ್ರಿಯೆಗಳ ತೋರಿಕೆಗಿಂತ ಪ್ರಮಾಣ ಮೀರಿದ್ದಾಗಿರುತ್ತದೆ.

**ಅನುಯಾಯಿಯೊಂದಿಗೆ ಮಾತುಕತೆ, ಸಪ್ಟಂಬರ 21, 1966 - ಶ್ರೀಮಾತೆ**

*

**ದೇಶಗಳ ಒಂದು ಸಾಮೂಹಿಕ ಸೃಷ್ಟಿ**

ಏನೋ ಒಂದನ್ನು ಸೃಷ್ಟಿಸುವುದಕ್ಕಾಗಿ ನಾನು ದೇಶಗಳ ಸಹಯೋಗವನ್ನು ಕುರಿತು ಮಾತನಾಡುತ್ತಿದ್ದೇನೆ. ಅದು ಅರೋವಿಲೆ ಪೂರ್ಣಗೊಂಡಾಗ ಅಲ್ಲ, ಏನೋ ಒಂದನ್ನು ಸೃಷ್ಟಿಸುವುದಕ್ಕಾಗಿ ದೇಶಗಳ ಸಹಯೋಗ. ಆದರೆ ಅದು ದೈವೀ ಸತ್ಯದ ಆಧಾರದ ಮೇಲೆ ಸ್ಥಾಪಿತಗೊಳ್ಳುವುದಾಗಿದೆ, ಮಿಥ್ಯೆಯ ಸೃಷ್ಟಿಯಲ್ಲಿ ಪೈಪೋಟಿಯ ಬದಲಾಗಿ ಬರುವಂತಹದು. ಅದು ಅರೋವಿಲೆ ತಯಾರಾದಾಗ ಅಲ್ಲ – ಅರೋವಿಲೆ ತಯಾರಾದಾಗ ಅದು ಇನ್ನುಳಿದ ಎಲ್ಲ ನಗರಗಳ ಮಧ್ಯೆ ಒಂದು ನಗರವಾಗುತ್ತದೆ. ಕೇವಲ ಸತ್ಯವನ್ನು ಕುರಿತು ಅದರದೇ ಕ್ಷಮತೆ ಅದಕ್ಕೆ ಸಾಮರ್ಥ್ಯವನ್ನು ಕೊಡುತ್ತದೆ, ಆದರೆ ಅದನ್ನು ನೋಡುವುದು ಉಳಿದುಕೊಂಡಿದೆ.

ಇಲ್ಲ, ದೈವೀ ಸತ್ಯದ ಆಧಾರದ ಮೇಲೆ ನಿರ್ಮಾಣ ಮಾಡಲು ಜೊತೆಗೂಡಿದ ಆಸಕ್ತಿ ಇರುವುದು ಮುಖ್ಯ ವಿಷಯವಾಗಿದೆ. ಅವರಲ್ಲಿ (ಸಹಜವಾಗಿ ಪರಸ್ಪರರಲ್ಲಿ ಇಷ್ಟವಿಲ್ಲದೆ ಜೊತೆಗೂಡಿದ) ಮಿಥ್ಯೆಯ ಆಧಾರದ ಮೇಲೆ ನಾಶಕಾರಕ ಸಾಮರ್ಥ್ಯವನ್ನು ಸೃಷ್ಟಿಸುವುದಕ್ಕಾಗಿ ಜೊತೆಗೂಡಿದ ಆಸಕ್ತಿಯಿತ್ತು. ಅರೋವಿಲೆಯ ಅರ್ಥ ಆ ಶಕ್ತಿಯ ಅಲ್ಪ ಭಾಗವನ್ನು ಬೇರೆ ಕಡೆ ಹೊರಳಿಸುವುದಾಗಿದೆ (ಪರಿಮಾಣ ಅಲ್ಪವಾಗಿದೆ, ಆದರೆ ಗುಣಲಕ್ಷಣ ಪರಮ ಶ್ರೇಷ್ಠವಾಗಿದೆ.) ಅದು ನಿಜವಾಗಿ ಒಂದು ಭರವಸೆ ಹೊಂದಿರುವುದಾಗಿದೆ – ಅದರ ಆಧಾರ ಭರವಸೆಯಾಗಿದೆ, ಸಾಮರಸ್ಯದ ಪ್ರಾರಂಭವಾಗಬಲ್ಲ, ಏನೋ ಒಂದನ್ನು ಕೈಕೊಳ್ಳುವುದಕ್ಕಾಗಿದೆ.

ಇಲ್ಲ, ಇದೀಗಲೆ ಆಗಬೇಕು, ಪ್ರಸರಣದ ಶಕ್ತಿ ಬಹಳ ಶ್ರೇಷ್ಠವಾಗಿದೆ. ಕಳಿಸಿಕೊಡುವ ಕೇಂದ್ರ(ಶ್ರೀಮಾತೆಯವರು)ಕ್ಕಿಂತ ಅದು ಪ್ರಮಾಣವನ್ನು ಮೀರಿದ್ದಾಗಿದೆ ಅದು ಜಗತ್ತಿನ ಶ್ರೇಣಿಯಲ್ಲಿ ಅಪರಿಚಿತವಾದದ್ದು ಹಾಗೂ ಬಹುಮಟ್ಟಿಗೆ ಅಸ್ತಿತ್ವದಲ್ಲಿ ಇರದಂತಹದು. ಆದರೆ ಕೇಂದ್ರ, ಹೊರಸೂಸುವ ಹಾಗೂ ಪ್ರಸರಣದ ಸಾಮರ್ಥ್ಯ ಪ್ರಮಾಣವನ್ನು ಮೀರಿದ್ದಾಗಿದೆ, ಅದು ಹೆಚ್ಚಿನ ಮಟ್ಟಿಗೆ ಗಮನಾರ್ಹವಾಗಿದೆ: (ಅರೋವಿಲೆಗೆ) ಉತ್ತರ ಎಲ್ಲೆಡೆಯಲ್ಲೂ ಇದೆ, ಹೊಸ ಆಫ್ರಿಕಾದಿಂದ ಉತ್ತರ, ಫ್ರಾನ್ಸನಲ್ಲಿ ಉತ್ತರ, ರಶಿಯಾದಲ್ಲಿ ಉತ್ತರ, ಅಮೇರಿಕಾದಲ್ಲಿ ಉತ್ತರ, ಕ್ಯಾನಡಾದಲ್ಲಿ ಉತ್ತರ, ಅನೇಕ ದೇಶಗಳಲ್ಲಿ ಉತ್ತರ, ಇಟಲಿಯಲ್ಲಿ ಉತ್ತರ – ಹೀಗೆ ಎಲ್ಲೆಡೆಯಲ್ಲೂ ಉತ್ತರವಿದೆ. ವ್ಯಕ್ತಿಗಳು ಮಾತ್ರವಲ್ಲ, ಗುಂಪುಗಳು, ಪ್ರವೃತ್ತಿಗಳು, ಚಲನೆಗಳು, ಸರಕಾರಗಳಲ್ಲೂ ಕೂಡ ಇವರೆಲ್ಲರಲ್ಲಿ ಉತ್ತರವಿದೆ.

**ಅನುಯಾಯಿಯೊಂದಿಗೆ ಮಾತುಕತೆ, ಸಪ್ಟಂಬರ 21, 1966 - ಶ್ರೀಮಾತೆ**

*

**ಅರೋವಿಲೆಯ ಆತ್ಮ**

ಜನರಿಗೆ ಅರೋವಿಲೆಯಂತಹ ನಗರದ ಸೃಷ್ಟಿ ಪೃಥ್ವಿಯ ಇತಿಹಾಸದಲ್ಲಿ ಜಗತ್ತಿನ ಎಲ್ಲ ಗುಂಪುಗಳಿಗಿಂತ ಹೆಚ್ಚಿನ ಮಹತ್ವವುಳ್ಳದ್ದಾಗಿದೆ ಎಂದು ನಾನು ಹೇಳಿದಾಗ ಅವರು ನನ್ನನ್ನು ನಂಬುವುದಿಲ್ಲ. ಅದು ಅವರಿಗೆ ಇಡಿಯಾಗಿ ಮಹತ್ವವಿಲ್ಲದ ವಿಷಯ, ಒಂದು ಭ್ರಾಂತಿ.

ಒಮ್ಮೆ ನಾನು ಶ್ರೀ ಅರವಿಂದರನ್ನು ಕೇಳಿದೆ (ಏಕೆಂದರೆ ನಾವು ಅರೋವಿಲೆ ಕುರಿತು ಬಹಳಷ್ಟು ಮಾತನಾಡಿದ್ದೆವು, ಆಗ ಅಲ್ಲಿ ಬಹಳಷ್ಟು ತೊಂದರೆಗಳಿದ್ದವು) ನಾನವರಿಗೆ ಕೇಳಿದೆ (ಏಕೆಂದರೆ ಅದು ನನ್ನಲ್ಲಿದ್ದ ಒಂದು ವಿಚಾರವಾಗಿತ್ತು – ವಿಚಾರವಲ್ಲ ಆದರೆ ಮೂವತ್ತು ನಲವತ್ತು ವರ್ಷಗಳ ಹಿಂದೆ ತಾನೇ ಅಭಿವ್ಯಕ್ತಗೊಂಡ ಒಂದು ಆವಶ್ಯಕತೆಯಾಗಿತ್ತು) ಹಾಗಾಗಿ ಅವರನ್ನು ಕೇಳಿದೆ ಅವರು ನನಗೆ ಉತ್ತರ ನೀಡಿದ್ದು ಹೀಗಿದೆ: (ಅದರ ಬಗ್ಗೆ ನಾನು ನಿನಗೆ ಹೇಳಿದ್ದೆ ಎನಿಸುತ್ತದೆ) "ಸರ್ವಸಾಧಾರಣ ಸಂಘರ್ಷದಿಂದ ತಪ್ಪಿಸಿಕೊಳ್ಳಲು ಮನುಷ್ಯರು ಹೊಂದಿರಬಹುದಾದ ಅತ್ಯಂತ ಒಳ್ಳೆಯ ಅವಕಾಶ."

ಹಾಗಾಗಿ ಅವರು ನನಗೆ ಹೇಳಿದಂದಿನಿಂದ ನಾನು ಬಹಳ ಗಂಭೀರಳಾಗಿ ಕಾರ್ಯ ಕೈಕೊಳ್ಳುತ್ತಿದ್ದೇನೆ. ಸಹಜವಾಗಿ ಅದನ್ನು ಹೇಳಿರಲಾಗಿರಲಿಲ್ಲ, ಆದರೆ ಅದನ್ನು ಜೀವಿಸಲಾಗಿತ್ತು.

ಅವರು ನಂಬುತ್ತಿಲ್ಲ, ಭಾವನೆಗೆ ತಂದುಕೊಂಡ ಯಾರೂ ಇಲ್ಲ ಎಂಬುದನ್ನು ನಾನು ಸ್ಪಷ್ಟವಾಗಿ ನೋಡುತ್ತಿದ್ದೇನೆ. ಅದು ಹಾಗಿದೆಯೇ? ಮತ್ತು ಅರೋವಿಲೆಯ ಆತ್ಮದ ಗೋಚರವಾಗುವಿಕೆ ಮೂರ್ತ ರೂಪದಲ್ಲಿ ಇನ್ನೂ ಸಂಭವಿಸಿಲ್ಲ, ಅದು ಅಸ್ತಿತ್ವದಲ್ಲಿಲ್ಲ, ಪೃಥ್ವಿಯ ವಾತಾವರಣದಲ್ಲಿ "ಅರೋವಿಲೆಯ ಆತ್ಮದ" ರೂಪತಾಳುವಿಕೆಯಿಲ್ಲ. (ಶ್ರೀಮಾತೆಯವರು ದೀರ್ಘಕಾಲ ಅಂತರಂಗದಲ್ಲಿ ಲೀನರಾಗಿ ಉಳಿದುಕೊಳ್ಳುತ್ತಾರೆ.) ತಳದಲ್ಲಿ ಅದು "ಸಂಕೀರ್ಣತೆಯಿಂದ ಹೊರಗೆ ಏಕತೆಯನ್ನು ನಿರ್ಮಾಣ ಮಾಡುವ ಕಲೆಯಾಗಿದೆ." ಏಕರೂಪತೆಯಿರದೆ, ನಿನಗೆ ಅರ್ಥವಾಗುತ್ತಿದೆಯೆ: ಸಂಕೀರ್ಣತೆಯಲ್ಲಿ ಸಾರಮಸ್ಯದ ಮೂಲಕ ಏಕತೆ, ಪ್ರತಿಯೊಂದು ವಸ್ತು–ವಿಷಯ ಅದರ ಸ್ಥಾನದಲ್ಲಿರುವುದರಿಂದಾಗಿ.

ಆದರೆ ಶ್ರೀ ಅರವಿಂದರು ಹೇಳಿದ್ದರ ಅರ್ಥ ಸರ್ವಸಾಧಾರಣ ಚಲನೆ ಅನಾಹುತ ಕುರಿತಾಗಿ ಇತ್ತು ಮತ್ತು ಇದು ಶಕ್ತಿಯ ಪ್ರವಾಹವನ್ನು ಬೇರೆಡೆ ತಿರುಗಿಸುವುದಾಗಿತ್ತು.

**ಅನುಯಾಯಿಯೊಂದಿಗೆ ಮಾತುಕತೆ, ಅಕ್ಟೋಬರ 25, 1967 - ಶ್ರೀಮಾತೆ**

*

**ಪರಿವರ್ತನೆಯ ಒಂದು ಕೇಂದ್ರ**

ಅರೋವಿಲೆಯ ಉದ್ದೇಶ ಪೃಥ್ವಿಯ ಮೇಲೆ ಅತಿಮಾನಸ ನೈಜತೆಯ ಆಗಮನವನ್ನು ತ್ವರಿತಗೊಳಿಸುವುದಕ್ಕಾಗಿ ಇದೆ. ಜಗತ್ತು ಹೇಗಿರಬೇಕೋ ಹಾಗಿಲ್ಲ ಎಂದು ಕಂಡುಕೊಳ್ಳುವ ಜನರ ಸಹಾಯಕ್ಕೆ ಸ್ವಾಗತವಿದೆ. ಪ್ರತಿಯೊಬ್ಬನೂ ಮೃತ್ಯುವಿನ ಅಂಚಿನಲ್ಲಿರುವ ಹಳೆಯ ಜಗತ್ತಿನ ಜೊತೆಗಿರಬೇಕೋ ಇಲ್ಲವೆ ಜನ್ಮ ತಾಳಲು ತಯಾರಾಗುತ್ತಿರುವ ಹೊಸ ಹಾಗೂ ಹೆಚ್ಚು ಒಳ್ಳೆಯ ಜಗತ್ತಿಗಾಗಿ ಕಾರ್ಯ ಮಾಡಬೇಕೋ ಎಂಬುದನ್ನು ತಿಳಿದುಕೊಳ್ಳಬೇಕು.

**ಅನುಯಾಯಿಯೊಂದಿಗೆ ಮಾತುಕತೆ, ಫೆಬ್ರುವರಿ 1, 1972 - ಶ್ರೀಮಾತೆ**

*

***ಪ್ರಶ್ನೆ:*** *ಮನುಕುಲದ ದುಃಖಕ್ಕೆ ಹಾಗೂ ಸಮಾಜದ ಅಸ್ತವ್ಯಸ್ತತೆಗಳಿಗೆ ಅರೋವಿಲೆ ಏಕಮಾತ್ರ ಪರಿಹಾರವಾಗಿದೆಯೆ?*

**ಶ್ರೀಮಾತೆ:** ಏಕೈಕ ಪರಿಹಾರವಲ್ಲ. ಅದು ಪರಿವರ್ತನೆಯ ಕೇಂದ್ರ, ಜನರ ಒಂದು ಚಿಕ್ಕ ನಾಭಿ (nucleus), ಅವರು ತಮ್ಮನ್ನು ಪರಿವರ್ತನೆಗೆ ಒಳಪಡಿಸುತ್ತಿದ್ದಾರೆ ಹಾಗೂ ಜಗತ್ತಿಗೆ ಉದಾಹರಣೆ ಒದಗಿಸುತ್ತಿದ್ದಾರೆ. ಅರೋವಿಲೆ ಇದನ್ನೇ ಕುರಿತು ಭರವಸೆ ತಾಳಿದೆ, ಅಹಂಮನ್ಯತೆ ಹಾಗೂ ದುಷ್ಟ ಸಂಕಲ್ಪ ಜಗತ್ತಿನಲ್ಲಿ ಅಸ್ತಿತ್ವ–ದಲ್ಲಿರುವವರೆಗೆ ಒಂದು ಸರ್ವಸಾಧಾರಣ ಪರಿವರ್ತನೆ ಅಸಾಧ್ಯವಾಗಿರುತ್ತದೆ.

**CWM, 13/219** **- ಶ್ರೀಮಾತೆ**

*

**ನಿಜವಾದ ಸ್ವಾತಂತ್ರ್ಯ**

ಅರೋವಿಲೆಯಿಂದ ಯಾರೋ ಒಬ್ಬರು ನನಗೆ ಪತ್ರ ಬರೆದಿದ್ದರು, ಅದರಲ್ಲಿ ಅವನು ಹೇಳಿದ್ದೇನೆಂದರೆ ತಾನು ಇಲ್ಲಿಗೆ ಬಂದಿರುವುದು ಯಾರಿಗೂ ವಿಧೇಯನಾಗಿ ಇರುವುದಕ್ಕಾಗಿಯಲ್ಲ, ನನಗಷ್ಟೇ ವಿಧೇಯನಾಗಿರುವುದಾಗಿದೆ. ಆದರೆ ಇಲ್ಲಿ ನಿಯಮಗಳು ಹಾಗೂ ಕಾಯ್ದೆಗಳು ಇರುವುದನ್ನು ಅವನು ಗಮನಿಸಿದ ಮತ್ತು ಹೇಳಿದ: "ನಾನು ಇದನ್ನಾವುದನ್ನೂ ಕೈಕೊಳ್ಳುವುದಿಲ್ಲ, ನಾನು ಮುಕ್ತ ಮನುಷ್ಯ ಮತ್ತು ಇದನ್ನು ಕೈಕೊಳ್ಳುವುದನ್ನು ತಿರಸ್ಕರಿಸುತ್ತೇನೆ" ಸ್ವಾಭಾವಿಕವಾಗಿ ಇದರ ಬಗ್ಗೆ ನನಗೆ ವರದಿ ನೀಡಲಾಗಿತ್ತು, ಹಾಗಾಗಿ ನಾನು ಅವನಿಗೆ ಪತ್ರ ಬರೆದೆ: "ಮನುಷ್ಯ ಭಗವಂತನ ಬಗ್ಗೆ ಪ್ರಜ್ಞೆಯುಳ್ಳವನಾದಾಗ, ಪ್ರತಿಯೊಬ್ಬನಲ್ಲಿ ನಿರ್ಧಾರ ಕೈಕೊಳ್ಳುವವನು ಭಗವಂತನೇ ಆಗಿರುತ್ತಾನೆ ಎಂಬುದನ್ನು ತಿಳಿದುಕೊಂಡಾಗ ಅವನು ಮುಕ್ತನಾಗಿರುತ್ತಾನೆ, ಹಾಗಿರದಿದ್ದರೆ ಅವನು ತನ್ನ ಆಸೆಗಳ, ರೂಢಿಗಳ ಹಾಗೂ ಎಲ್ಲ ಸಂಪ್ರದಾಯಗಳ ಗುಲಾಮನಾಗಿರುತ್ತಾನೆ." ಅದನ್ನು ಅವನಿಗೆ ಕಳಿಸಿಕೊಟ್ಟೆ, ಅವನು ಶಾಂತನಾಗಿ ಉಳಿದುಕೊಂಡ.

ಅದನ್ನೇ ನಾನು ಇಲ್ಲಿ ಅಧಿಕವಾಗಿ ಈ ಸೂಕ್ತಿ (aphorism)ಗೆ ಸೇರಿಸಬೇಕೆಂದಿದ್ದೆ. ನಾವು ಹೇಳಬೇಕು: ನಮ್ಮಲ್ಲಿ ಪ್ರತಿಯೊಬ್ಬರಲ್ಲಿ ನಿರ್ಧಾರಗಳನ್ನು ಭಗವಂತ ಕೈಕೊಳ್ಳುತ್ತಿದ್ದಾಗ ಮನುಷ್ಯ ಮುಕ್ತನಾಗಿರುತ್ತಾನೆ, ಹಾಗಿರದಿದ್ದರೆ ಜನರು ತಮ್ಮ ಆಸೆಗಳ, ರೂಢಿಗಳ ಹಾಗೂ ಎಲ್ಲ ಸಂಪ್ರದಾಯಗಳ, ಎಲ್ಲ ಕಾಯ್ದೆಗಳ, ನಿಯಮಗಳ

ಗುಲಾಮರಾಗಿರುತ್ತಾರೆ... ತಾವು ಬಹಳ ಮುಕ್ತರಾಗಿದ್ದೇವೆ ಎಂದು ಅವರು ಹೆಚ್ಚಿನ ರೀತಿಯಲ್ಲಿ ಯೋಚಿಸಿದ ಹಾಗೆ ಅವರು ಹೆಚ್ಚಿನ ಬಂಧನಕ್ಕೊಳಗಾಗಿರುತ್ತಾರೆ.

**ಅನುಯಾಯಿಯೊಂದಿಗೆ ಮಾತುಕತೆ, ಫೆಬ್ರುವರಿ 7, 1970 - ಶ್ರೀಮಾತೆ**

*

## ಭವಿಷ್ಯತ್ತಿನ ನಗರವನ್ನು ನಿರ್ಮಾಣ ಮಾಡುವುದು

### ನಿಷ್ಕಾಪಟ್ಯದ ಆವಶ್ಯಕತೆ

ಜನರು ಅದರ ಬಗ್ಗೆ ಭಾವನೆ ತಂದುಕೊಳ್ಳಬೇಕು, ಅದು ಎಷ್ಟೊಂದು ಬಲಿಷ್ಠವಾಗಿರಬೇಕೆಂದರೆ ಕೇವಲ ನಮ್ಮ ನಿಷ್ಕಾಪಟ್ಯದ ಶಕ್ತಿ ಅವುಗಳನ್ನು ಹೊರಗೋಡಿಸುತ್ತದೆ – ಅದನ್ನೇ ಅವರು ಭಾವನೆಗೆ ತಂದುಕೊಳ್ಳಬೇಕು. ಆ ಹಂತದಲ್ಲಿ ನಾವೇನಾಗಿರಬೇಕೋ ಅದಾಗಿರುತ್ತೇವೆ. ಸಿದ್ಧಿಸಿಕೊಳ್ಳುವ ಸಾಮರ್ಥ್ಯ – ಸಿದ್ಧಿಸಿಕೊಳ್ಳುವುದರ ನಿಷ್ಕಾಪಟ್ಯದ ಸಾಮರ್ಥ್ಯ – ಹೇಗಿರುತ್ತದೆಂದರೆ ಕಪಟಿಗಳಾದವರಿಗೆ ಸಹಿಸಿಕೊಳ್ಳುವುದು ಅಸಾಧ್ಯವಾಗುತ್ತದೆ.

ಎಲ್ಲ ನಿಷ್ಕಾಪಟ್ಯದೊಂದಿಗೆ ನಾವು ಭಗವಂತನ ಬದಿಯಲ್ಲಿದ್ದರೆ ನಾವೆಲ್ಲ ಆಗಬೇಕಾದುದು ಆಗಿರುತ್ತೇವೆ.

ಅದನ್ನೇ ಶ್ರೀ ಅರವಿಂದರು ಯಾವಾಗಲೂ ಹೇಳುತ್ತಿದ್ದರು. ಜನರು ಇದನ್ನು ತಿಳಿದುಕೊಂಡಿದ್ದರೆ: ಎಲ್ಲ ನಿಷ್ಕಾಪಟ್ಯದೊಂದಿಗೆ ತಮ್ಮನ್ನು ಭಗವಂತನಿಗೆ ತಮ್ಮನ್ನು ಕೊಟ್ಟರೆ ಮತ್ತು ಭಗವಂತನ ಪಕ್ಕಕ್ಕೆ ಹೊರಳಿದರೆ ಅವರಾಗಬೇಕಾದ ಹಾಗೆ ಆಗುತ್ತಾರೆ.

ಅದಕ್ಕೆ ಕಾಲ ಬೇಕಾಗಬಹುದು, ಅಲ್ಲಿ ಗದ್ದಲ ಹಾಗೂ ತೊಂದರೆಗಳಿರಬಹುದು – ನೀವು ಬಗ್ಗದವರಾಗಿರಬೇಕು: "ಪ್ರತಿಯೊಂದೂ, ಮತ್ತೇನೋ ಇದ್ದಾಗಲೂ ನಾನು ಭಗವಂತನಿಗಾಗಿ ಹಾಗೂ ಅವನ ಪ್ರಕಟನೆಗಾಗಿ ಇದ್ದೇನೆ." ಆಗ ಅದು ಸರ್ವಸಾಮರ್ಥ್ಯವಾಗಿರುತ್ತದೆ – ಮೃತ್ಯುವಿನ ಮೇಲೂ ಸಾಮರ್ಥ್ಯ ಹೊಂದಿರುತ್ತದೆ.

ನಾಳೆ ಎಂದು ಹೇಳುತ್ತಿಲ್ಲ, ಕೂಡಲೆ ಎಂದು ನಾನು ಹೇಳುತ್ತಿಲ್ಲ, ಆದರೆ ಅದೊಂದು ನಿಶ್ಚಿತತೆ.

**ಅನುಯಾಯಿಯೊಂದಿಗೆ ಮಾತುಕತೆ, ಎಪ್ರಿಲ್ 4, 1972 - ಶ್ರೀಮಾತೆ**

*

**ಅರೋವಿಲೆಯಲ್ಲಿ ಜೀವಿಸುವುದಕ್ಕಾಗಿ ಷರತ್ತುಗಳು**

ಮನೋವೈಜ್ಞಾನಿಕ ದೃಷ್ಟಿಕೋನದಿಂದ ಅವಶ್ಯವಾದ ಷರತ್ತುಗಳು:

1. ಮನುಕುಲದ ಸಾರಭೂತ ಏಕತೆಯ ಬಗ್ಗೆ ಮನವರಿಕೆ ಮಾಡಿಕೊಂಡಿರುವುದು ಮತ್ತು ಆ ಏಕತೆಯ ಭೌತಿಕ ಸಿದ್ಧಿಗಾಗಿ ಸಹಯೋಗ ನೀಡುವುದಕ್ಕಾಗಿ ಸಂಕಲ್ಪ ಹೊಂದಿರುವುದು.

2. ಭವಿಷ್ಯತ್ತಿನ ಸಿದ್ಧಿಗಳಿಗೆ ಸಹಾಯ ಮಾಡುವ ಎಲ್ಲದರಲ್ಲಿ ಸಹಯೋಗ ನೀಡುವ ಸಂಕಲ್ಪ ಹೊಂದಿರುವುದು.

ಸಿದ್ಧಿ ಮುಂದುವರಿದು ಹೋಗುತ್ತಿದ್ದಂತೆ ಭೌತಿಕ ಸ್ಥಿತಿಗಳನ್ನು ಅಣಿಗೊಳಿಸ–ಲಾಗುವುದು.

**CWM, 13/191** **- ಶ್ರೀಮಾತೆ**

*

ಭವಿಷ್ಯತ್ತು ನಮಗೆ ಕೊಡಬಹುದಾದುದನ್ನು ದೊರಕಿಸಲು ಭವಿಷ್ಯತ್ತಿನತ್ತ ಮುಂದೂಡುವಿಕೆ ಎಲ್ಲ ನೈತಿಕ ಹಾಗೂ ಭೌತಿಕ ಲಾಭಗಳನ್ನು ಬಿಟ್ಟುಕೊಡಲು ತಯಾರಾಗಿರಬೇಕು.

ಅತಿ ಕಡಿಮೆ ಜನರು ಹಾಗಿರುತ್ತಾರೆ, ಭವಿಷ್ಯತ್ತು ತರುತ್ತಿರುವುದನ್ನು ಹೊಂದಲು ಇಷ್ಟಪಡುವ ಜನರು ಬಹಳಷ್ಟಿರುತ್ತಾರೆ, ಆದರೆ ಅವರು ಹೊಸ ಸಂಪತ್ತನ್ನು ದೊರಕಿಸುವುದಕ್ಕಾಗಿ ತಮ್ಮಲ್ಲಿದ್ದುದನ್ನು ಬಿಟ್ಟುಕೊಡಲು ತಯಾರಾಗಿರುವುದಿಲ್ಲ.

*

ನೆಮ್ಮದಿಗಾಗಿ, ಆಸೆಗಳ ತೃಪ್ತಿಗಾಗಿ ಮನುಷ್ಯ ಅರೋವಿಲೆಗೆ ಬರುವುದಿಲ್ಲ, ಪ್ರಜ್ಞೆಯ ಹಾಗೂ ಸಿದ್ಧಿಸಿಕೊಳ್ಳಬೇಕಾದ ದೈವೀ ಸತ್ಯಕ್ಕೆ ಮುಡಿಪಾಗಿರಿಸಿಕೊಳ್ಳುವಿಕೆಯ ಅಭಿವೃದ್ಧಿಗಾಗಿ ಬರುವುದಿರುತ್ತದೆ.

ಅರೋವಿಲೆಯ ಸೃಷ್ಟಿಯ ಕಾರ್ಯದಲ್ಲಿ ಭಾಗವಹಿಸುವುದಕ್ಕಾಗಿ ಮೊದಲ ಆವಶ್ಯಕತೆ ಸ್ವಾರ್ಥವಿಲ್ಲದೆ ಇರುವುದಾಗಿದೆ.

*

**ಪ್ರಶ್ನೆ:** *ಶ್ರೀಮಾತೆಯವರೆ, ಅರೋವಿಲೆಯ ನಿರ್ಮಾಣ ಮನುಷ್ಯ ಆಧ್ಯಾತ್ಮಿಕತೆಯನ್ನು ಒಪ್ಪಿಕೊಳ್ಳುವುದರ ಮೇಲೆ ಎಷ್ಟರಮಟ್ಟಿಗೆ ಅವಲಂಬಿಸಿದೆ?*

**ಶ್ರೀಮಾತೆ:** ಆಧ್ಯಾತ್ಮಿಕತೆ ಹಾಗೂ ಭೌತಿಕ ಜೀವನ ಇವೆರಡರ ನಡುವೆ ವಿಭಜನೆ ನನಗೆ ಯಾವ ಅರ್ಥವನ್ನೂ ಕೊಡುವುದಿಲ್ಲ, ಸತ್ಯ ಹೇಳುವುದಾದರೆ ಜೀವನ ಹಾಗೂ ಆತ್ಮ ಏಕವಾಗಿವೆ ಮತ್ತು ಭೌತಿಕ ಕಾರ್ಯದಲ್ಲಿ ಹಾಗೂ ಭೌತಿಕ ಕಾರ್ಯದ ಮೂಲಕ ಅತ್ಯುಚ್ಚ ದಿವ್ಯಾತ್ಮವನ್ನು ಪ್ರಕಟಿಸಬೇಕು.

**CWM, 13/197** **- ಶ್ರೀಮಾತೆ**

*

**ಅರೋವಿಲೆಯ ಮೊದಲ ವಾರ್ಷಿಕ ದಿನಾಚರಣೆಗಾಗಿ ಸಂದೇಶ**

ಭಗವಂತನೊಡನೆ ಇರುವ ಏಕತೆಯಲ್ಲಿ ಮಾತ್ರ ಸ್ವಾತಂತ್ರ್ಯವಿರುವುದು ಸಾಧ್ಯವಿದೆ.

ಮನುಷ್ಯ ಭಗವಂತನೊಡನೆ ಏಕವಾಗಲು ತನ್ನಲ್ಲಿಯೇ ಸ್ವತಃ ಆಸೆಯ ಸಾಧ್ಯತೆಯ ಮೇಲೆ ಜಯ ಸಾಧಿಸಿರಬೇಕು.

*

ಇಡಿಯಾದ ಸಂಘಟನೆಯ ಯೋಗಕ್ಷೇಮಕ್ಕೆ ಸಂಬಂಧಿಸಿರದೆ ಇದ್ದುದನ್ನು ಪ್ರತಿಯೊಬ್ಬನು ತನಗೆ ಸಂತೋಷ ಕೊಡುವುದನ್ನು ಕೈಕೊಳ್ಳುವುದಕ್ಕೆ ಪರವಾನಿಗೆಯಲ್ಲ, ನಾವು ಸಿದ್ಧಿಸಿಕೊಳ್ಳಲು ಬಯಸುತ್ತಿರುವ ಸ್ವಾತಂತ್ರ್ಯ ಅದಲ್ಲ.

**CWM, 13/200–01** **- ಶ್ರೀಮಾತೆ**

*

**ಅರೋವಿಲೆ ಹಾಗೂ ಧರ್ಮಗಳು**

ನಾವು ದೈವೀ ಸತ್ಯವನ್ನು ಬಯಸುತ್ತೇವೆ.

ಏಕೆಂದರೆ ಬಹಳಷ್ಟು ಜನರು ತಾವು ಬಯಸುತ್ತಿರುವುದೇ ಸತ್ಯವೆಂದು ತಲೆಚೀಟಿ ಹಚ್ಚುತ್ತಾರೆ.

ದೈವೀ ಸತ್ಯ ಅದೇನೇ ಇರಲಿ, ಅರೋವಿಲೆಯನ್ನರು ಅದನ್ನು ಬಯಸಲೇಬೇಕು.

ಸಾರಭೂತವಾಗಿ ದೈವಿಕ ಜೀವನವನ್ನು ಜೀವಿಸಲು ಬಯಸುವವರಿಗೆ ಅರೋವಿಲೆ ಇದೆ, ಆದರೆ ಎಲ್ಲ ಧರ್ಮಗಳನ್ನು, ಅವು ಪ್ರಾಚೀನ ಕಾಲದವಾಗಿರಲಿ, ಆಧುನಿಕವಾಗಿರಲಿ, ಹೊಸವಾಗಿರಲಿ, ಭವಿಷ್ಯತ್ಕಾಲಕ್ಕೆ ಸೇರಿದವುಗಳಾಗಿರಲಿ, ಅವುಗಳನ್ನು ಅವರು ನಿರಾಕರಿಸಬೇಕು.

ಅನುಭವದಲ್ಲಿ ಮಾತ್ರ ದೈವೀ ಸತ್ಯದ ಬಗ್ಗೆ ಜ್ಞಾನವಿರುವ ಸಾಧ್ಯತೆ ಇದೆ.

ಭಗವಂತನ ಬಗ್ಗೆ ಅನುಭವ ಹೊಂದಿರದ ಯಾರೂ ಭಗವಂತನ ಬಗ್ಗೆ ಮಾತನಾಡಬಾರದು.

ಭಗವಂತನ ಬಗ್ಗೆ ಅನುಭವ ಪಡೆಯಿರಿ, ಆಗ ಮಾತ್ರ ಅದನ್ನು ಕುರಿತು ಮಾತನಾಡಲು ನಿಮಗೆ ಹಕ್ಕಿರುತ್ತದೆ.

ಧರ್ಮಗಳ ವಸ್ತುನಿಷ್ಠ ಅಭ್ಯಾಸ ಮಾನವ ಪ್ರಜ್ಞೆಯ ಅಭಿವೃದ್ಧಿಯನ್ನು ಕುರಿತು ಕೈಕೊಳ್ಳುವ ಐತಿಹಾಸಿಕ ಅಭ್ಯಾಸದ ಒಂದು ಭಾಗವಾಗಿರುತ್ತದೆ.

ಧರ್ಮಗಳು ಮನುಕುಲದ ಇತಿಹಾಸದ ಭಾಗವನ್ನು ಪೂರ್ಣಗೊಳಿಸುತ್ತವೆ ಮತ್ತು ಈ ಬಾಹ್ಯ ರೂಪದಲ್ಲಿ ಅವುಗಳನ್ನು ಅರೋವಿಲೆಯಲ್ಲಿ ಅಭ್ಯಾಸ ಮಾಡಲಾಗುತ್ತದೆ – ಮನುಷ್ಯ ಅಂಟಿಕೊಳ್ಳಬೇಕಾದ ಇಲ್ಲವೆ ಅಂಟಿಕೊಳ್ಳದೆ ಇರಬೇಕಾದ ನಂಬಿಕೆಗಳ ರೀತಿಯಲ್ಲಲ್ಲ, ಆದರೆ ಮಾನವ ಪ್ರಜ್ಞೆಯ ಅಭಿವೃದ್ಧಿಯಲ್ಲಿ ಒಂದು ವಿಧಾನದ ಭಾಗವೆಂದಾಗಿ ಅಭ್ಯಾಸ ಮಾಡಬೇಕು, ಅದು ಮನುಷ್ಯನನ್ನು ಶ್ರೇಷ್ಠತರ ಸಿದ್ಧಿಯತ್ತ ಕರೆದೊಯ್ಯಬೇಕು.

*

ನಮ್ಮ ಸಂಶೋಧನೆ ರಹಸ್ಯ ಸಾಧನದಿಂದ ಪರಿಣಾಮಕಾರಿಯಾಗಿರಿಸಿದ ಶೋಧವಾಗಿರುವುದಿಲ್ಲ, ಜೀವನದಲ್ಲಿಯೇ ಸ್ವತಃ ನಾವು ಭಗವಂತನನ್ನು ಕಂಡುಕೊಳ್ಳಲು ಇಚ್ಛೆ ಹೊಂದಿದ್ದೇವೆ ಮತ್ತು ಈ ಅನ್ವೇಷಣೆಯ ಮೂಲಕ ಜೀವನವನ್ನು ನಿಜವಾಗಿ ಪರಿವರ್ತನೆಗೊಳಪಡಿಸಬಹುದು.

**CWM, 13/206** **- ಶ್ರೀಮಾತೆ**

*

ನೀವು ಕೆಲವರ ಪರವಾಗಿ ಮತ್ತು ಕೆಲವರ ವಿರುದ್ಧವಾಗಿ ಇರುತ್ತಿರುವವರೆಗೆ ನೀವು ಅವಶ್ಯವಾಗಿ ದೈವೀ ಸತ್ಯದ ಹೊರಗಿರುತ್ತೀರಿ.

ನೀವು ಸತತ ಸದ್ಭಾವನೆ ಹಾಗೂ ಪ್ರೇಮ ಇವುಗಳನ್ನು ನಿಮ್ಮ ಹೃದಯದಲ್ಲಿ ಕಾಪಾಡಿಕೊಂಡು ಬರಬೇಕು ಮತ್ತು ಅವುಗಳನ್ನು ಪ್ರಶಾಂತತೆಯಿಂದ ಹಾಗೂ ಸಮತೆಯಿಂದ ಎಲ್ಲರ ಮೇಲೆ ಸುರಿಯುವಂತಾಗಬೇಕು.

**CWM, 13/219** **- ಶ್ರೀಮಾತೆ**

*

ರಹಸ್ಯ ಸಾಧನೆ ಎಂದು ನಾನು ಹೇಳುವುದರ ಅರ್ಥ ಹೀಗಿದೆ, ಜೀವನದಿಂದ ಹಿಂದೆ ಸರಿದುಕೊಳ್ಳುವ ಬೈರಾಗಿಗಳು (monks), ಒಟ್ಟಿಗೆ ವಾಸಮಾಡುವ ಧಾರ್ಮಿಕ ಸಂಘದವರು (convent) ಇಲ್ಲವೆ ಇಲ್ಲಿ ಕಂಡುಬರುವ ಸಂನ್ಯಾಸಿಗಳು. ಇವರೆಲ್ಲ ಆಧ್ಯಾತ್ಮಿಕ ಜೀವನವನ್ನು ಕಂಡುಕೊಳ್ಳುವುದಕ್ಕಾಗಿ ಜೀವನವನ್ನು ಬಿಟ್ಟುಕೊಡುತ್ತಾರೆ; ಆಧ್ಯಾತ್ಮಿಕ ಜೀವನ ಹಾಗೂ ಪ್ರಾಪಂಚಿಕ ಜೀವನ ಇವೆರಡರ ನಡುವೆ ವಿಭಜನೆಯನ್ನುಂಟು ಮಾಡುತ್ತಾರೆ ಮತ್ತು "ಇದು ಅಥವಾ ಅದು" ಎಂದು ಹೇಳುತ್ತಾರೆ. ನಾವು "ಅದು ಸತ್ಯವಲ್ಲ" ಎಂದು ಹೇಳುತ್ತೇವೆ. ಜೀವನದಲ್ಲಿ ಮತ್ತು ಜೀವನವನ್ನು ಇಡಿಯಾಗಿ ಜೀವಿಸುವುದರಲ್ಲಿ ಮನುಷ್ಯ ಆಧ್ಯಾತ್ಮಿಕ ಜೀವನ ಜೀವಿಸಬಲ್ಲ, ಅವನು ಆಧ್ಯಾತ್ಮಿಕ ಜೀವನವನ್ನು ಜೀವಿಸಲೇಬೇಕು. ಪರಮೋಚ್ಚ ಪ್ರಜ್ಞೆಯನ್ನು ಇಲ್ಲಿ ತರಬೇಕಾಗಿದೆ. ಕೇವಲ ಪ್ರಾಪಂಚಿಕ ಹಾಗೂ ಭೌತಿಕ ದೃಷ್ಟಿಕೋನದಿಂದ ಮನುಷ್ಯ ಕೊನೆಯ ಕುಲಕ್ಕೆ ಸೇರಿದವನಲ್ಲ. ಪಶುಗಳ ನಂತರ ಮನುಷ್ಯ ಬಂದ ಹಾಗೆ ಇನ್ನೊಂದು ಸತ್ತೆ ಮನುಷ್ಯನ ನಂತರ ಬರಬೇಕು. ಅಲ್ಲಿ ಒಂದೇ ಒಂದು ದೈವೀ ಪ್ರಜ್ಞೆಯಿದೆ, ಅದೇ ಪ್ರಜ್ಞೆ ಮನುಷ್ಯನನ್ನು ಕುರಿತು ಅನುಭವ ಪಡೆದ ನಂತರ ಅತಿಮಾನವ ಸತ್ತೆಯ ಪ್ರಜ್ಞೆಯ ಅನುಭವ ಪಡೆಯಲಿರುವುದು. ಹಾಗಾಗಿ ನಾವು ದೂರ ಹೋಗಿಬಿಟ್ಟರೆ, ಜೀವನವನ್ನು ನಿರಾಕರಿಸಿದರೆ ಅದನ್ನು ಕೈಕೊಳ್ಳಲು ಎಂದಿಗೂ ತಯಾರಾಗುವುದಿಲ್ಲ.

ಆದರೆ ನೀವು ಶ್ರೀ ಅರವಿಂದರು ಬರೆದದ್ದನ್ನು ಓದಿದ್ದರೆ ನಿಮಗೆ ಅರ್ಥ–ವಾಗುತ್ತಿತ್ತು, ನೀವು ಈ ಪ್ರಶ್ನೆ ಕೇಳುತ್ತಿರಲಿಲ್ಲ. ಅದು ಹಾಗೇಕೆ ಇರುವುದೆಂದರೆ ಬೌದ್ಧಿಕ ದೃಷ್ಟಿಕೋನದಲ್ಲಿ ತಯಾರು ಮಾಡಿಕೊಂಡಿರುವುದರ ಕೊರತೆಯಿರುತ್ತದೆ. ಅಭ್ಯಾಸ ಮಾಡದೆ ನೀವು ಪ್ರತಿಯೊಂದನ್ನು ತಿಳಿದುಕೊಳ್ಳಲು ಬಯಸುತ್ತೀರಿ.

**CWM, 13/330–31** **- ಶ್ರೀಮಾತೆ**

*

**ಉಚ್ಚತರ ದೈವೀ ಸತ್ಯದ ಸಂದರ್ಭದಲ್ಲಿ ಧರ್ಮವೆಂದರೇನು?**

**ಪ್ರಶ್ನೆ:** *ಧರ್ಮದ ವಿಚಾರವನ್ನು ಬಹಳಷ್ಟು ಸಲ ದೇವರನ್ನು ಅರಸುವುದರ ಜೊತೆಗೆ ಜೋಡಿಸಲಾಗಿರುತ್ತದೆ. ಈ ಸಂದರ್ಭದಲ್ಲಿ ಮಾತ್ರ ಧರ್ಮವನ್ನು ತಿಳಿದುಕೊಳ್ಳಬೇಕೆ? ವಾಸ್ತವದಲ್ಲಿ ಈ ದಿನಗಳಲ್ಲಿ ಧರ್ಮದ ಇತರ ರೂಪಗಳಿರುವುದಿಲ್ಲವೆ?*

**ಶ್ರೀಮಾತೆ:** ಪ್ರತ್ಯೇಕ ದೈವೀ ಸತ್ಯವೆಂದು ಜಗತ್ತಿನ ಇಲ್ಲವೆ ವಿಶ್ವದ ಯಾವುದೇ ಕಲ್ಪನೆಯನ್ನು ನಮ್ಮೆದುರಿಗೆ ಇರಿಸಿದಾಗ ಅದಕ್ಕೆ ನಾವು ಧರ್ಮದ ಹೆಸರನ್ನು ಕೊಡುತ್ತೇವೆ, ಆ ದೈವೀ ಸತ್ಯದಲ್ಲಿ ಮನುಷ್ಯ ಪರಿಪೂರ್ಣ ನಂಬಿಕೆಯನ್ನು ಹೊಂದಿರಬೇಕು, ಸರ್ವಸಾಧಾರಣವಾಗಿ ಏಕೆಂದರೆ ಈ ದೈವೀ ಸತ್ಯವನ್ನು ಒಂದು ದಿವ್ಯಜ್ಞಾನ(revelation)ದ ಪರಿಣಾಮವೆಂದು ಸಾರಿ ಹೇಳಲಾಗಿರುತ್ತದೆ.

ದೇವನೊಬ್ಬನ ಅಸ್ತಿತ್ವವನ್ನು ಮತ್ತು ಅವನಿಗೆ ವಿಧೇಯವಾಗಿರಲು ಅನುಸರಿಸಬೇಕಾದ ನಿಯಮಗಳನ್ನು, ಬಹಳಷ್ಟು ಧರ್ಮಗಳು ದೃಢೀಕರಿಸುತ್ತವೆ, ಆದರೆ ಸಾಮಾಜಿಕ–ರಾಜಕೀಯ ಸಂಘಟನೆಗಳಂತಹ ದೇವನಿಲ್ಲದ ಧರ್ಮಗಳಿವೆ, ಅವು ಒಂದು ಆದರ್ಶ ಇಲ್ಲವೆ ದೇಶ ಇವುಗಳ ಹೆಸರಿನಲ್ಲಿರುತ್ತವೆ, ವಿಧೇಯವಾಗಿರುವುದಕ್ಕೆ ಅದೇ ಬಗೆಯ ಹಕ್ಕನ್ನು ಸಾಧಿಸುತ್ತವೆ.

ದೈವೀ ಸತ್ಯವನ್ನು ಮುಕ್ತವಾಗಿ ಅರಸುವುದು ಹಾಗೂ ಅದರತ್ತ ತನ್ನದೇ ರೀತಿಯಲ್ಲಿ ಮುಕ್ತವಾಗಿ ಸಮೀಪಿಸುವುದು ಮನುಷ್ಯನ ಹಕ್ಕಾಗಿರುತ್ತದೆ. ಆದರೆ ಪ್ರತಿಯೊಬ್ಬನು ತನ್ನ ಶೋಧ ತನಗಾಗಿ ಮಾತ್ರ ಒಳ್ಳೆಯದು, ಅದನ್ನು ಇತರರ ಮೇಲೆ ಹೇರಬಾರದು ಎಂಬುದನ್ನು ತಿಳಿದುಕೊಂಡಿರಬೇಕು.

**CWM, 13/207** **- ಶ್ರೀಮಾತೆ**

*

ಪೃಥ್ವಿಗೆ ಒಂದು ಸ್ಥಳದ ಆವಶ್ಯಕತೆ ಇದೆ, ಅಲ್ಲಿ ಜನರು ದೇಶಗಳ ಎಲ್ಲ ಪೈಪೋಟಿಯಿಂದ, ಸಾಮಾಜಿಕ ಸಂಪ್ರದಾಯಗಳಿಂದ, ಸ್ವ–ವಿರೋಧಿ ನೈತಿಕತೆಗಳು, ಹೋರಾಡುವ ಧರ್ಮಗಳು ಇವುಗಳಿಂದ ದೂರ ಇರುವಂತಾಗಬೇಕು, ಅಲ್ಲಿ ಗತಕಾಲಕ್ಕಿರುವ ಎಲ್ಲ ಗುಲಾಮಗಿರಿಯಿಂದ ಮುಕ್ತವಾಗಿ ಪ್ರಕಟವಾಗಲು ಬಯಸುತ್ತಿರುವ ದೈವೀ ಪ್ರಜ್ಞೆಯ ಶೋಧಕ್ಕೆ ಹಾಗೂ ಆಚರಣೆಗೆ ತಮ್ಮನ್ನು ಅರ್ಪಿಸಿಕೊಳ್ಳುವಂತಾಗಬೇಕು.

ಅರೋವಿಲೆ ಈ ಸ್ಥಳವಾಗಲು ಬಯಸುತ್ತದೆ, ನಾಳಿನ ದೈವೀ ಸತ್ಯವನ್ನು ಜೀವಿಸಲು ಅಭೀಪ್ಸೆಪಡುವ ಎಲ್ಲರಿಗೂ ತನ್ನನ್ನು ಅರ್ಪಿಸುತ್ತದೆ.

*

ಇನ್ನು ಮುಂದೆ ಯಾವುದೇ ವೈಯಕ್ತಿಕ ಒಡೆತನಗಳು ಇಲ್ಲದೆ ಇರುವುದರ ಸಂತೋಷ ಹಾಗೂ ಮುಕ್ತಿ ಇವುಗಳನ್ನು ತಿಳಿದುಕೊಳ್ಳಲು ಬಯಸುವವರಿಗೆ ಅರೋವಿಲೆ ಆದರ್ಶ ಸ್ಥಳವಾಗಿದೆ.

**CWM, 13/202** **- ಶ್ರೀಮಾತೆ**

*

**ನಿಜವಾದ ಅರೋವಿಲಿಯನ್ ಆಗುವುದು**

1. ಮೊದಲ ಆವಶ್ಯಕತೆ ಆಂತರಿಕ ಶೋಧ ಮಾಡಿಕೊಳ್ಳುವುದಾಗಿದೆ, ಅದರಿಂದಾಗಿ ಮನುಷ್ಯ ಸಾಮಾಜಿಕ, ಸಾಂಸ್ಕೃತಿಕ, ಜನಾಂಗದ ಹಾಗೂ ಆನುವಂಶಿಕ ತೋರಿಕೆಗಳ ಹಿಂದೆ ಅವನು ನಿಜವಾಗಿ ಏನಾಗಿದ್ದಾನೆ ಎಂಬುದನ್ನು ತಿಳಿದುಕೊಳ್ಳುವಂತಾಗುತ್ತದೆ.

   ಕೇಂದ್ರದಲ್ಲಿ ಮುಕ್ತವಾದ, ವಿಶಾಲವಾದ ಹಾಗೂ ತಿಳಿದುಕೊಳ್ಳುವ ಸತ್ತೆಯೊಂದಿದೆ, ಅದು ನಮ್ಮ ಶೋಧಕ್ಕಾಗಿ ಕಾದುಕೊಂಡಿದೆ, ಅದು ನಮ್ಮ ಸತ್ತೆಯ ಹಾಗೂ ಅರೋವಿಲೆಯಲ್ಲಿ ನಮ್ಮ ಜೀವನದ ಕ್ರಿಯಾಶೀಲ ಕೇಂದ್ರವಾಗಬೇಕು.

2. ನೈತಿಕ ಹಾಗೂ ಸಾಮಾಜಿಕ ಸಂಪ್ರದಾಯಗಳಿಂದ ಮುಕ್ತನಾಗಿರಲು ಮನುಷ್ಯ ಅರೋವಿಲೆಯಲ್ಲಿ ಜೀವಿಸುತ್ತಾನೆ, ಆದರೆ ಈ ಸ್ವಾತಂತ್ರ್ಯ ಅಹಂಕಾರಕ್ಕೆ, ಅದರ ಆಸೆಗಳಿಗೆ ಹಾಗೂ ಮಹತ್ವಾಕಾಂಕ್ಷೆಗಳಿಗೆ ಹೊಸ ಗುಲಾಮನಾಗುವುದಕ್ಕೆ ಒಳಗಾಗಬಾರದು.

   ಮನುಷ್ಯನ ಆಸೆಗಳ ನೆರವೇರಿಕೆ ಆಂತರಿಕ ಶೋಧಕ್ಕೆ ಅಡ್ಡಿಯನ್ನುಂಟು ಮಾಡುತ್ತದೆ. ಆ ಆಂತರಿಕ ಶೋಧವನ್ನು ಶಾಂತಿಯಲ್ಲಿ, ಪರಿಪೂರ್ಣ ಸ್ವಾರ್ಥರಹಿತತೆಯ ಪಾರದರ್ಶಕತೆಯಲ್ಲಿ ಸಿದ್ಧಿಸಿಕೊಳ್ಳಬಹುದು.

3. ಅರೋವಿಲಿಯನ್‌ನು ವೈಯಕ್ತಿಕ ಒಡೆತನದ ಅರ್ಥವನ್ನು ಕಳೆದುಕೊಳ್ಳಬೇಕು. ಭೌತಿಕ ಜಗತ್ತಿನಲ್ಲಿ ನಮ್ಮ ಹಾದುಹೋಗುವಿಕೆಗೆ ನಮ್ಮ ಜೀವನಕ್ಕೆ ಹಾಗೂ

ಕ್ರಿಯೆಗೆ ಅವಶ್ಯವಾದದ್ದನ್ನೆಲ್ಲ ನಾವು ನೆಲೆಸುವ ಸ್ಥಳಕ್ಕನುಗುಣವಾಗಿ ವಿನಿಯೋಗಕ್ಕಾಗಿ ಇರಿಸಲಾಗಿರುತ್ತದೆ.

ನಮ್ಮ ಆಂತರಿಕ ಸತ್ತೆಯೊಂದಿಗೆ ನಾವು ಹೆಚ್ಚು ಪ್ರಜ್ಞಾಪೂರ್ವಕವಾಗಿ ಇದ್ದ ಹಾಗೆ ಹೆಚ್ಚಿನ ರೀತಿಯಲ್ಲಿ ನಮಗೆ ನಿಖರವಾದ ಸಾಧನಗಳನ್ನು ಕೊಡಲಾಗುತ್ತದೆ.

4. ಕಾರ್ಯ, ಶಾರೀರಿಕ ಶ್ರಮದ ಕಾರ್ಯ ಕೂಡ, ಆಂತರಿಕ ಶೋಧಕ್ಕೆ ಅತ್ಯವಶ್ಯವಾಗಿರುತ್ತದೆ. ಮನುಷ್ಯ ಕಾರ್ಯ ಕೈಕೊಳ್ಳದಿದ್ದರೆ, ಅವನು ಪ್ರಜ್ಞೆಯನ್ನು ಭೌತದ್ರವ್ಯದಲ್ಲಿ ಇರಿಸದಿದ್ದರೆ ಭೌತದ್ರವ್ಯ ಎಂದಿಗೂ ಅಭಿವೃದ್ಧಿ ಹೊಂದುವುದಿಲ್ಲ. ಮನುಷ್ಯ ದೇಹದ ಸಾಧನದ ಮೂಲಕ ಒಂದಿಷ್ಟು ಭೌತದ್ರವ್ಯವನ್ನು ಸಂಘಟಿಸಲು ಪ್ರಜ್ಞೆಗೆ ಅನುವು ಮಾಡಿಕೊಡುವುದು ಬಹಳ ಒಳ್ಳೆಯದು. ಮನುಷ್ಯ ತನ್ನ ಸುತ್ತಲೂ ಕ್ರಮಬದ್ಧತೆಯನ್ನು ಸ್ಥಾಪಿಸುವುದು ತನ್ನಂತರಂಗದಲ್ಲಿ ಕ್ರಮಬದ್ಧತೆಯನ್ನು ತರುವುದಕ್ಕೆ ಸಹಾಯಕವಾಗುತ್ತದೆ.

ಬಾಹ್ಯ ಹಾಗೂ ಕೃತ್ರಿಮ ನಿಯಮಗಳ ಮೂಲಕ ಮನುಷ್ಯ ತನ್ನ ಜೀವನವನ್ನು ಸಂಘಟಿಸಬಾರದು, ಆದರೆ ಸಂಘಟಿತಗೊಂಡ ಆಂತರಿಕ ಪ್ರಜ್ಞೆಗನುಗುಣವಾಗಿ ಮಾಡಬೇಕು, ಏಕೆಂದರೆ ಮನುಷ್ಯ ಉಚ್ಚತರ ಪ್ರಜ್ಞೆಯ ನಿಯಂತ್ರಣಕ್ಕೆ ಅಧೀನಗೊಳಿಸದೆ ಜೀವನ ಸಾಗಿಹೋಗಲು ಅನುವು ಮಾಡಿಕೊಟ್ಟರೆ, ಅದು ಚಂಚಲ ಹಾಗೂ ಅಭಿವ್ಯಕ್ತಿರಹಿತವಾಗುತ್ತದೆ. ಭೌತದ್ರವ್ಯ ಯಾವುದೇ ಪ್ರಜ್ಞಾಪೂರ್ವಕ ಉಪಯುಕ್ತತೆಗೆ ಒಳಗಾಗದೆ ಉಳಿದುಕೊಳ್ಳುತ್ತದೆ ಎಂಬ ಅರ್ಥದಲ್ಲಿ ಮನುಷ್ಯ ತನ್ನ ಸಮಯವನ್ನು ಹಾಳು ಮಾಡುವುದಾಗಿರುತ್ತದೆ.

5. ಹೊಸ ಜೀವಜಾತಿಯ ಆಗಮನಕ್ಕಾಗಿ ಇಡೀ ಪೃಥ್ವಿ ತನ್ನನ್ನು ತಯಾರು ಮಾಡಿಕೊಳ್ಳಬೇಕು ಮತ್ತು ಅರೋವಿಲೆ ಈ ಆಗಮನ ತ್ವರಿತಗತಿಯಿಂದ ಆಗುವಂತೆ ಮಾಡಲು ಕಾರ್ಯ ಕೈಕೊಳ್ಳಲು ಬಯಸುತ್ತದೆ.

6. ಈ ಹೊಸ ಜೀವಜಾತಿ ಏನಾಗಿರಬೇಕೆಂಬುದನ್ನು ಸ್ವಲ್ಪ ಸ್ವಲ್ಪವಾಗಿ ನಮಗೆ ತೆರೆದು ತೋರಿಸಲಾಗುವುದು, ಅಷ್ಟರಲ್ಲಿ ಅತ್ಯಂತ ಒಳ್ಳೆಯ ಮುನ್ನಡೆ ಎಂದರೆ ಭಗವಂತನಿಗೆ ಇಡಿಯಾಗಿ ಮುಡುಪಾಗಿರಿಸಿಕೊಳ್ಳುವುದಾಗಿದೆ.

**CWM, 13/207–08** **- ಶ್ರೀಮಾತೆ**

*

## ಸಾಧಿಸಬೇಕಾದ ಪ್ರಗತಿ ಯಾವಾಗಲೂ ಅಲ್ಲಿರುತ್ತದೆ

ವ್ಯಾವಹಾರಿಕವಾಗಲು ನೀವು ಮೊದಲು ನೀವೆಲ್ಲಿಗೆ ಹೋಗಲಿದ್ದೀರಿ ಎಂಬ ನಿಮ್ಮ ಗುರಿಯ ಬಗ್ಗೆ ಸ್ಪಷ್ಟ ದೃಷ್ಟಿಯನ್ನು ಹೊಂದಿರಬೇಕು. ಈ ದೃಷ್ಟಿಕೋನದಿಂದ ಹಣವನ್ನು ಉದಾಹರಣೆಯನ್ನಾಗಿ ಕೈಗೆತ್ತಿಕೊಳ್ಳಿರಿ. ಅದು ಅದರ ಕಾಲ ಬರುವುದಕ್ಕಿಂತ ಹಲವಾರು ಶತಮಾನಗಳ ನಂತರದ ಆದರ್ಶವಾಗಿರಬಹುದು, ಅದು ನಮಗೆ ತಿಳಿದಿಲ್ಲ: ಹಣ ಯಾರಿಗೂ ಸೇರಿರದ ಸಾಮರ್ಥ್ಯವಾಗಬೇಕು ಮತ್ತು ಅದನ್ನು ಪ್ರಸ್ತುತವಿರುವ ಅತ್ಯಂತ ವಿಶ್ವಂಭರ ವಿವೇಕದಿಂದ ನಿಯಂತ್ರಿಸಬೇಕು. ಪೃಥ್ವಿಯ ಆವಶ್ಯಕತೆಗಳನ್ನು ತಿಳಿದುಕೊಳ್ಳಲು ಶಕ್ತನಾಗಿರುವ ಹಾಗೂ ನಿಖರವಾಗಿ ಹಣ ಎಲ್ಲಿಗೆ ಹೋಗಬೇಕು ಎಂದು ಹೇಳಬಲ್ಲ ಸಾಕಷ್ಟು ವಿಶಾಲ ದೃಷ್ಟಿಯುಳ್ಳ ಯಾರೋ ಒಬ್ಬರನ್ನು ಪೃಥ್ವಿಯ ಮೇಲೆ ಇರಿಸಿರಿ, ಅರ್ಥವಾಯಿತೇ? ನಾವು ಅದರಿಂದ ಬಹಳ ದೂರ ಇದ್ದೇವೆ, ಅಲ್ಲವೆ? ಸದ್ಯದ ಕ್ಷಣದಲ್ಲಿ ಸದ್ಗೃಹಸ್ಥ ಇನ್ನೂ "ಇದು ನನ್ನದು" ಎಂದು ಹೇಳುತ್ತಾನೆ ಮತ್ತು ಅವನು ಉದಾರನಾದಾಗ "ನಾನು ನಿಮಗೆ ಕೊಡುತ್ತೇನೆ" ಎಂದು ಹೇಳುತ್ತಾನೆ. ಅದಲ್ಲ.

ನಾವೇನಾಗಿರುವೆವೋ ಹಾಗೂ ನಾವೇನಾಗಬೇಕಾಗಿದೆಯೋ ಇವೆರಡರ ನಡುವೆ ದೀರ್ಘ ಮಾರ್ಗವಿದೆ. ಮತ್ತು ಅದಕ್ಕಾಗಿ ನಾವು ಬಹಳ ನಮ್ಯರಾಗಿರಬೇಕು, ಗುರಿಯ ನೋಟವನ್ನು ಎಂದಿಗೂ ಕಳೆದುಕೊಳ್ಳಬಾರದು, ಆದರೆ ನಾವು ಒಂದು ಜಿಗಿತದಿಂದ ಅದನ್ನು ತಲುಪಲಾಗುವುದಿಲ್ಲ, ಹಾಗೂ ಅದಕ್ಕಾಗಿ ಮಾರ್ಗವನ್ನು ಹುಡುಕಬೇಕು ಎಂಬುದನ್ನು ತಿಳಿದುಕೊಂಡಿರಬೇಕು. ಸರಿ, ಅದು ಆಂತರಿಕ ಶೋಧಕ್ಕಿಂತ ಬಹಳ ಕಠಿಣವಾದದ್ದು. ನಿಜ ಹೇಳುವುದಾದರೆ ಇಲ್ಲಿಗೆ ಬರುವುದಕ್ಕಿಂತ ಮೊದಲು ಅದನ್ನು ಕೈಕೊಳ್ಳಬೇಕಾಗಿತ್ತು.

ಏಕೆಂದರೆ ಅಲ್ಲಿ ಪ್ರಾರಂಭ ಬಿಂದು ಒಂದಿದೆ. ನೀವು ನಿಮ್ಮ ಅಂತರಂಗದಲ್ಲಿಯೇ ಸ್ವತಃ ಎಂದಿಗೂ ಅಸ್ಥಿರವಾಗದ ಪ್ರಕಾಶವನ್ನು, ನಿಶ್ಚಿತತೆಯಿಂದ ನಿಮಗೆ ಮಾರ್ಗದರ್ಶನ ಮಾಡುವ ಸಾನ್ನಿಧ್ಯವನ್ನು ಕಂಡುಕೊಂಡಾಗ ನೀವು ಸತತವಾಗಿ ಸಂಭವಿಸುತ್ತಿರುವ ಪ್ರತಿಯೊಂದರಲ್ಲಿ ಕಲಿತುಕೊಳ್ಳಬೇಕಾದ ಏನೋ ಒಂದಿರುತ್ತದೆ ಮತ್ತು ಭೌತದ್ರವ್ಯದ ಸದ್ಯದ ಸ್ಥಿತಿಯಲ್ಲಿ ಯಾವಾಗಲೂ ಪ್ರಗತಿಯನ್ನು ಸಾಧಿಸುವುದಿರುತ್ತದೆ ಎಂಬುದರ ಬಗ್ಗೆ ಅರಿವುಳ್ಳವರಾಗುತ್ತೀರಿ. ಪ್ರತಿಯೊಂದು

ನಿಮಿಷ ಸಾಧಿಸಬೇಕಾದ ಪ್ರಗತಿಯನ್ನು ಕಂಡುಕೊಳ್ಳಲು ಆತುರವುಳ್ಳ ಮನುಷ್ಯ ಬರಬೇಕು. “ಬೆಳೆಯಲು ಹಾಗೂ ತನ್ನನ್ನು ಪರಿಪೂರ್ಣಗೊಳಿಸಲು ಬಯಸುವ ಜೀವನವಿರಬೇಕು” ಇದು ಅರೋವಿಲೆಯ ಸಾಮೂಹಿಕ ಆದರ್ಶವಾಗಿರಬೇಕು, ಮತ್ತು ಎಲ್ಲದಕ್ಕಿಂತಲೂ ಹೆಚ್ಚಾಗಿ ಪ್ರತಿಯೊಬ್ಬನೂ ಒಂದೇ ರೀತಿಯಲ್ಲಲ್ಲ, – ಪ್ರತಿಯೊಬ್ಬನೂ ತನ್ನದೇ ರೀತಿಯಲ್ಲಿ ಕೈಕೊಳ್ಳಬೇಕು.

**CWM, 13/311–12** **- ಶ್ರೀಮಾತೆ**

*

**ಮಾನವ ಏಕತೆಯ ಮೂಲಕ ಶಾಂತಿ**

ಏಕರೂಪತೆಯ ಮೂಲಕ ಏಕತೆ ಅಸಂಬದ್ಧವಾಗಿರುತ್ತದೆ.
ಹಲವಾರು ಜನರು ಏಕಗೊಳ್ಳುವುದರ ಮೂಲಕ ಏಕತೆಯನ್ನು
ಸಿದ್ಧಿಸಿಕೊಳ್ಳಬೇಕು.
ಪ್ರತಿಯೊಬ್ಬನೂ ಏಕತೆಯ ಭಾಗವಾಗಿರುತ್ತಾನೆ; ಇಡಿಯಾದುದಕ್ಕೆ
ಪ್ರತಿಯೊಬ್ಬನೂ ಅತ್ಯಗತ್ಯದವನಾಗಿರುತ್ತಾನೆ.

**CWM, 13/202** **- ಶ್ರೀಮಾತೆ**

*

**ಪ್ರಜ್ಞೆಯ ಬೆಳವಣಿಗೆಗೆ ಮಿತಿ ಎಂಬುದಿಲ್ಲ**

ಸರಿ, ಇಲ್ಲಿ ನೀವು ಮೂವತ್ತು ಜನರಿದ್ದೀರಿ, ಅದು ಕಠಿಣವಾಗಿದೆ, ಅಲ್ಲವೆ? ನಿಮ್ಮಲ್ಲಿ ಮೂವತ್ತು ಸಾವಿರ ಜನರಿದ್ದಾಗ ಅದು ಹೆಚ್ಚು ಸುಲಭವಾಗುತ್ತದೆ, ಏಕೆಂದರೆ ಸ್ವಾಭಾವಿಕವಾಗಿ ಅಲ್ಲಿ ಅನೇಕಾನೇಕ ಸಾಧ್ಯತೆಗಳಿರುತ್ತವೆ, ನೀವು ಪ್ರಥಮಾನ್ವೇಷಕರು. ನಿಮಗೆ ಕೈಕೊಳ್ಳಬೇಕಾದ ಬಹಳ ಕಠಿಣ ಕಾರ್ಯವಿದೆ, ಆದರೆ ಅದು ಅತ್ಯಂತ ಸ್ವಾರಸ್ಯಕರವಾಗಿರುತ್ತದೆ ಎಂದು ನನಗನಿಸುತ್ತದೆ. ಏಕೆಂದರೆ ನೀವು ನಿಜವಾಗಿ ಅರೋವಿಲಿಯನ್‌ರಾಗುವುದಕ್ಕೆ ಒಂದು ಮೂರ್ತರೂಪದ, ತಾಳಿಕೊಳ್ಳುವ ಮತ್ತು ಬೆಳಯುತ್ತಿರುವ ರೀತಿಯಲ್ಲಿ ಅವಶ್ಯವಾದ ಮನೋಭಾವವನ್ನು ಸ್ಥಾಪಿಸಬೇಕು. ನಿಜವಾಗಿ ಅರೋವಿಲಿಯನ್‌ರಾಗುವುದಕ್ಕೆ ಪ್ರತಿಯೊಂದು ದಿನ ಅವಶ್ಯವಾದ ಆ ದಿನದ ಪಾಠವನ್ನು ಕಲಿಯಬೇಕು. ಪ್ರತಿಯೊಂದು ಸೂರ್ಯೋದಯ ಶೋಧವೊಂದನ್ನು ಮಾಡಲು ಅವಕಾಶ ಒದಗಿಸುತ್ತದೆ.

ಹಾಗಾಗಿ ಅ ಮನಸ್ಥಿತಿಯೊಂದಿಗೆ ನೀವು ಕಂಡುಕೊಳ್ಳುತ್ತೀರಿ. ಪ್ರತಿಯೊಬ್ಬನೂ ಕೈಕೊಳ್ಳುತ್ತಾನೆ.

ಮತ್ತು ದೇಹಕ್ಕೆ ಚಟುವಟಿಕೆಯ ಆವಶ್ಯಕತೆ ಇರುತ್ತದೆ: ನೀವು ನಿಷ್ಕ್ರಿಯರಾಗಿ ಉಳಿದುಕೊಂಡರೆ ಅದು ರೋಗಿಷ್ಟ ಇತ್ಯಾದಿ ಆಗುವುದರ ಮೂಲಕ ಬಂಡಾಯವೇಳುವಂತೆ ಮಾಡುತ್ತದೆ. ಹೂಗಿಡಗಳನ್ನು ನೆಡುವುದು, ಮನೆಯೊಂದನ್ನು ನಿರ್ಮಾಣ ಮಾಡುವುದು, ಭೌತಿಕವಾದ ಏನೋ ಒಂದು ಇಂತಹ ಚಟುವಟಿಕೆ ದೇಹಕ್ಕೆ ನಿಜವಾಗಿ ಅವಶ್ಯವಾಗಿರುತ್ತವೆ. ನೀವು ಅದರ ಭಾವನೆ ತಂದುಕೊಳ್ಳಬೇಕು. ಕೆಲವರು ವ್ಯಾಯಾಮ ಮಾಡುತ್ತಾರೆ, ಇನ್ನು ಕೆಲವರು ಸಾಯಕಲ್ ಮೇಲೆ ಸವಾರಿ ಮಾಡುತ್ತಾರೆ, ಅಲ್ಲಿ ಲೆಕ್ಕವಿಲ್ಲದಷ್ಟು ಚಟುವಟಿಕೆಗಳಿರುತ್ತವೆ, ಆದರೆ ನಿಮ್ಮ ಸಣ್ಣ ಗುಂಪಿನಲ್ಲಿ ನೀವೆಲ್ಲರೂ ಒಂದು ಒಪ್ಪಂದಕ್ಕೆ ಬರಬೇಕು, ಅದರಿಂದಾಗಿ ಪ್ರತಿಯೊಬ್ಬನೂ ತನ್ನ ಮನೋಧರ್ಮಕ್ಕೆ, ಸ್ವಭಾವಕ್ಕೆ ಹಾಗೂ ಅವನ ಆವಶ್ಯಕತೆಗೆ ಹೊಂದಿಕೆಯಾಗುವ ಚಟುವಟಿಕೆಯನ್ನು ಕಂಡುಕೊಳ್ಳಬಲ್ಲನು. ಆದರೆ ವಿಚಾರಗಳೊಂದಿಗೆ ಅಲ್ಲ. ವಿಚಾರಗಳು ಬಹಳ ಒಳ್ಳೆಯವಾಗಿರುವುದಿಲ್ಲ. ವಿಚಾರಗಳು ನಿಮಗೆ ಪೂರ್ವ ಕಲ್ಪನೆಗಳನ್ನು ಕೊಡುತ್ತವೆ, ಉದಾಹರಣೆಗೆ, "ಅದು ಒಳ್ಳೆಯ ಕಾರ್ಯ, ಆ ಇನ್ನೊಂದು ನನಗೆ ಯೋಗ್ಯವಾದುದಲ್ಲ" ಅ ಬಗೆಯ ಎಲ್ಲ ನಿರರ್ಥಕವಾದ ರೀತಿಯದು. ಅಲ್ಲಿ ಕೆಟ್ಟ ಕಾರ್ಯವಿರುವುದಿಲ್ಲ, ಕೆಟ್ಟ ಕಾರ್ಯಕರ್ತರಿರುತ್ತಾರೆ. ಸರಿಯಾಗಿ ಹೇಗೆ ಕೈಕೊಳ್ಳಬೇಕು ಎಂಬುದನ್ನು ನೀವು ತಿಳಿದುಕೊಂಡಿದ್ದರೆ ಎಲ್ಲ ಕಾರ್ಯ ಒಳ್ಳೆಯದಾಗಿರುತ್ತದೆ. ಪ್ರತಿಯೊಂದೂ ಒಳ್ಳೆಯದಾಗಿರುತ್ತದೆ. ಮತ್ತು ಅದು ಒಂದು ಬಗೆಯ ಪಾಲುಗಾರಿಕೆ. ಆಂತರಿಕ ಪ್ರಕಾಶವೊಂದರ ಬಗ್ಗೆ ಪ್ರಜ್ಞೆಯುಳ್ಳವ–ರಾಗಿರುವಷ್ಟು ಸುದೈವಿಗಳು ನೀವಾಗಿದ್ದರೆ, ನಿಮ್ಮ ದೈಹಿಕ ಶ್ರಮದ ಕಾರ್ಯದಲ್ಲಿ ವಸ್ತುಗಳಲ್ಲಿ ಭಗವಂತನಿಗೆ ಕರೆಕೊಟ್ಟಿರುವಿರೇನೋ ಎನ್ನುವ ಹಾಗೆ ಅದಿರುತ್ತದೆ, ಆಗ ಪಾಲುಗಾರಿಕೆ ಬಹಳ ಮೂರ್ತ ಸ್ವರೂಪದ್ದಾಗುತ್ತದೆ. ಅಲ್ಲಿ ಶೋಧಿಸಲು ಇಡೀ ಜಗತ್ತೇ ಇರುತ್ತದೆ, ಅದು ಅದ್ಭುತವಾದದ್ದು.

ನೀವು ತರುಣರಾಗಿದ್ದೀರಿ, ನಿಮ್ಮೆದುರಿಗೆ ಬಹಳಷ್ಟು ಸಮಯವಿದೆ ಮತ್ತು ನಿಜವಾಗಿ ತರುಣರಾಗಿರುವುದಕ್ಕೆ ನಾವು ಬೆಳೆಯುತ್ತಿರುವುದನ್ನು ಅಭಿವೃದ್ಧಿ ಹೊಂದುತ್ತಿರುವುದನ್ನು, ಪ್ರಗತಿ ಹೊಂದುತ್ತಿರುವುದನ್ನು ಕಾಪಾಡಿಕೊಂಡು ಬರಬೇಕು. ಬೆಳವಣಿಗೆ ತಾರುಣ್ಯದ ಕುರುಹು ಮತ್ತು ಪ್ರಜ್ಞೆಯ ಬೆಳವಣಿಗೆಗೆ ಮಿತಿ

ಎಂಬುದಿಲ್ಲ. ಇಪ್ಪತ್ತು ವರ್ಷದವರು ಮುದುಕರಾಗಿರುವುದನ್ನು, ಐವತ್ತು, ಅರವತ್ತು, ಎಪ್ಪತ್ತು ವರ್ಷದವು ತರುಣರಂತೆ ಇರುವುದನ್ನು ನಾನು ನೋಡಿದ್ದೇನೆ. ಮನುಷ್ಯ ದೈಹಿಕ ಶ್ರಮದ ಕಾರ್ಯ ಕೈಕೊಳ್ಳುತ್ತಿದ್ದರೆ ಒಳ್ಳೆಯ ಆರೋಗ್ಯವನ್ನು ಕಾಪಾಡಿಕೊಂಡು ಬರುತ್ತಾನೆ.

**CWM, 13/312–13** **- ಶ್ರೀಮಾತೆ**

*



**ಆಧ್ಯಾತ್ಮಿಕ ಸೌಂದರ್ಯದ ಸಾಮರ್ಥ್ಯ (ಅರೋವಿಲೆಯ ಆಧ್ಯಾತ್ಮಿಕ ಸೌಂದರ್ಯ)**

ಆಧ್ಯಾತ್ಮಿಕ ಸೌಂದರ್ಯಕ್ಕೆ ಸಾಂಸರ್ಗಿಕ ಸಾಮರ್ಥ್ಯವಿರುತ್ತದೆ.

(ಆಧ್ಯಾತ್ಮಿಕ ಪ್ರಾಮುಖ್ಯತೆ ಹಾಗೂ ವಿವರಣೆಯನ್ನು ಶ್ರೀಮಾತೆಯವರು ಕೊಟ್ಟಿದ್ದಾರೆ)

**Botanical name: Hibiscus Hawalian**

*


ಪ್ರತಿಯೊಬ್ಬ ಮನುಷ್ಯನಿಗೆ ಅವನ ಪರಿಹಾರವಿದೆ, ಮತ್ತು ಅದು ದೊಡ್ಡ ತೊಂದರೆಯಾಗಿದೆ. ದೈವೀ ಸತ್ಯದಲ್ಲಿರಲು ಪ್ರತಿಯೊಬ್ಬನಿಗೂ ಅವನ ಪರಿಹಾರವಿದೆ. ಹಾಗಿದ್ದಾಗ್ಯೂ ಈ ಎಲ್ಲ ಪರಿಹಾರಗಳು ಒಟ್ಟಿಗೆ ಕಾರ್ಯ ಮಾಡಲು ಮಾರ್ಗವೊಂದನ್ನು ಕಂಡುಕೊಳ್ಳಬೇಕು.

ಹಾಗಾಗಿ ಚೌಕಟ್ಟು ವಿಶಾಲವಾಗಿರಬೇಕು, ಬಹಳ ನಮ್ಯವಾಗಿರಬೇಕು ಮತ್ತು ಪ್ರತಿಯೊಬ್ಬನಿಂದ ಶ್ರೇಷ್ಠ ಸದ್ಭಾವನೆ ಇರಬೇಕು: ಅದು ಮೊದಲ ಷರತ್ತು. – ವ್ಯಕ್ತಿಯ ಮೊದಲ ಸ್ಥಿತಿ – ಸದ್ಭಾವನೆ. ಪ್ರತಿಯೊಂದು ಕ್ಷಣ ಅತ್ಯಂತ ಒಳ್ಳೆಯದನ್ನು ಕೈಕೊಳ್ಳಬೇಕಾದುದಕ್ಕೆ ಸಾಕಷ್ಟು ನಮ್ಯವಾಗಿರಬೇಕು.

**CWM, 13/311** **- ಶ್ರೀಮಾತೆ**

*

## ಅರೋವಿಲೆಯ ಸಂಕೇತ



ಕೇಂದ್ರದಲ್ಲಿರುವ ಆ ಚುಕ್ಕೆ ದೈವೀ ಏಕತೆಯನ್ನು, ಪರಮೋಚ್ಚನನ್ನು ಪ್ರತಿನಿಧಿಸುತ್ತದೆ. ಒಳಗಿರುವ ವೃತ್ತ ಸೃಷ್ಟಿಯನ್ನು, ಆ ನಗರದ ಕಲ್ಪನೆಯನ್ನು ಪ್ರತಿನಿಧಿಸುತ್ತದೆ; ಪಕಳೆಗಳು ಅಭಿವ್ಯಕ್ತಿಯ, ಸಿದ್ಧಿಯ ಸಾಮರ್ಥ್ಯವನ್ನು ಪ್ರತಿನಿಧಿಸುತ್ತವೆ.

**CWM, 13/212** **- ಶ್ರೀಮಾತೆ**

*

ಮಿಥ್ಯೆ ಸಾವನ್ನಪ್ಪುವ ಮೊದಲು ಪೂರ್ತಿ ತೂಗಾಟದೊಡನೆ ಮೇಲಕ್ಕೆದ್ದು ಬರುತ್ತದೆ.

ಆದಾಗ್ಯೂ ಜನರು ಕೇವಲ ಅನಾಹುತ ಕಲಿಸಿಕೊಡುವ ಪಾಠವನ್ನು ಕಲಿತುಕೊಳ್ಳುತ್ತಾರೆ. ಅವರು ದೈವೀ ಸತ್ಯಕ್ಕೆ ತಮ್ಮ ಕಣ್ಣುಗಳನ್ನು ತೆರೆದಿರಿಸುವ ಮೊದಲು ಅದು ಬರಲೇ ಬೇಕೆ?

ಅದಾಗದಂತೆ ಇರುವುದಕ್ಕೆ ನಾನು ಎಲ್ಲರಿಂದಲೂ ಪ್ರಯತ್ನವೊಂದನ್ನು ಕೈಕೊಳ್ಳುವಂತೆ ಕೇಳುತ್ತಿದ್ದೇನೆ.

ದೈವೀ ಸತ್ಯ ಮಾತ್ರ ನಮ್ಮನ್ನು ರಕ್ಷಿಸಬಲ್ಲದು, ಶಬ್ದಗಳಲ್ಲಿ ಸತ್ಯವಿರಬೇಕು, ಕ್ರಿಯೆಯಲ್ಲಿ ಸತ್ಯವಿರಬೇಕು, ಸಂಕಲ್ಪದಲ್ಲಿ ಸತ್ಯವಿರಬೇಕು, ಭಾವನೆಗಳಲ್ಲಿ ಸತ್ಯವಿರಬೇಕು. ಅದು ದೈವೀ ಸತ್ಯಕ್ಕೆ ಸೇವೆ ಸಲ್ಲಿಸುವುದು ಇಲ್ಲವೆ ಹಾಳಾಗಲು ಆಸ್ಪದ ಮಾಡಿಕೊಡುವುದು ಇವೆರಡರ ನಡುವಿನ ಆಯ್ಕೆಯಾಗಿದೆ.

**CWM, 13/217** **- ಶ್ರೀಮಾತೆ**

*

**ಪ್ರಶ್ನೆ:** *ಅರೋವಿಲೆಗಾಗಿ ಯಾವ ರೀತಿಯ ರಾಜಕೀಯ ಸಂಘಟನೆ ಇರುವುದನ್ನು ನೀವು ಬಯಸುತ್ತೀರಿ.*

**ಶ್ರೀಮಾತೆ:** ಮೋಜಿನದೆನಿಸವ ವ್ಯಾಖ್ಯೆಯೊಂದು ನನಗೆ ದೊರಯುತ್ತದೆ: ಅದು ದೈವೀ ಅರಾಜಕತೆ. ಆದರೆ ಜಗತ್ತು ಅದನ್ನು ತಿಳಿದುಕೊಳ್ಳಲಾರದು. ಜನರು ತಮ್ಮ ಚೈತ್ಯ ಸತ್ತೆಯ ಬಗ್ಗೆ ಅರಿವುಳ್ಳವರಾಗಬೇಕು, ಸ್ಥಿರಗೊಂಡ ನಿಯಮಗಳು ಹಾಗೂ ಶಾಸನಗಳು ಇಲ್ಲದೆ ಸ್ವಯಂಪ್ರೇರಣೆಯಿಂದ ತಮ್ಮನ್ನು ಸಂಘಟನೆಗೆ ಒಳಪಡಿಸಬೇಕು. ಅದೇ ಆದರ್ಶ.

ಇದಕ್ಕಾಗಿ ಮನುಷ್ಯ ತನ್ನ ಚೈತ್ಯ ಸತ್ತೆಯ ಸಂಪರ್ಕದಲ್ಲಿರಬೇಕು, ಅವನು ಅದರಿಂದ ಮಾರ್ಗದರ್ಶನ ಪಡೆಯಬೇಕು ಮತ್ತು ಅಹಂಕಾರದ ಅಧಿಕಾರ ಹಾಗೂ ಪ್ರಭಾವ ಮಾಯವಾಗಬೇಕು.

**CWM, 13/219** **- ಶ್ರೀಮಾತೆ**

*

**ಸಾಮಾಜಿಕ ಜೀವನದ ಒಂದು ಹೊಸರೂಪ**

(ಯಾರೋ ಒಬ್ಬರು ಅರೋವಿಲೆಯಲ್ಲಿ ಕೂಸೊಂದು ಜನ್ಮ ತಾಳುವುದಕ್ಕಾಗಿ ಸರಿಯಾದ ವ್ಯವಸ್ಥೆ ಕುರಿತು ಪ್ರಶ್ನೆ ಕೇಳಿದ್ದರು. ಶ್ರೀಮಾತೆಯವರು ವೈದ್ಯ ಹಾಗೂ ತಂದೆ ಉಪಸ್ಥಿತರಿರಬೇಕೆಂದು ಹೇಳಿದರು, ಅಧಿಕವಾಗಿ ಹೇಳಿದ್ದು:)

ಬಹಳ ಮುಖ್ಯವಾದ ವಿಷಯವೆಂದರೆ ಅಚಂಚಲರಾಗಿರುವುದು, ಶಾಂತಿಯ ವಾತಾವರಣದಲ್ಲಿರುವುದು, ಅದರಿಂದಾಗಿ ದೈವೀ ಶಕ್ತಿ ಕ್ಷೋಭೆಗೊಳಗಾಗದೆ ಕಾರ್ಯ ಕೈಕೊಳ್ಳಬಲ್ಲದು.

*

ಸಹಜವಾಗಿ ಮದುವೆ ಕುರಿತು ಇರುವ ಇಡೀ ವಿಚಾರ ಮೋಜಿನದೆನಿ–ಸುತ್ತದೆ, ಏಕೆಂದರೆ ಆ ವಿಷಯ ಬಾಲಿಶ ಎಂದು ನಾನು ಪರಿಗಣಿಸುತ್ತೇನೆ.

ನಿಮಗೆ ತಿಳಿದ ಹಾಗೆ ಅರೋವಿಲೆಯಲ್ಲಿ ಮದುವೆಗಳಿರುವುದಿಲ್ಲ. ಒಬ್ಬ ಪುರುಷ ಹಾಗೂ ಒಬ್ಬ ಸ್ತ್ರೀ ಪರಸ್ಪರರನ್ನು ಪ್ರೀತಿಸುತ್ತಿದ್ದರೆ ಮತ್ತು ಒಟ್ಟಿಗೆ ಜೀವಿಸಲು ಬಯಸುತ್ತಿದ್ದರೆ ಅವರು ಅದನ್ನು ಯಾವುದೇ ಸಮಾರಂಭವಿಲ್ಲದೆ ಮಾಡಬಹುದು. ಅವರು ವಿಚ್ಛೇದನೆ ಬಯಸಿದರೆ ಅದನ್ನೂ ಕೂಡ ಮುಕ್ತವಾಗಿ ಕೈಕೊಳ್ಳಬಹುದು. ಒಬ್ಬರು ಇನ್ನೊಬ್ಬರನ್ನು ಪ್ರೀತಿಸುವುದನ್ನು ನಿಲ್ಲಿಸಿದಾಗ ಅವರು ಒಟ್ಟಿಗೆ ಉಳಿಯಲೆಂದು ಅವರ ಮೇಲೆ ಒತ್ತಾಯವನ್ನೇಕೆ ತರಬೇಕು?

ಈ ಸಂಬಂಧದಲ್ಲಿ ಜನರು ಮುಕ್ತರಾಗಿದ್ದರೆ ಬಹಳಷ್ಟು ಅಪರಾಧಗಳನ್ನು ತಡೆಗಟ್ಟಬಹುದು – ವಿಚ್ಛೇದನೆಗೊಳಪಡುವುದಕ್ಕಾಗಿ ಒಬ್ಬರು ಇನ್ನೊಬ್ಬರಿಂದ ವಿಷಯಗಳನ್ನು ಮುಚ್ಚಿಡಬೇಕಾದ ಇಲ್ಲವೆ ಅಪರಾಧಗಳನ್ನೆಸಗಬೇಕಾದ ಆವಶ್ಯಕತೆ ಇರುವುದಿಲ್ಲ. ಸಹಜವಾಗಿ ಅವರು ಪರಸ್ಪರರನ್ನು ಪ್ರೀತಿಸುತ್ತಿದ್ದರೆ ಅವರು ಒಟ್ಟಿಗೆ ಜೀವಿಸುವುದನ್ನು ಮುಂದುವರಿಸಿಕೊಂಡು ಹೋಗುತ್ತಾರೆ, ಯಾವಾಗಲೂ ಸ್ವಾಭಾವಿಕವಾಗಿ, ಹಾಗೆ ಮಾಡುವುದಕ್ಕೆ ಯಾವ ಶಾಸನವೂ ಒತ್ತಾಯ–ಪಡಿಸುವುದಿಲ್ಲ. ಆ ಕಾರಣದಿಂದಾಗಿ ಮದುವೆಯ ಸಮಾರಂಭ ಹಾಗೂ ವೃತಾಚರಣೆ ಅಷ್ಟೊಂದು ಬಾಲಿಶವಾಗಿದೆ.

ಅರೋವಿಲೆಯಲ್ಲಿ ಜನಿಸಿದ ಮಕ್ಕಳಿಗೆ ಕುಟುಂಬದ ಹೆಸರಿರುವುದಿಲ್ಲ. ಅವರಿಗೆ ಮೊದಲ ಹೆಸರೊಂದು ಮಾತ್ರವಿರುತ್ತದೆ.

**CWM, 13/236** **- ಶ್ರೀಮಾತೆ**

*

(ಮೇಲಿನ ಹೇಳಿಕೆಯೊಂದಿಗೆ ಶ್ರೀಮಾತೆಯವರು ಮದುವೆ ಕುರಿತು ಇರುವ ತಮ್ಮ ಕೆಳಗೆ ಕೊಟ್ಟ ಪತ್ರವನ್ನು ಪ್ರಕಟಿಸಲು ಸೂಚಿಸಿದರು.)

ನಿಮ್ಮ ಭೌತಿಕ ಜೀವನಗಳನ್ನು, ಪ್ರಾಪಂಚಿಕ ಆಸಕ್ತಿಗಳನ್ನು ಏಕವಾಗಿಸುವುದು, ತೊಂದರೆ, ಯಶಸ್ಸು, ವಿಜಯ ಇವೆಲ್ಲವನ್ನು ಒಟ್ಟಿಗೆ ಎದುರಿಸಲು ಪಾಲುಗಾರರಾಗುವುದು – ಅದೇ ಮದುವೆಯ ತಳಹದಿ, ಆದರೆ ನಿಮಗೀಗಾಗಲೆ ತಿಳಿದಿರುವ ಹಾಗೆ ಅದಿಷ್ಟೇ ಸಾಕಾಗದು.

ನಿಮ್ಮ ಸಂವೇದನೆಗಳಲ್ಲಿ ಏಕವಾಗಿರುವುದು, ಒಂದೇ ಬಗೆಯ ಸೌಂದರ್ಯಾಭಿರುಚಿ ಹಾಗೂ ಸಂತೋಷಪಡುವಿಕೆಗಳನ್ನು ಹೊಂದಿರುವುದು, ಒಬ್ಬರ ಮುಖಾಂತರ ಇನ್ನೊಬ್ಬರು, ಒಬ್ಬರು ಇನ್ನೊಬ್ಬರಿಗಾಗಿ, ಅದೇ ರೀತಿಯಲ್ಲಿ, ಅದೇ ವಿಷಯಗಳಿಗಾಗಿ ಕಾರ್ಯಪ್ರವೃತ್ತರಾಗುವುದು – ಅದು ಒಳ್ಳೆಯದು ಹಾಗೂ ಅವಶ್ಯವಾದದ್ದು, ಆದರೆ ಅದಿಷ್ಟೇ ಸಾಕಾಗದು.

ನಿಮ್ಮ ಆಳವಾದ ಭಾವನೆಗಳಲ್ಲಿ ಏಕವಾಗಿರುವುದು, ಜೀವನದ ಎಲ್ಲ ಹೊಡೆತಗಳಿದ್ದಾಗಲೂ ಎಂದಿಗೂ ವ್ಯತ್ಯಾಸಕ್ಕೊಳಗಾಗದ, ಪ್ರತಿಯೊಂದು ದಣಿವನ್ನು ಹಾಗೂ ಕೆರಳುವಿಕೆಯನ್ನು ಹಾಗೂ ನಿರಾಶೆಯನ್ನು ತಾಳಿಕೊಳ್ಳಲು ಶಕ್ತವಾಗಲು ಪರಸ್ಪರರಲ್ಲಿ ಒಲವು ಹಾಗೂ ಕೋಮಲತೆಗಳನ್ನು ಕಾಪಾಡಿಕೊಂಡು ಬರುವುದು, ಯಾವಾಗಲೂ ಪ್ರತಿಯೊಂದು ಸಂದರ್ಭದಲ್ಲೂ ಬಹಳ ಸಂತೋಷದಿಂದಿರುವುದು, ಒಟ್ಟಿಗಿರುವುದು, ಪ್ರತಿಯೊಂದು ಪರಿಸ್ಥಿತಿಯಲ್ಲಿ ಒಬ್ಬರು ಇನ್ನೊಬ್ಬರಲ್ಲಿ ಪ್ರಶಾಂತತೆ, ಶಾಂತಿ ಹಾಗೂ ಸಂತೋಷ ಕಂಡುಕೊಳ್ಳುವುದು – ಅದು ಬಹಳ ಒಳ್ಳೆಯದು, ಅದು ಅತ್ಯಗತ್ಯವಾದದ್ದು, ಆದರೆ ಅದಷ್ಟೇ ಸಾಕಾಗದು.

ನಿಮ್ಮ ಮನಸ್ಸುಗಳನ್ನು ಏಕಗೊಳಿಸುವುದು, ಯೋಚನೆಗಳನ್ನು ಸಾಮರಸ್ಯ–ವಿರುವಂತೆ ಮಾಡುವುದು, ಹಾಗೂ ಅವು ಒಂದಕ್ಕೊಂದು ಪೂರಕವಾಗುವಂತೆ ಮಾಡುವುದು, ನಿಮ್ಮ ಬೌದ್ಧಿಕ ಪೂರ್ವಮಗ್ನತೆಗಳಲ್ಲಿ ಹಾಗೂ ಶೋಧಗಳಲ್ಲಿ ಪಾಲುಗೊಳ್ಳುವುದು; ಸ್ವಲ್ಪದರಲ್ಲಿ ಹೇಳುವುದಾದರೆ, ಇಬ್ಬರೂ ಒಮ್ಮೆಗೆ ವಿಸ್ತಾರಗೊಳಿಸುವುದರ ಮೂಲಕ ಹಾಗೂ ಶ್ರೀಮಂತಗೊಳಿಸುವುದರ ಮೂಲಕ ನಿಮ್ಮ ಮಾನಸಿಕ ಚಟುವಟಿಕೆಯ ಗೋಲವನ್ನು ಒಂದೇ ಆಗುವಂತೆ ಮಾಡುವುದು – ಅದು ಬಹಳ ಒಳ್ಳೆಯದು, ಅದು ಪರಿಪೂರ್ಣವಾಗಿ ಅವಶ್ಯವಾಗಿದೆ, ಆದರೆ ಅದಷ್ಟೇ ಸಾಕಾಗದು.

ಅದೆಲ್ಲದರಾಚೆಗೆ, ಆಳಗಳಲ್ಲಿ, ಕೇಂದ್ರದಲ್ಲಿ, ಸತ್ತೆಯ ಶಿಖರದಲ್ಲಿ ಸತ್ತೆಯ ಪರಮೋಚ್ಚ ದೈವೀ ಸತ್ಯ, ಶಾಶ್ವತ ದೈವೀ ಪ್ರಕಾಶ ಇವುಗಳಿವೆ, ಅವು ಜನ್ಮದ ಪರಿಸ್ಥಿತಿ, ದೇಶ, ಪರಿಸರ, ಶಿಕ್ಷಣ ಇವೆಲ್ಲವುಗಳಿಂದ ಸ್ವತಂತ್ರವಾಗಿರುತ್ತವೆ; ಅದೇ ನಮ್ಮ ಆಧ್ಯಾತ್ಮಿಕ ಪ್ರಗತಿಯ ಮೂಲ ಕಾರಣ ಹಾಗೂ ಪ್ರಭು; ಅದೇ ನಮ್ಮ ಜೀವನಗಳಿಗೆ ಶಾಶ್ವತ ನಿರ್ದೇಶನವನ್ನು ಕೊಡುತ್ತದೆ, ಅದೇ ನಮ್ಮ ಅದೃಷ್ಟಗಳನ್ನು ನಿರ್ಧರಿಸುತ್ತದೆ, ಅದರ ಈ ಪ್ರಜ್ಞೆಯಲ್ಲಿ ನೀವು ಏಕವಾಗುವುದಿರುತ್ತದೆ. ಅಭೀಪ್ಸೆಯಲ್ಲಿ,

ಹಾಗೂ ಆರೋಹಣದಲ್ಲಿ ಏಕವಾಗಿರುವುದು, ಆಧ್ಯಾತ್ಮಿಕ ಮಾರ್ಗದಲ್ಲಿ ಒಂದೇ ವೇಗದಿಂದ ಮುಂದೆ ಚಲಿಸುವುದು, ಅದು ಉಳಿದುಕೊಳ್ಳುವ ಏಕತೆಯ ರಹಸ್ಯ.

**CWM, 13/236–37** **- ಶ್ರೀಮಾತೆ**

*

**ನಾವು ಜೀವನವನ್ನು ಬದಲಿಸಲು ಬಯಸುತ್ತೇವೆ**

ಕೈಕೊಳ್ಳಬೇಕಾದ ಮೊದಲ ಕಾರ್ಯವೆಂದರೆ ಕ್ರಿಯೆಯನ್ನು ನಿಮ್ಮ ಸಲುವಾಗಿ ಮಾಡಬಾರದು, ಆದರೆ ಭಗವಂತನ ಸಂಕಲ್ಪವನ್ನು ಅಭಿವ್ಯಕ್ತಪಡಿಸುವುದಕ್ಕಾಗಿ, ಭಗವಂತನಿಗೆ ವಿಧೇಯವಾಗಿ ಕಾರ್ಯ ಕೈಕೊಳ್ಳಬೇಕು. ನಿಮ್ಮ ವತಿಯಿಂದ ಯಾರಿಗೂ ಆಜ್ಞೆ ಮಾಡುವುದಿರುವುದಿಲ್ಲ. ಸಂಕಲ್ಪ ವೈಯಕ್ತಿಕವಾಗಿರುವವರೆಗೆ, ವೈಯಕ್ತಿಕ ಆಸೆಯಾಗಿರುವವರೆಗೆ ಅದು ನಿಜವಾದ ವಿಷಯವಾಗಿರುವುದಿಲ್ಲ, ನೀವು ಏನನ್ನೂ ಕೈಕೊಳ್ಳಲಾಗುವುದಿಲ್ಲ. ಅದು ನಿಜವಾಗಿರದ ವಿಷಯವಾಗಿರುವುದಷ್ಟೇ ಅಲ್ಲ, ಆದರೆ ನೀವು ನಿಜವಾದ ವಿಷಯವನ್ನು ತಿಳಿದುಕೊಳ್ಳಲಾರಿರಿ!

ಅದನ್ನು (ಏನೋ ಒಂದನ್ನು ಒತ್ತಾಯದಿಂದ ತಿರಸ್ಕರಿಸುತ್ತಿರುವ ಸಂಜ್ಞೆ) ಹೊರಹಾಕಲೇಬೇಕು.

ಆ ಕಾರಣದಿಂದಾಗಿ ನಾವು ಏಕಾಕಿಯಾಗಿ ಏನೂ ಅಲ್ಲ. ಇದು ಜೀವನ. ನಾವು ನಮಗಾಗಿ ಕಾರ್ಯ ಕೈಕೊಳ್ಳುವುದಿಲ್ಲ. ನಾವು ನಮ್ಮ ವೈಯಕ್ತಿಕ ಸಂಕಲ್ಪದಿಂದ ಮತ್ತು ವೈಯಕ್ತಿಕ ಪರಿಣಾಮಕ್ಕಾಗಿ ಕಾರ್ಯ ಕೈಕೊಳ್ಳುವುದಿಲ್ಲ. ನಾವು ಕೇವಲ ದೈವೀ ಸಂಕಲ್ಪದಿಂದ ಹಾಗೂ ದೈವೀ ಸಂಕಲ್ಪಕ್ಕಾಗಿ ಕಾರ್ಯ ಕೈಕೊಳ್ಳುತ್ತೇವೆ. ಅದೆಷ್ಟರ ಮಟ್ಟಿಗೆಂದರೆ ಪ್ರಯತ್ನವಿಲ್ಲದೆ, ಸ್ವಯಂಪ್ರೇರಣೆಯಿಂದ ನಮ್ಮ ಭೌತಿಕ ಶತ್ರುವಿನ ಬಗ್ಗೆ ಅತ್ಯಂತ ಹೆಚ್ಚಿನ ಕೋಮಲತೆಯ ಭಾವನೆಯನ್ನು ತಂದುಕೊಳ್ಳುತ್ತೇವೆ. ನಿಮಗೆ ಆ ಭಾವನೆ ಬಂದಾಗ ನೀವು ಅರ್ಥಮಾಡಿಕೊಳ್ಳುವಿರಿ. ಅದೇ ಇಡಿಯಾದ ಮಿತಿಯಿರುವಿಕೆ.

ಸಂಘರ್ಷಗಳು ಮೇಲೆದ್ದು ಬಂದಾಗ, ಮತ್ತು ಅವು ನಮಗಾಗಿ ಎಲ್ಲ ಸಮಯದಲ್ಲಿ ಮೇಲೆದ್ದು ಬರುತ್ತವೆ – ಕೂಡಲೆ ಅದು ಮನುಷ್ಯ ತನ್ನದೇ ಚರ್ಮದಲ್ಲಿ ಹಿಂದೆಳೆದುಕೊಂಡಹಾಗಿರುತ್ತದೆ. ಏಕೆಂದರೆ ಸಂಭವಿಸುವುದು ಅದೇ ಆಗಿರುತ್ತದೆ: ಪ್ರತಿಯೊಬ್ಬನೂ ತನ್ನೊಳಗೇ ತನ್ನನ್ನು ಎಳೆದುಕೊಳ್ಳುತ್ತಾನೆ. ಆದರೆ ಇರುವ ತೊಂದರೆ ಎಂದರೆ ಮನುಷ್ಯನಲ್ಲಿ ಸಾಪೇಕ್ಷವಾಗಿ ಅತಿ ಚಿಕ್ಕ ವೈಯಕ್ತಿಕ

ಸಂಕಲ್ಪವಿದ್ದಾಗ, ನಿಮ್ಮ ಮುಂದಿರುವ ವ್ಯಕ್ತಿ ವೈಯಕ್ತಿಕ ಸಂಕಲ್ಪವನ್ನು ಅಭಿವ್ಯಕ್ತಪಡಿಸಿದಾಗ, ಅದು ನಿಖರವಾಗಿ ಅದೇ ಆಗಿರುತ್ತದೆ. ಮೊದಲಿಗೆ ಅದು ಒಂದು ಪ್ರತಿಕ್ರಿಯೆಯನ್ನು ಸೃಷ್ಟಿಸುತ್ತದೆ ಮತ್ತು ನಂತರ ಕೂಡ ನೀವು ಅದರೊಡನೆ ಹೆಚ್ಚು ಕಡಿಮೆ ಒಪ್ಪಿಗೆಯಿಂದಿದ್ದರೆ, ನೀವು ಈ ಸಂಕಲ್ಪವನ್ನು ತೆಗೆದುಕೊಳ್ಳುತ್ತೀರಿ ಮತ್ತು ನೀವು ಸುತ್ತಲೆಲ್ಲ ಪ್ರತಿಫಲಿಸಲು ಪ್ರಾರಂಭಿಸುತ್ತೀರಿ. ಹಾಗಾಗಿ ಏನು ಸಂಭವಿಸುತ್ತದೆ ಎಂಬುದನ್ನು ನೋಡುವಿರಿ. ಅದು ಎಲ್ಲ ಕಾಲದಲ್ಲೂ ನಡೆಯುತ್ತಲೇ ಇರುತ್ತದೆ. ಮೊದಲು ಒಬ್ಬ ಮನುಷ್ಯನಲ್ಲಿ ಸಂಕಲ್ಪವಿರುತ್ತದೆ, ನಂತರ ಇನ್ನೊಬ್ಬನಲ್ಲಿ, ಹೀಗೆ ಹರಡುತ್ತ, ಕೊನೆರಹಿತವಾಗಿ ಸಾಗುತ್ತದೆ. ಅದು ಎಲ್ಲೆಡೆಯಲ್ಲೂ ಸಂಭವಿಸುತ್ತಿರುತ್ತದೆ, ಅತ್ಯಂತ ಬಲಿಷ್ಠವಾದ ಸಂಕಲ್ಪ ಪ್ರಾಬಲ್ಯ ಮೆರೆಸುತ್ತದೆ. ಅದು ಯೋಗ್ಯವಾದದ್ದಲ್ಲ.

"ನಾವು ಭಗವಂತನ ಸೇವೆಯಲ್ಲಿದ್ದೇವೆ" ಎಂದು ಹೇಳಿದಾಗ ಅದು ಕೇವಲ ಶಬ್ದಗಳಾಗಿರುವುದಿಲ್ಲ. ಅವನೇ ನಮ್ಮ ಮೂಲಕ ಕಾರ್ಯ ಕೈಕೊಳ್ಳಬೇಕು, ನಾವೇ ಕೈಕೊಳ್ಳುತ್ತಿರುವುದಿಲ್ಲ. ಅತಿ ದೊಡ್ಡ ಆಕ್ಷೇಪಣೆ ಎಂದರೆ: ದೈವೀ ಸಂಕಲ್ಪವನ್ನು ಅರಿತುಕೊಳ್ಳುವುದು ಹೇಗೆ? ಆದರೆ ವಾಸ್ತವದಲ್ಲಿ ನಾನು ನಿಮಗೆ ಹೇಳುವುದೇನೆಂದರೆ: ನೀವು ನಿಷ್ಕಪಟರಾಗಿ ನಿಮ್ಮ ವೈಯಕ್ತಿಕ ಸಂಕಲ್ಪವನ್ನು ನಿರಾಕರಿಸಿದಾಗ, ನೀವು ತಿಳಿದುಕೊಳ್ಳುವಿರಿ.

ನಾವು ಜೀವನವನ್ನು ಬದಲಿಸಲು ಬಯಸುತ್ತೇವೆ... ನಾವು ಅದರಿಂದ ಪಲಾಯನ ಮಾಡಲು ಬಯಸುವುದಿಲ್ಲ. ಇಂದಿನವರೆಗೆ ಅವರು ದೇವನೆಂದು ಕರೆಯುವವನ್ನು ತಿಳಿದುಕೊಳ್ಳಲು, ದೇವನೊಡನೆ ಸಂಬಂಧದಲ್ಲಿ ಪ್ರವೇಶಿಸಲು ಪ್ರಯತ್ನಿಸಿದವರೆಲ್ಲ ಜೀವನವನ್ನು ಬಿಟ್ಟುಕೊಟ್ಟಿರುತ್ತಾರೆ. ಅವರು ಹೇಳಿದ್ದಾರೆ: "ಜೀವನ ಒಂದು ಅಡೆತಡೆಯಾಗಿದೆ. ಅದಕ್ಕಾಗಿ ನಾವು ಜೀವನವನ್ನು ಬಿಟ್ಟುಕೊಡುತ್ತೇವೆ." ಹಾಗಾಗಿ ಭಾರತದಲ್ಲಿ ಎಲ್ಲವನ್ನೂ ತ್ಯಾಗಮಾಡಿದ ಸನ್ಯಾಸಿಗಳಿದ್ದರು; ಯುರೋಪಿನಲ್ಲಿ ಬೈರಾಗಿಗಳು, ಏಕಾಂತಿಗಳು ಇರುತ್ತಿದ್ದರು. ಸರಿ, ಅವರು ಪಾರಾಗಿ ಹೋಗಬಹುದು, ಆದಾಗ್ಯೂ ಅವರು ಮರುಜನ್ಮ ತಾಳಿದಾಗ ಎಲ್ಲವನ್ನೂ ಮತ್ತೆ ಪ್ರಾರಂಭ ಮಾಡಬೇಕಾಗುವುದು. ಆದರೆ ಜೀವನ ಅದಿದ್ದ ಹಾಗೆ ಉಳಿದುಕೊಳ್ಳುತ್ತದೆ.

**CWM, 13/332–34** **- ಶ್ರೀಮಾತೆ**

*

## ನಿಜವಾದ ಅರೋವಿಲಿಯನ್ ಆಗುವುದು

ಒಬ್ಬ ನಿಜವಾದ ಅರೋವಿಲಿಯನ್ ಆಗುವುದಕ್ಕೆ ಮನುಷ್ಯ ಏನಾಗಿರಬೇಕು? ನೀವು ಪ್ರಶ್ನೆಯನ್ನು ಆ ರೀತಿಯಲ್ಲಿ ಇರಿಸುತ್ತೀರಿ. (A ಅವಳಿಗೆ) ನಿನ್ನಲ್ಲಿ ಯಾವುದೇ ವಿಚಾರಗಳಿವೆಯೆ?

A. ನಿಜವಾದ ಅರೋವಿಲಿಯನ್‌ನಾಗುವುದಕ್ಕೆ ನನಗೆ ಹೊಳೆಯುವ ಮೊದಲ ವಿಷಯವೆಂದರೆ ಭಗವಂತನಿಗೆ ಇಡಿಯಾಗಿ ಮುಡುಪಾಗಿರಿಸಿಕೊಳ್ಳುವುದಾಗಿದೆ.

ಅದು ಒಳ್ಳೆಯದು, ಆದರೆ ಅಂತಹ ಜನರು ಬಹಳಷ್ಟಿಲ್ಲ. (G ಗೆ) ಇಲ್ಲಿ ನನಗೊಂದು ಹಾಳೆಯನ್ನು ಕೊಡು. ನಾನು ಅದನ್ನು ಮೊದಲನೆಯ ವಿಷಯವೆಂದು ಬರೆದಿಡುತ್ತೇನೆ.

(ಶ್ರೀಮಾತೆಯವರು ಬರೆಯುತ್ತಾರೆ) ಅದನ್ನು ನಾನು ಮೊದಲನೆಯದೆಂದು ಬರೆದಿದ್ದೇನೆ.

ಹಾಗಾಗಿ ಎರಡನೆಯದು ಏನು ಎಂಬುದನ್ನು ನೋಡೋಣ.

ನಡವಳಿಕೆಯ ಹೆಚ್ಚು ವ್ಯಾವಹಾರಿಕ ದೃಷ್ಟಿಕೋನದಿಂದ ನೋಡಿದಾಗ, ಉದಾಹರಣೆಗೆ: ನಾವು ಎಲ್ಲ ನೈತಿಕ ಹಾಗೂ ಸಾಮಾಜಿಕ ಸಂಪ್ರದಾಯಗಳಿಂದ ಮುಕ್ತರಾಗಲು ಬಯಸುತ್ತೇವೆ. ಆದರೆ ಅಲ್ಲಿಯೇ ನಾವು ಬಹಳ ಕಾಳಜಿ–ಯಿಂದಿರಬೇಕು! ಈ ವಿಷಯಗಳಿಂದ ಮುಕ್ತರಾಗಲು ಮನುಷ್ಯ ಅವುಗಳ ಕೆಳಗೆ ಮುಳುಗಿಹೋಗಲು ಪರವಾನಿಗೆ ಮತ್ತು ಆಸೆಗಳ ಕುರುಡಾದ ತೃಪ್ತಿಪಡೆಯುವಿಕೆ ಇವುಗಳ ಮೂಲಕ ಸಾಗಿ ಹೋಗಬಾರದು. ಆಸೆಗಳನ್ನು ನಿರ್ಮೂಲ ಮಾಡುವುದರ ಮೂಲಕ, ಈ ಸಂಪ್ರದಾಯಗಳಿಂದ ಮೇಲಕ್ಕೇರಿ ಹೋಗುವುದರ ಮೂಲಕ, ಭಗವಂತನಿಗೆ ವಿಧೇಯರಾಗಿರುವುದನ್ನು ನೈತಿಕ ನಿಯಮಗಳ ಸ್ಥಾನದಲ್ಲಿ ಇರಿಸುವುದರ ಮೂಲಕ ಮನುಷ್ಯ ತನ್ನನ್ನು ಮುಕ್ತಗೊಳಿಸಬೇಕು.

*

ನಮಗೊಂದು ದೇಹವನ್ನು ಕೊಡಲಾಗಿದೆ, ಅದನ್ನು ತಿರಸ್ಕರಿಸುವುದಕ್ಕಲ್ಲ, ಆದರೆ ಅದು ಹೆಚ್ಚು ಒಳ್ಳೆಯದಾದ ಏನೋ ಒಂದನ್ನಾಗಿ ಮಾಡುವುದಕ್ಕಿದೆ. ಮಾನವ ದೇಹವನ್ನು ಸುಧಾರಿಸಬೇಕು, ಪರಿಪೂರ್ಣಗೊಳಿಸಬೇಕು, ಅದು ಮನುಷ್ಯನಿಗಿಂತ ಉಚ್ಚತರ ಸತ್ತೆಯನ್ನು ಅಭಿವ್ಯಕ್ತಗೊಳಿಸಲು ಕ್ಷಮತೆಯಿರುವ

ಅತಿಮಾನವ ದೇಹವಾಗಬೇಕು. ನಾವು ಅದನ್ನು ನಿರ್ಲಕ್ಷ್ಯ ಮಾಡಿದರೆ ನಿಶ್ಚಿತವಾಗಿ ಇದು ಸಂಭವಿಸಲಾರದು. ಉಚ್ಚತರ ಸೌಂದರ್ಯವನ್ನು ಹಾಗೂ ಪ್ರಜ್ಞೆಯನ್ನು ಅಭಿವ್ಯಕ್ತಗೊಳಿಸುವ ದೇಹವನ್ನಾಗಿ ಮಾಡಲು ತಿಳಿವಳಿಕೆ ಪಡೆದ ಶಾರೀರಿಕ ಸಂಸ್ಕಾರ, ದೇಹದ ಶಾರೀರಿಕ ಚಟುವಟಿಕೆ ಇವುಗಳನ್ನು ಉಪಯೋಗಿಸಬೇಕು, ಅವುಗಳನ್ನು ವೈಯಕ್ತಿಕ ಚಿಕ್ಕ ಆವಶ್ಯಕತೆಗಳಿಗಾಗಿ ಹಾಗೂ ತೃಪ್ತಿಗಾಗಿ ಉಪಯೋಗಿಸಬಾರದು ಮತ್ತು ಅದಕ್ಕಾಗಿ ಶಾರೀರಿಕ ಶಿಕ್ಷಣಕ್ಕೆ ಒಂದು ಮಹತ್ವದ ಸ್ಥಾನವಿದೆ, ಅದನ್ನು ಅದಕ್ಕೆ ಕೊಡಬೇಕು.

ಮತ್ತು ದೇಹಕ್ಕೆ ಈ ವಿದ್ಯಾವಂತಿಕೆ ಕೊಡುವುದನ್ನು ಜ್ಞಾನೋದಯ ಪಡೆದ ಅರ್ಥದಲ್ಲಿ ಕೊಡಬೇಕು. ವಿಲಕ್ಷಣ ಇಲ್ಲವೆ ಅದ್ಭುತ ಕಾರ್ಯಗಳನ್ನು ಕೈಕೊಳ್ಳುವುದಕ್ಕಾಗಿ ಅಲ್ಲ, ಆದರೆ ದೇಹಕ್ಕೆ ಉಚ್ಚತರ ಪ್ರಜ್ಞೆಯೊಂದನ್ನು ಅಭಿವ್ಯಕ್ತಗೊಳಿಸಲು ಸಾಕಷ್ಟು ಬಲಿಷ್ಠವಾಗಿರುವ ಹಾಗೂ ನಮ್ಯವಾಗಿರುವ ಸತ್ತೆಯ ಸಾಧ್ಯತೆಯನ್ನು ಒದಗಿಸಿಕೊಡುವುದಾಗಿರುತ್ತದೆ.

ಅದು ದೀರ್ಘ ಯಾದಿಯ ಭಾಗವಾಗಿರುತ್ತದೆ.

*

ಅಲ್ಲಿ ನಾನು ಸಂಖ್ಯೆ ಎರಡು ಎಂದು ಬರೆದಿದ್ದೇನೆ: "ಅರೋವಿಲೆಯನ್‌ನು ತನ್ನ ಆಸೆಗಳ ಗುಲಾಮನಾಗುವುದನ್ನು ಬಯಸುವುದಿಲ್ಲ." ಅದು ಪ್ರಧಾನ ತೀರ್ಮಾನ.

**CWM, 13/335–37** **- ಶ್ರೀಮಾತೆ**

*

**ಪ್ರಜ್ಞೆಯನ್ನು ಕೆಳಸ್ತರಕ್ಕೆ ತರುವ ರೂಢಿಗಳು**

ಅರೋವಿಲೆಯಲ್ಲಿ ಜೀವಿಸುವ ಹಾಗೂ ಹಳೆಯ ರೂಢಿಗಳನ್ನು (ಹಳೆಯವು ಹಾಗೂ ಹೊಸದಾದವುಗಳೂ ಕೂಡ) ಅನುಸರಿಸುವ ಒತ್ತಾಯ ತರುವ ಜನರಿದ್ದಾರೆ; ಆ ರೂಢಿಗಳು ಪ್ರಜ್ಞೆಗೆ ಹಾನಿಯನ್ನುಂಟುಮಾಡುತ್ತವೆ, ಪ್ರಜ್ಞೆಯನ್ನು ಕೆಳಸ್ತರಕ್ಕಿಳಿಸುತ್ತವೆ, ಆ ರೂಢಿಗಳೆಂದರೆ ಸಿಗರೇಟ ಸೇದುವುದು, ಮದ್ಯ ಕುಡಿಯುವುದು, ಮಾದಕ ವಸ್ತುಗಳನ್ನು ಸೇವಿಸುವುದು ಇತ್ಯಾದಿ. ಅದೆಲ್ಲವೂ ನಿಮ್ಮ ಸತ್ತೆಯನ್ನು ತುಂಡು ತುಂಡಾಗಿ ಕತ್ತರಿಸಿ ಹಾಕುತ್ತಿರುವಂತೆ ಇರುತ್ತದೆ. ಸ್ವಾಭಾವಿಕವಾಗಿ ಆಶ್ರಮದಲ್ಲಿ ಇದಕ್ಕೆಲ್ಲ ಬೇಡ ಎಂದು ಹೇಳಿದೆ. ನಾವು ಪ್ರಜ್ಞೆಯಲ್ಲಿ

ಬೆಳೆಯಲು ಬಯಸುತ್ತೇವೆ, ಆಸೆಗಳ ಆಳದಲ್ಲಿ ಇಳಿದು ಹೋಗುವುದನ್ನು ಬಯಸುವುದಿಲ್ಲ. ಅದನ್ನು ತಿಳಿದುಕೊಳ್ಳಲು ತಿರಸ್ಕರಿಸುವವರನ್ನು ಕುರಿತು ನಾನು ಹೇಳುತ್ತೇನೆ: ಅರೋವಿಲೆಯ ಗುರಿ ಒಂದು ಹೊಸ, ಹೆಚ್ಚು ಆಳವಾದ, ಹೆಚ್ಚು ಸಂಪೂರ್ಣವಾದ, ಹೆಚ್ಚು ಪರಿಪೂರ್ಣವಾದ ಜೀವನವನ್ನು ಶೋಧ ಮಾಡುವುದಾಗಿದೆ ಮತ್ತು ಜಗತ್ತಿಗೆ ನಾಳೆಯ ದಿನಗಳು ಇವತ್ತಿನಿಗಿಂತ ಹೆಚ್ಚು ಒಳ್ಳೆಯವಾಗಿರುತ್ತವೆ ಎಂದು ತೋರಿಸಿಕೊಡುವುದಾಗಿದೆ.

ಕೆಲವರಿದ್ದಾರೆ, ಅವರು ಸಿಗರೇಟ ಸೇದುವುದು, ಮದ್ಯ ಕುಡಿಯುವುದು ನಾಳಿನ ಜೀವನದ ಭಾಗವಾಗುತ್ತದೆ ಎಂದು ನಂಬುತ್ತಾರೆ. ಅದು ಅವರಿಗೆ ಸೇರಿದ ವ್ಯವಹಾರ. ಅವರು ಈ ಅನುಭವದಾದ್ಯಂತ ಸಾಗಿಹೋಗಲು ಬಯಸಿದರೆ ಹಾಗೆ ಮಾಡಲಿ. ಅವರು ತಮ್ಮದೇ ಆಸೆಗಳಲ್ಲಿ ಸೆರೆಗೊಳಗಾಗುವರೆಂಬುದನ್ನು ಅರಿತುಕೊಳ್ಳುತ್ತಾರೆ. ಆದರೆ ಅದೇನೇ ಇರಲಿ, ನಾನು ನೈತಿಕವಾದಿಯಲ್ಲ, ಎಳ್ಳಷ್ಟೂ ಅಲ್ಲ. ಅದು ಅವರದೇ ವ್ಯವಹಾರ. ಅವರು ಈ ಅನುಭವದಾದ್ಯಂತ ಸಾಗಿಹೋಗಲು ಬಯಸಿದರೆ ಹಾಗೆ ಮಾಡಲಿ. ಆದರೆ ಆಶ್ರಮ ಅದಕ್ಕೆ ಸ್ಥಾನವಲ್ಲ. ದೇವರೇ, ಧನ್ಯವಾದಗಳು. ಆಶ್ರಮದಲ್ಲಿ ಜೀವನ ಬೇರೆ ಏನೋ ಒಂದಾಗಿದೆ ಎಂಬುದನ್ನು ಕಲಿತುಕೊಂಡಿದ್ದೇವೆ. ನಿಜವಾದ ಜೀವನ ಆಸೆಗಳನ್ನು ತೃಪ್ತಿಪಡಿಸುವುದಲ್ಲ. ಮಾದಕ ವಸ್ತುಗಳ ಸೇವನೆಯಿಲ್ಲದೆ ಅಗೋಚರ ಜಗತ್ತಿನೊಡನೆ ಹೆಚ್ಚು ಒಳ್ಳೆಯ ರೀತಿಯಲ್ಲಿ, ಹೆಚ್ಚಿನ ಪ್ರಜ್ಞೆಯೊಂದಿಗೆ, ಹೆಚ್ಚು ನಿಯಂತ್ರಿತ ಸಂಪರ್ಕವನ್ನು ಮಾದಕ ವಸ್ತುಗಳು ತರಬಹುದಾದನ್ನು ಪಡೆಯಬಹುದು ಎಂಬುದನ್ನು ನಾನು ಅನುಭವದಿಂದ ಕಂಡುಕೊಂಡದ್ದನ್ನು ದೃಢೀಕರಿಸುತ್ತೇನೆ. ಕೇವಲ ಮನುಷ್ಯ ತನ್ನನ್ನು ನಿಯಂತ್ರಿಸಬೇಕು. ಅದು ವಿಷವನ್ನು ನುಂಗುವುದಕ್ಕಿಂತ ಹೆಚ್ಚು ಕಠಿಣವಾದದ್ದು. ಆದರೆ ನಾನು ಬೋಧನೆ ಮಾಡುವುದಿಲ್ಲ.

ಎಲ್ಲ ಆಸೆಗಳ ಮೇಲೆ ಜಯ ಸಾಧಿಸಿ ಹಾಗೂ ಉಚ್ಚತರ ಶಕ್ತಿಗಳಿಗೆ ತನ್ನನ್ನು ತೆರೆದಿರಿಸಿಕೊಂಡು ಅರೋವಿಲೆ ಒಂದು ಉದಾಹರಣೆಯಾದರೆ ಮತ್ತು ಆದಾಗ ನಾವು ಎಲ್ಲೆಡೆಗೆ ಹೋಗಬಲ್ಲೆವು. ಅರೋವಿಲಿಯನ್‌ರು ಜಗತ್ತಿನಲ್ಲಿ ಸಂಚರಿಸುವ ಪ್ರಕಾಶಗಳಂತಾದಾಗ ಅವರನ್ನು ಸ್ವಾಗತಿಸಲಾಗುವುದು.

**CWM, 13/345** **- ಶ್ರೀಮಾತೆ**

*

## ನಿಜವಾದ ಸ್ವಾತಂತ್ರ್ಯ ಮತ್ತು ಅದು ಆಸೆಗಳನ್ನು ತೃಪ್ತಿಪಡಿಸುವುದಕ್ಕೆ ಒಂದು ಪರವಾನಿಗೆಯಲ್ಲ

ನ್ಯಾಯಬದ್ಧತೆಯೊಂದಿಗೆ ನಾನು ಸಂಬಂಧ ಹೊಂದಿಲ್ಲ, ಶಾಸನಗಳು ಹಾಗೂ ಸಂಪ್ರದಾಯಗಳು ಇವುಗಳೊಂದಿಗೆ ನಾನು ಸಂಬಂಧ ಹೊಂದಿಲ್ಲ. ಆದರೆ ನಾನು ಹೆಚ್ಚು ದೈವಿಕವಾದ ಜೀವನವನ್ನು ಬಯಸುತ್ತೇನೆ, ಪಶು ಜೀವನವನ್ನಲ್ಲ.

ಎಲ್ಲ ಆಸೆಗಳನ್ನು ಬಿಟ್ಟುಕೊಡುವುದಕ್ಕಾಗಿ ಮತ್ತು ಭಗವಂತನೆಡೆಗೆ ಹೊರಳುವುದಕ್ಕಾಗಿ ಮತ್ತು ಭಗವಂತನ ಬಗ್ಗೆ ಪ್ರಜ್ಞೆಯುಳ್ಳವರಾಗಲು ನಾವಿಲ್ಲಿದ್ದೇವೆ. ನಾವು ಅರಸುತ್ತಿರುವ ಭಗವಂತ ದೂರದಲ್ಲಿಲ್ಲ ಹಾಗೂ ಸಮೀಪಿಸಲಾಗದವನಲ್ಲ. ಅವನು ತನ್ನದೇ ಸೃಷ್ಟಿಯ ತಿರುಳಿನಲ್ಲಿದ್ದಾನೆ. ಅವನು ನಮ್ಮಿಂದ ಬಯಸುವು–ದೇನೆಂದರೆ ಅವನನ್ನು ಕಂಡುಕೊಂಡು ವೈಯಕ್ತಿಕ ಪರಿವರ್ತನೆಯ ಮೂಲಕ ಅವನನ್ನು ಅರಿತುಕೊಳ್ಳುವುದಕ್ಕೆ ನಾವು ಕ್ಷಮತೆಯುಳ್ಳವರಾಗಬೇಕು, ಅವನೊಡನೆ ಏಕವಾಗಬೇಕು, ಕೊನೆಯಲ್ಲಿ, ಅವನನ್ನು ಪ್ರಕಟಿಸಬೇಕು ಎಂಬುದಾಗಿದೆ. ಇದಕ್ಕೆ ನಾವು ನಮ್ಮನ್ನು ಮುಡುಪಾಗಿರಿಸಿಟ್ಟುಕೊಳ್ಳಬೇಕು, ಇದು ನಮ್ಮ ಅಸ್ತಿತ್ವದ ನಿಜವಾದ ಕಾರಣ. ಈ ಘನತೆವೆತ್ತ ಸಿದ್ಧಿಯತ್ತ ನಮ್ಮ ಮೊದಲ ಹೆಜ್ಜೆ ಅತಿಮಾನಸ ಪ್ರಜ್ಞೆಯನ್ನು ಪ್ರಕಟಿಸುವುದಾಗಿದೆ.

**CWM, 13/347** **- ಶ್ರೀಮಾತೆ**

*

## ಕ್ರಮಬದ್ಧತೆಗಾಗಿ ಸಾಮರಸ್ಯಕ್ಕಾಗಿ ಹಾಗೂ ಸೌಂದರ್ಯಕ್ಕಾಗಿ ಶ್ರಮಪಡಬೇಕು

ನಾವು ಕ್ರಮಬದ್ಧತೆಗಾಗಿ, ಸಾಮರಸ್ಯಕ್ಕಾಗಿ ಹಾಗೂ ಸೌಂದರ್ಯಕ್ಕಾಗಿ ಶ್ರಮಪಡಬೇಕು ಮತ್ತು ಈ ಕ್ಷಣದಲ್ಲಿ ಅಲ್ಲಿಲ್ಲದ ಎಲ್ಲ ವಿಷಯಗಳಿಗಾಗಿ ಅಭೀಪ್ಸೆ ಪಡಬೇಕು. ನಾವು ಸಂಘಟಿಸುವವರಾದ್ದರಿಂದ ಕೈಕೊಳ್ಳಬೇಕಾದ ಕಾರ್ಯ ಇತರರು ಏನನ್ನು ಕೈಕೊಳ್ಳಬೇಕು ಎಂಬುದಕ್ಕಾಗಿ ಒಂದು ಉದಾಹರಣೆಯನ್ನು ಇರಿಸುವುದಾಗಿದೆ. ನಾವು ವೈಯಕ್ತಿಕ ಪ್ರತಿಕ್ರಿಯೆಗಳ ಮೇಲೇರಿ ಹೋಗಬೇಕು, ಪ್ರತ್ಯೇಕವಾಗಿ ಭಗವಂತನ ಸಂಕಲ್ಪಕ್ಕೆ ವೈಯಕ್ತಿಕ ಪ್ರತಿಕ್ರಿಯೆಗಳ ಮೇಲೇರಿ ಹೋಗಬೇಕು, ಪ್ರತ್ಯೇಕವಾಗಿ ಭಗವಂತನ ಸಂಕಲ್ಪಕ್ಕೆ ಅನುಗೊಳಿಸಿಕೊಂಡವರು ಆಗಿರಬೇಕು ಮತ್ತು ದೈವೀ ಸಂಕಲ್ಪದ ವಿಧೇಯ ಉಪಕರಣಗಳಾಗಬೇಕು – ನಾವು ಯಾವುದೇ ವೈಯಕ್ತಿಕ ಪ್ರತಿಕ್ರಿಯೆಯಿಲ್ಲದೆ ಅವೈಯಕ್ತಿಕರಾಗಬೇಕು.

ನಾವು ಎಲ್ಲ ನಿಷ್ಕಾಪಟ್ಯದಿಂದಿರಬೇಕು. ಭಗವಂತ ಏನನ್ನು ಬಯಸುತ್ತಾನೋ ಅದಾಗಲಿ, ಅಷ್ಟೇ. ನಾವು ಅದಾಗುವುದು ಸಾಧ್ಯವಾದರೆ, ನಾವು ಹೇಗಿರಬೇಕೋ ಹಾಗಿರುತ್ತೇವೆ ಮತ್ತು ಅದೇ ನಾವಾಗಬೇಕು. ಉಳಿದದ್ದೆಲ್ಲದಕ್ಕಾಗಿ ನಮಗೆ ಸಾಧ್ಯವಿದ್ದಷ್ಟು ಒಳ್ಳೆಯದನ್ನು ಕೈಕೊಳ್ಳುತ್ತೇವೆ.

ಅದು ಸುಲಭವಲ್ಲ ಎಂಬುದು ನನಗೆ ತಿಳಿದಿದೆ, ಆದರೆ ನಾವು ಇಲ್ಲಿ ಸುಲಭವಾದ ಕಾರ್ಯಗಳನ್ನು ಮಾಡುವುದಕ್ಕಾಗಿ ಇರುವುದಿಲ್ಲ; ಸುಲಭ ಜೀವನ ಬಯಸುವವರಿಗಾಗಿ ಇಡೀ ಜಗತ್ತು ಅಲ್ಲಿದೆ. ಅರೋವಿಲೆಗೆ ಬರುವುದು ಸುಲಭ ಜೀವನಕ್ಕಾಗಿ ಬರುವುದಲ್ಲ ಎಂದು ಜನರು ಭಾವನೆ ತಂದುಕೊಳ್ಳಲಿ ಎಂದು ನಾನು ಇಷ್ಟಪಡುತ್ತೇನೆ – ಅದು ಪ್ರಗತಿಗಾಗಿ ಬೃಹದಾಕಾರದ ಪ್ರಯತ್ನ ಮಾಡುವುದಕ್ಕೆ ಬರುವುದಾಗಿದೆ.

*



**ಯಶಸ್ಸಿನ ಸಾಮರ್ಥ್ಯ** (ಅರೋವಿಲೆಯ ಯಶಸ್ಸು)

ತಮ್ಮ ಪ್ರಯತ್ನವನ್ನು ಹೇಗೆ ಮುಂದುವರಿಸಿಕೊಂಡು ಹೋಗಬೇಕು ಎನ್ನುವವರ ಸಾಮರ್ಥ್ಯ

(ಶ್ರೀಮಾತೆಯವರು ಆಧ್ಯಾತ್ಮಿಕ ಪ್ರಾಮುಖ್ಯತೆಯನ್ನು ಹಾಗೂ ವಿವರಣೆಯನ್ನು ನೀಡಿದ್ದಾರೆ)

**Botanical name: Hibiscus rosa-sinensis**

*

ಯಾರಿಗೆ ಅದನ್ನು ಕಾಪಾಡಿಕೊಂಡು ಬರಲಾಗುವುದಿಲ್ಲವೋ ಅವರು ಅರೋವಿಲೆ ತೊರೆದು ಹೋಗಬೇಕು. ವಿಷಯಗಳು ಆ ನಿಲುವು ತಾಳಿವೆ. ಪ್ರಗತಿಗಾಗಿ, ಸತ್ತೆಯ ದೈವೀಕರಣಕ್ಕಾಗಿ ಎಷ್ಟೊಂದು ಗಾಢ ಆವಶ್ಯಕತೆ ಇರಲಿ ಎಂದು ನಾನು ಇಚ್ಛೆಪಡುತ್ತೇನೆಂದರೆ ಅದನ್ನು ಕೈಕೊಳ್ಳಲು, ಅದಕ್ಕೆ ಹೊಂದಿಕೊಳ್ಳಲು ಶಕ್ತರಾಗದವರು (ಶಕ್ತರಾಗದವರು ಇಲ್ಲವೆ ಇಷ್ಟವಿಲ್ಲದವರು) "ಓಹ್, ನಾನಿದನ್ನು ನಿರೀಕ್ಷಿಸಿದ್ದಿಲ್ಲ" ಎಂದು ಹೇಳುತ್ತ ಬಿಟ್ಟುಕೊಟ್ಟು ಹೋಗುತ್ತಾರೆ. ಈಗಿರುವ ಹಾಗೆ ಸುಲಭವಾದ ಜೀವನವನ್ನು, ತಮ್ಮಿಷ್ಟದ ಪ್ರಕಾರ ಕಾರ್ಯ ಕೈಕೊಳ್ಳುವುದನ್ನು ಬಯಸುವವರು "ಅರೋವಿಲೆಗೆ ಹೋಗೋಣ" ಎಂದು ಹೇಳುತ್ತಾರೆ. ಅದು ತದ್ವಿರುದ್ಧವಾದದ್ದಾಗಿರಬೇಕು. ಅರೋವಿಲೆಗೆ ಬರುವುದರ ಅರ್ಥ ಬಹುಮಟ್ಟಿಗೆ ಪ್ರಗತಿಗಾಗಿ ಅತಿಮಾನವ ಪ್ರಯತ್ನ ಮಾಡುವುದಿರುತ್ತದೆ ಎಂದು ಜನರು ತಿಳಿದುಕೊಳ್ಳಬೇಕು.

ನಮ್ಮ ಮನೋಧರ್ಮ ಹಾಗೂ ಪ್ರಯತ್ನ ಇವುಗಳಲ್ಲಿರುವ ನಿಷ್ಕಾಪಟ್ಯ ವ್ಯತ್ಯಾಸವನ್ನುಂಟು ಮಾಡುತ್ತದೆ. ಇಲ್ಲಿ ಕಾಪಟ್ಯ ಹಾಗೂ ಮಿಥ್ಯೆ ಇವುಗಳಿಗೆ ಸ್ಥಾನವಿಲ್ಲ ಎಂಬುದನ್ನು ಜನರು ಭಾವನೆಗೆ ತಂದುಕೊಳ್ಳಬೇಕು – ಅವು ಇಲ್ಲಿ ಕಾರ್ಯ ಮಾಡುವುದಿಲ್ಲ. ತಮ್ಮ ಇಡೀ ಜೀವನವನ್ನು ಮನುಕುಲದಾಚೆಗೆ ಸಾಗಿಹೋಗಲು, ಅರ್ಪಿಸಿದ ಜನರನ್ನು ಮೂರ್ಖರನ್ನಾಗಿ ಮಾಡಲಾರಿರಿ.

ಮನವರಿಕೆ ಮಾಡಿಕೊಳ್ಳುವುದಕ್ಕೆ ಒಂದು ಮಾರ್ಗ ಮಾತ್ರವಿದೆ – ಅದು ಅದಾಗುವುದಾಗಿದೆ.

ಆಗ ನಾವು ಬಲಿಷ್ಠರಾಗಿ ನಿಂತುಕೊಳ್ಳುತ್ತೇವೆ, ಎಲ್ಲ ದೈವೀ ಶಕ್ತಿ ನಮ್ಮ ಬದಿಯೊಂದಿಗಿರುತ್ತದೆ.

ಅತಿಮನುಕುಲವನ್ನು ತಯಾರು ಮಾಡುವುದಕ್ಕಾಗಿ ನಾವಿಲ್ಲಿದ್ದೇವೆ, ಆಸೆಗಳು ಹಾಗೂ ಸುಲಭ ಜೀವನದಲ್ಲಿ ಹಿಂದೆ ಬಿದ್ದುಬಿಡುವುದಕ್ಕಲ್ಲ – ಇಲ್ಲ.

**ಅನುಯಾಯಿಯೊಂದಿಗೆ ಮಾತುಕತೆ, ಎಪ್ರಿಲ್ 4, 1972** **- ಶ್ರೀಮಾತೆ**

*



**ಪವಾಡ (ಅರೋವಿಲೆಯ ಗಾಳಿ)**

ಅದ್ಭುತ, ವಿಚಿತ್ರ, ಅನಿರೀಕ್ಷಿತ
(ಶ್ರೀಮಾತೆಯವರು ನೀಡಿದ ಆಧ್ಯಾತ್ಮಿಕ ಪ್ರಾಮುಖ್ಯತೆ ಹಾಗೂ ವಿವರಣೆ)

**Botanical name: Memecylon tinctorium**

*

**ಪ್ರಶ್ನೆ:** *ಭಿನ್ನ ಮೌಲ್ಯಗಳನ್ನು ಹೊಂದಿರುವ ಜನರು ಇಲ್ಲಿ ಹೇಗೆ ಜೀವಿಸಬಲ್ಲರು ಹಾಗೂ ಸಾಮರಸ್ಯದಿಂದ ಒಟ್ಟಿಗೆ ಕಾರ್ಯ ಕೈಕೊಳ್ಳಬಲ್ಲರು?*

**ಶ್ರೀಮಾತೆ:** ಅದಕ್ಕೆ ಪರಿಹಾರವೆಂದರೆ ಮನುಷ್ಯ ತನ್ನ ಅಂತರಂಗದ ಆಳದಲ್ಲಿ ಸಾಗಿಹೋಗುವುದಾಗಿದೆ, ಅಲ್ಲಿ ಎಲ್ಲ ವ್ಯತ್ಯಾಸಗಳು ಜೊತೆಗೂಡುತ್ತವೆ, ಅದು ಸಾರಭೂತವಾದ ಹಾಗೂ ಸನಾತನ ದೈವೀ ಏಕತೆಯನ್ನು ರಚಿಸುವುದಕ್ಕಾಗಿರುತ್ತದೆ.

**CWM, 13/201** **- ಶ್ರೀಮಾತೆ**

*

## ಮಾತೃ ಮಂದಿರ: ಅರೋವಿಲೆಯ ಆತ್ಮ

ಅದರ ಮೂಕ ಮನವಿಯ ಪ್ರಕಾಶಮಯ ನಿಶ್ಚಲತೆಯಲಿ ಅದು
ಅದಕ್ಕೆ ಕಾಣಿಸದ ಎತ್ತರಗಳತ್ತ ಮೇಲ್ಗಡೆ ನೋಡಿಹುದು;
ಬಿಟ್ಟುಕೊಡಲಾಗದ ಹಂಬಲಿಸುವ ಆಳಗಳಿಂದ ಅದು
ಹಾತೊರೆದಿಹುದು.

ಅವನ ವಿಶಾಲ ಹಾಗೂ ಭವಿಷ್ಯಸೂಚಕ ಸಮಾಧಿಯ ಕೇಂದ್ರದಲಿ
ಅವನ ಮುಕ್ತ ಹಾಗೂ ಪತಿತ ಆತ್ಮಗಳ ಅರ್ಧದಾರಿಯ ನಡುವೆ,
ದೇವನ ದಿನ ಹಾಗೂ ಮರ್ತ್ಯನ ರಾತ್ರಿ ಇವುಗಳ ಮಧ್ಯೆ ಪ್ರವೇಶಿಸುತ್ತ,
ಪೂಜೆಯನು ಅದರ ಏಕೈಕ ನಿಯಮವೆಂದು ಒಪ್ಪಿಕೊಳ್ಳುತ್ತ,
ದಿವ್ಯಾನಂದವನು ವಸ್ತು–ವಿಷಯಗಳ ಏಕೈಕ ನಿಯಮವೆಂದು
ಒಪ್ಪಿಕೊಳ್ಳುತ್ತ,
ಯಾರೂ ಪಾಲುಗೊಳ್ಳಲಾಗದ ಕಟ್ಟುನಿಟ್ಟಿನ ಸಂತೋಷವನು
ತಿರಸ್ಕರಿಸುತ್ತ,
ಸ್ಥಿರತೆಗಾಗಿ ಜೀವಿಸುವ ಸ್ಥಿರತೆಯನು ತಿರಸ್ಕರಿಸುತ್ತ,
ಯಾರ ಸಲುವಾಗಿ ಇರಲು ಅದು ಸಂಕಲ್ಪ ಮಾಡಿತ್ತೋ ಅವಳತ್ತ
ಅದು ತಿರುಗಿಹುದು.
ಅದರ ಏಕಾಂತದ ಕನಸಿನ ಭಾವೋದ್ರೇಕದಲಿ
ಮುಚ್ಚಿದ ಧ್ವನಿರಹಿತ ಏಕಾಂತದಲ್ಲಿರುವ ಪೂಜಾಗೃಹದ ಹಾಗೆ
ಒರಗಿಕೊಂಡಿಹುದು
ಅಲ್ಲಿ ಏಕೈಕ ನಡುಗದಿಹ ಕಿರಣದ ಮೂಲಕ ಬೆಳಗಿಸಲಾದ
ಮುಡುಪಾಗಿರಿಸಿದ ರಜತ ವರ್ಣದ ನೆಲ ನಿದ್ರಿಸುತಿಹುದು
ಹಾಗೂ ಗೋಚರಿಸದ ದೈವೀ ಸಾನ್ನಿಧ್ಯ ಪ್ರಾರ್ಥನೆಯಲಿ
ಮೊಣಕಾಲೂರಿಹುದು.
ಶಾಂತಿಯನು ಮುಕ್ತಗೊಳಿಸುವ ಆಳವಾದ ಒಂದಾನೊಂದು
ಎದೆಯ ಮೇಲೆ
ಉಳಿದದ್ದೆಲ್ಲವೂ ಅಚಂಚಲತೆಯೊಂದಿಗೆ ತೃಪ್ತಿಯಿಂದಿಹುದು;
ಇದು ಮಾತ್ರ ಆಚೆಗೊಂದು ಸತ್ಯವಿದೆ ಎಂಬುದನು ತಿಳಿದುಕೊಂಡಿತ್ತು.
ನಿಧಾನಗತಿಯ ಉದ್ದೇಶಪೂರ್ವಕ ದೈವೀ ಸಾಮರ್ಥ್ಯಕ್ಕೆ ಒಪ್ಪಿಗೆ
ನೀಡುತ್ತ
ಉಳಿದೆಲ್ಲ ಭಾಗಗಳು ಕೇಂದ್ರೀಕೃತ ನಿದ್ರೆಯಲಿ ಕಿವುಡಾಗಿಹವು
ಆ ದೈವೀ ಸಾಮರ್ಥ್ಯ ಜಗತ್ತಿನ ದೋಷ ಹಾಗೂ ಅದರ ದುಃಖ
ಇವುಗಳನು ಸಹಿಸಿಕೊಳ್ಳುವುದು,
ವಿಶ್ವವ್ಯಾಪಿ ದೀರ್ಘ ಮುಂದೂಡಿಕೆಗೆ ಒಪ್ಪಿಗೆ ನೀಡುತ್ತ

ಕಾಲಾತೀತವಾಗಿ ತಾಳ್ಮೆಯುಳ್ಳ ವರ್ಷಗಳಾದ್ಯಂತ ಕಾದುಕೊಂಡಿರುತ್ತ
ಅವಳ ಬರುವಿಕೆಯನು ಅವರು ಪೃಥ್ವಿಗಾಗಿ, ಜನರಿಗಾಗಿ
ಬೇಡಿಕೊಂಡಿಹರು
ಅವಳನ್ನು ಈಗ ಕರೆಯುವುದಕ್ಕೆ ಇದು ತೀಕ್ಷ್ಣ ಪ್ರಧಾನಾಂಶವಾಗಿತ್ತು.

**ಸಾವಿತ್ರಿ: ಪು.332** **- ಶ್ರೀ ಅರವಿಂದರು**

*

**ಮಾತೃ ಮಂದಿರ**

(ಮಾತೃ ಮಂದಿರದ ತಳಪಾಯವನ್ನಿರಿಸುತ್ತ ಶ್ರೀಮಾತೆಯವರು ನೀಡಿದ ಸಂದೇಶ)

"ಮಾತೃ ಮಂದಿರ ಭಗವಂತನಿಗಾಗಿ ಅರೋವಿಲೆಯ ಅಭೀಪ್ಸೆಯ ಜೀವಂತ ಸಂಕೇತವಾಗಲಿ".

*

ಮಾತೃಮಂದಿರ ಅರೋವಿಲೆಯ ಆತ್ಮವಾಗಲಿರುವುದು.

ಹೆಚ್ಚು ತೀವ್ರಗತಿಯಿಂದ ಆತ್ಮ ಅಲ್ಲಿ ಇರುವಂತಾದಾಗ ಅದು ಎಲ್ಲರಿಗೂ ವಿಶೇಷವಾಗಿ ಅರೋವಿಲೆಯಲ್ಲಿ ವಾಸಿಸುವರಿಗೂ ಹೆಚ್ಚು ಒಳ್ಳೆಯದಾಗುವುದು.

*

ಪರಿಪೂರ್ಣತೆಗಾಗಿ ಮನುಷ್ಯನ ಅಭೀಪ್ಸೆಗೆ ಭಗವಂತನ ಉತ್ತರದ ಸಂಕೇತವಾಗಬೇಕೆಂದು ಮಾತೃಮಂದಿರ ಬಯಸುತ್ತದೆ.

ಪ್ರಗತಿಪರ ಮಾನವ ಐಕ್ಯತೆಯಲ್ಲಿ ಪ್ರಕಟವಾಗುತ್ತಿರುವ ಭಗವಂತನ ಏಕೀಭಾವ.

**CWM, 13/223–24** **- ಶ್ರೀಮಾತೆ**

*

ಮಾತೃಮಂದಿರ ಅರೋವಿಲೆ ಭಗವಂತನಿಗಾಗಿ ಹೊಂದಿರುವ ಅಭೀಪ್ಸೆಯ ಜೀವಂತ ಸಂಕೇತವಾಗಲಿ.

*



(ನಾಲ್ಕು ಆಧಾರ ಸ್ತಂಭಗಳ ಪ್ರಾಮುಖ್ಯತೆ)

ಉತ್ತರ ದಿಕ್ಕು: ಮಹಾಕಾಳಿ, ಪೂರ್ವ ದಿಕ್ಕು: ಮಹಾಲಕ್ಷ್ಮಿ,
ದಕ್ಷಿಣ ದಿಕ್ಕು: ಮಹೇಶ್ವರಿ, ಪಶ್ಚಿಮ ದಿಕ್ಕು: ಮಹಾಸರಸ್ವತಿ

(ನೆಲದೊಳಗಿರುವ ಹನ್ನೆರಡು ಕೋಣೆಗಳ ಪ್ರಾಮುಖ್ಯತೆ: ಅವು ಮಾತೃಮಂದಿರದ ತಳಪಾಯದಿಂದ ಹೊರಸೂಸುವ ವಿಷಯಗಳು:)

ನಿಷ್ಕಾಪಟ್ಯ, ವಿನಮ್ರತೆ, ಕೃತಜ್ಞತೆ, ಪಟ್ಟುಹಿಡಿಯುವಿಕೆ, ಅಭೀಪ್ಸೆ, ಗ್ರಹಣಶೀಲತೆ, ಪ್ರಗತಿ, ಧೈರ್ಯ, ಒಳ್ಳೆಯತನ, ಔದಾರ್ಯ, ಸಮತೆ, ಶಾಂತಿ.

(ಮಾತೃಮಂದಿರವನ್ನು ಸುತ್ತುವರಿದ ಹನ್ನೆರಡು ತೋಟಗಳ ಪ್ರಾಮುಖ್ಯತೆ)

ಅಸ್ತಿತ್ವ, ಪ್ರಜ್ಞೆ, ದಿವ್ಯಾನಂದ, ಪ್ರಕಾಶ, ಜೀವನ, ಸಾಮರ್ಥ್ಯ, ಸಂಪತ್ತು, ಉಪಯುಕ್ತತೆ, ಪ್ರಗತಿ, ತಾರುಣ್ಯ, ಸಾಮರಸ್ಯ, ಪರಿಪೂರ್ಣತೆ.

**CWM, 13/226** **- ಶ್ರೀಮಾತೆ**

*

## ನಗರದ ಕೇಂದ್ರ

A ಳ ವಿಚಾರ ಕೇಂದ್ರದಲ್ಲಿ ಹರಿಯುವ ನೀರಿನಿಂದ ಸುತ್ತುವರಿದ ಒಂದು ದ್ವೀಪವಿರುವುದಾಗಿದೆ, ಅದು ನಗರಕ್ಕೆ ಇಡಿಯಾಗಿ ನೀರನ್ನು ಒದಗಿಸುತ್ತದೆ ಮತ್ತು ಅದು ನಗರದಾದ್ಯಂತ ಸಾಗಿಹೋದ ನಂತರ ನೀರನ್ನು ಮುಂದೆ ಕಳಿಸಲು ಉಪಯೋಗವಾಗುವ ಯಂತ್ರವಿರುವ ಮನೆಗೆ ಅದನ್ನು ಕಳಿಸಲಾಗುವುದು ಮತ್ತು ಅಲ್ಲಿಂದ ಹೊರಗೆ ಸುತ್ತುಮುತ್ತಲಿನಲ್ಲಿರುವ ಕೃಷಿ ಭೂಮಿಗಳಿಗೆ ನೀರುಣಿಸಲಾಗುವುದು. ಹಾಗಾಗಿ ಕೇಂದ್ರ ಒಂದು ಚಿಕ್ಕ ದ್ವೀಪದ ಹಾಗಿರುತ್ತದೆ ಮತ್ತು ಅದರ ಮೇಲೆ ನಾವು ಮೊದಲು "ಮಾತೃಮಂದಿರ" ಎಂದು ಕರೆದದ್ದು ಇರುತ್ತದೆ. ನಾನದನ್ನು, ಯಾವಾಗಲೂ, ದೊಡ್ಡದಾಗಿರುವ ಒಂದು ಕೋಣೆಯ ರೂಪದಲ್ಲಿ ನೋಡುತ್ತೇನೆ, ಅದು ಪೂರ್ತಿಬರಿದಾಗಿರುತ್ತದೆ, ಮೇಲಿನಿಂದ ಬರುವ ಪ್ರಕಾಶವನ್ನು ಸ್ವೀಕರಿಸುತ್ತದೆ, ಬರುವ ಆ ಪ್ರಕಾಶವನ್ನು ಹೇಗೆ ವ್ಯವಸ್ಥಿತಗೊಳಿಸಲಾಗುತ್ತದೆ ಎಂದರೆ ಅದು ಒಂದು ಸ್ಥಳದಲ್ಲಿ ಏಕಾಗ್ರಗೊಳ್ಳುವಂತಾಗುತ್ತದೆ, ಅಲ್ಲಿ ನಾವು ನಗರದ ಕೇಂದ್ರವೆಂದು ಬಯಸಿದ್ದನ್ನು ಇರಿಸಬಹುದು. ಮೊದಲು ನಾವು ಶ್ರೀ ಅರವಿಂದರ ಸಂಕೇತವನ್ನು ಅಲ್ಲಿರಿಸಬೇಕೆಂದು ಯೋಚಿಸಿದ್ದೆವು. ಆದರೆ ನಾವು ಬಯಸಿದ್ದನ್ನು ಅಲ್ಲಿರಿಸಬಹುದು. ಅಲ್ಲಿ ಆ ರೀತಿ ಸೂರ್ಯ ಕಿರಣವೊಂದು ಯಾವಾಗಲೂ ಅದನ್ನು ಸ್ಪರ್ಶಿಸುತ್ತಿರಬೇಕು, ಅದು ಸೂರ್ಯನೊಂದಿಗೆ ಹೊರಳುತ್ತಿರಬೇಕು, ತಿಳಿಯಿತೆ. ಅದನ್ನು ಸರಿಯಾಗಿ ಕೈಕೊಂಡರೆ ಅದು ಬಹಳ ಒಳ್ಳೆಯದಾಗುವುದು. ನಂತರ ಒಳಗಡೆ ಜನರು ಕುಳಿತುಕೊಂಡು ಧ್ಯಾನ ಮಾಡಬಹುದು ಇಲ್ಲವೆ ಸರಳವಾಗಿ ವಿಶ್ರಾಂತಿ ಪಡೆಯಬಹುದು, ಅಲ್ಲಿ ಬೇರೇನೂ ಇಲ್ಲ, ಒಳಗಡೆ ಆರಾಮವಾಗಿರುವಂತೆ ಇರಬೇಕು, ಅದರಿಂದಾಗಿ ದಣಿದುಕೊಳ್ಳದೆ ಜನರು ಕುಳಿತುಕೊಳ್ಳಬಹುದು, ಬಹುಶಃ ಅಲ್ಲಿ ಕೆಲವು ಸ್ತಂಭಗಳಿರಬಹುದು, ಅವು ಅದೇ ಕಾಲಕ್ಕೆ ಬೆನ್ನಾಸರೆಗೆ ಸಹಾಯ ಮಾಡುವವು. ಅದರ ಹಾಗಿರುವ ಏನೋ ಒಂದು. ನಾನು ಅದನ್ನೇ ಯಾವಾಗಲೂ ನೋಡುತ್ತಿರುತ್ತೇನೆ. ಕೋಣೆ ಹೆಚ್ಚು ಎತ್ತರವಾದದ್ದಿರಬೇಕು, ಅದರಿಂದಾಗಿ ಸೂರ್ಯ ಕಿರಣ ರೂಪದಲ್ಲಿ ಪ್ರವೇಶಿಸುವಂತಾಗುತ್ತದೆ, ಆ ಪ್ರವೇಶ ದಿನದ ವೇಳೆಗನುಗುಣವಾಗಿರಬೇಕು ಮತ್ತು ಅಲ್ಲಿರುವ ಕೇಂದ್ರವನ್ನು ಸ್ಪರ್ಶಿಸಬೇಕು. ಅದನ್ನು ಕೈಕೊಂಡರೆ ಅದು ಹೆಚ್ಚು ಒಳ್ಳೆಯದಾಗುವುದು.

ಸೂರ್ಯನ ಕಿರಣದ ಈ ವಿಚಾರ... ನಾನು ನೋಡಿದಾಗೆಲ್ಲ ಒಮ್ಮೆಗೆ ನಾನದನ್ನು ನೋಡುತ್ತೇನೆ ಮತ್ತು ಸೂರ್ಯನ ಒಂದು ಕಿರಣ ಎಲ್ಲ ಸಮಯದಲ್ಲಿ ಬರುತ್ತಿರಬೇಕು, ಅದನ್ನು ಆ ರೀತಿ ವ್ಯವಸ್ಥೆಗೊಳಪಡಿಸಬೇಕು (ಸೂರ್ಯನ ಚಲನೆಯನ್ನು ಅನುಸರಿಸುವ ಸಂಜ್ಞೆ) ಮತ್ತು ಆಗ ಅಲ್ಲಿ ಏನೋ ಒಂದಿರುತ್ತದೆ, ಒಂದು ಸಂಕೇತ, ಅದು ಇಡಿಯಾಗಿ ಪ್ರಕಾಶವನ್ನು ಸ್ವೀಕರಿಸಲು ಸಮತಲದಲ್ಲಿರಬೇಕು ಮತ್ತು ನೆಟ್ಟಗೆ ನಿಲ್ಲಿಸಿದ್ದಾಗಿರಬೇಕು, ಅದರಿಂದಾಗಿ ಅದನ್ನು ಎಲ್ಲ ಕಡೆಯಿಂದ ಸುತ್ತಲೂ ನೋಡುವಂತಾಗಬೇಕು. ದೇವರೆ, ಅದೊಂದು ಧರ್ಮವಾಗದಂತಾಗಲಿ.

**CWM, 13/277–78** **- ಶ್ರೀಮಾತೆ**

*

**ಒಳಭಾಗ**

ನಾನು ಬಹಳ ಸ್ಪಷ್ಟವಾಗಿ ನೋಡಿದೆ, ಎಂದರೆ ಅದು ಆ ರೀತಿಯದಾಗಿತ್ತು ಮತ್ತು ಅದಿನ್ನೂ ಹಾಗೆಯೇ ಇದೆ, ಅದು ಅಲ್ಲಿದೆ (ಸನಾತನ ಸ್ತರವನ್ನು ತೋರಿಸುವ ಸಂಜ್ಞೆ), ಅದು ಈ ಸ್ಥಳದ ಒಳಭಾಗ.

ಅದು ಎತ್ತರವಾದ ದುಂಡು ಕಂಬದ ಒಳಭಾಗದಲ್ಲಿರುವ ಒಂದು ಬಗೆಯ ಮಹಲಿದ್ದ ಹಾಗಿರುತ್ತದೆ, ಅದಕ್ಕೆ ಕಿಟಕಿಗಳಿರುವುದಿಲ್ಲ, ಆ ಯಂತ್ರಗಳೊಂದಿಗೆ (ಹವಾ ನಿಯಂತ್ರಿತ ಯಂತ್ರಗಳನ್ನು ತೋರಿಸುವ ಸಂಜ್ಞೆ) ಗಾಳಿಯ ಸಂಚಾರ ಕೃತ್ರಿಮವಾಗಿರುತ್ತದೆ, ಕೇವಲ ಮೇಲ್ಛಾವಣಿ ಇರುತ್ತದೆ. ಸೂರ್ಯ ಕೇಂದ್ರದತ್ತ ಬೆಳಕು ಬೀರುತ್ತಾನೆ. ಇಲ್ಲವೆ ಸೂರ್ಯನಿಲ್ಲದಿದ್ದಾಗ, ರಾತ್ರಿ ಕಾಲದಲ್ಲಿ ಇಲ್ಲವೆ ಮೋಡ ಮುಸುಕಿ ಕತ್ತಲಾದಾಗ ಸ್ಥಾನಿಕ ಪ್ರಕಾಶವನ್ನು ಬೀರುವ ವಿದ್ಯುತ್ ದೀಪವಿರುತ್ತದೆ.

ಇರುವ ವಿಚಾರವೆಂದರೆ ನೂರು ಜನರು ಕುಳಿತಿರಲು ಸಾಧ್ಯವಾಗಬಹುದಾದಷ್ಟು ದೊಡ್ಡದಾದ ಕಟ್ಟಡವಿರುವ ಒಂದು ಬಗೆಯ ಉದಾಹರಣೆಯನ್ನು ಇಲ್ಲವೆ ಮಾದರಿಯನ್ನು ನಿರ್ಮಾಣ ಮಾಡುವುದಾಗಿದೆ. ನಗರ ನಿರ್ಮಾಣಗೊಂಡಾಗ ಹಾಗೂ ನಮಗೆ ಅನುಭವವಾದಾಗ ಅದು ಇನ್ನೂ ದೊಡ್ಡದಾದ ಏನೋ

ಒಂದಾಗುವಂತೆ ಮಾಡಲಾಗುವುದು. ಆದರೆ ಆಗ ಅದು ಬಹಳ ದೊಡ್ಡದಾಗಿರುತ್ತದೆ, ಸಾವಿರಾರು ಜನರಿಗೆ ಕುಳಿತುಕೊಳ್ಳಲು ಆಸ್ಪದ ಮಾಡಿಕೊಡುತ್ತದೆ. ಎರಡನೆಯದನ್ನು ಮೊದಲನೆಯದರ ಸುತ್ತ ನಿರ್ಮಿಸಲಾಗುವುದು. ಅದರರ್ಥ ಎರಡನೆಯದರ ನಿರ್ಮಾಣ ಮುಕ್ತಾಯಗೊಳ್ಳುವವರೆಗೆ ಮೊದಲನೆಯದು ಉಳಿದುಕೊಂಡಿರುತ್ತದೆ.

ಆ ವಿಚಾರ ಹಾಗಿದೆ.

ಅದು ಹನ್ನೆರಡು ಭಾಗಗಳಿರುವ ಒಂದು ಗೋಪುರವಾಗುತ್ತದೆ, ಪ್ರತಿಯೊಂದು ಭಾಗ ಆ ವರ್ಷದ ತಿಂಗಳೊಂದನ್ನು ಪ್ರತಿನಿಧಿಸುತ್ತದೆ ಮತ್ತು ಮೇಲ್ಗಡೆ ಗೋಪುರದ ಮೇಲ್ಚಾವಣಿ ಹೀಗಿರುತ್ತದೆ. (ಬದಿಗಳಿಂದ ಕೇಂದ್ರದವರೆಗೆ ಬಾಗಿಕೊಂಡು ಹೋಗುವ ಒಂದು ಮೇಲ್ಚಾವಣಿಯನ್ನು ತೋರಿಸುವ ಸಂಜ್ಞೆ.)

ಮತ್ತು ನಂತರ ಒಳಭಾಗದಲ್ಲಿ ಹನ್ನೆರಡು ದುಂಡು ಕಂಬಗಳಿರುತ್ತವೆ, ಗೋಡೆಗಳು ನಂತರ ದುಂಡು ಕಂಬಗಳು, ಕೇಂದ್ರದಲ್ಲಿ ಸರಿಯಾಗಿ, ನೆಲದ ಮೇಲೆ ನನ್ನ ಸಂಕೇತವಿರುತ್ತದೆ ಮತ್ತು ಅದರ ಮೇಲ್ಗಡೆ ಚೌಕಾಕಾರದಲ್ಲಿರುವಂತೆ ನಾಲ್ಕು ಶ್ರೀ ಅರವಿಂದರ ಸಂಕೇತಗಳಿರುತ್ತವೆ ಮತ್ತು ಅದರ ಮೇಲ್ಗಡೆ ಗೋಳಾಕಾರದ ಕಾಯವಿರುತ್ತದೆ, ಸಾಧ್ಯವಾದರೆ ಆ ಗೋಳಾಕಾರದ ಕಾಯವನ್ನು ಪಾರದರ್ಶಕ ವಸ್ತುವಿನಿಂದ ಮಾಡಿರಬೇಕು, ನಂತರ ತಿಂಗಳಿಗನುಸಾರವಾಗಿ, ಕಾಲಕ್ಕನುಸಾರವಾಗಿ (ಸೂರ್ಯನ ಚಲನೆಯನ್ನು ತೋರಿಸುವ ಸಂಜ್ಞೆ) ಪ್ರಕಾಶ ಅತ್ತಿಂದಿತ್ತ ಚಲಿಸುತ್ತಿರುತ್ತದೆ.

ನಿಮಗೆ ತಿಳಿಯಿತೆ? ಅಲ್ಲಿ ಯಾವಾಗಲೂ ಒಂದು ಕಿರಣದಿಂದ ತೆರೆದಿರಿಸುವಿಕೆ ಇರುತ್ತದೆ, ಚದುರಿಹೋದ ಪ್ರಕಾಶವಿಲ್ಲ: ಬಡಿಯಬೇಕಾದ ಒಂದು ಕಿರಣ ಬಡಿಯುತ್ತದೆ. ಅದನ್ನು ಕಾರ್ಯಗತಗೊಳಿಸಲು ಸ್ವಲ್ಪ ತಾಂತ್ರಿಕ ಜ್ಞಾನ ಬೇಕಾಗುತ್ತದೆ ಮತ್ತು ಆ ಕಾರಣದಿಂದಾಗಿ ಒಂದು ರೂಪರೇಖೆ(design)ಯನ್ನು ಯಂತ್ರಶಿಲ್ಪಿ(engineer)ಯ ಸಹಾಯದಿಂದ ರಚಿಸಬೇಕೆಂದಿದ್ದೇನೆ.

ಮತ್ತು ನಂತರ ಅಲ್ಲಿ ಕಿಟಕಿಗಳಿರುವುದಿಲ್ಲ, ಒಳಭಾಗದಲ್ಲಿ ದೀಪಗಳಿರುವುದಿಲ್ಲ. ಅದು ಯಾವಾಗಲೂ ಒಂದು ಬಗೆಯ ಸ್ಪಷ್ಟ ಅರ್ಧಪ್ರಕಾಶ, ಹಗಲು–ರಾತ್ರಿ; ಹಗಲು ಹೊತ್ತಿನಲ್ಲಿ ಸೂರ್ಯನೊಂದಿಗೆ, ರಾತ್ರಿ ಕೃತ್ರಿಮ ಪ್ರಕಾಶದೊಂದಿಗೆ ಅದು

ಹಾಗಿರುತ್ತದೆ. ನೆಲದ ಮೇಲೆ ಏನೂ ಇರುವುದಿಲ್ಲ, (ಶ್ರೀಮಾತೆಯವರ ಕೋಣೆಯಲ್ಲಿ ಇರುವಂತಹ) ನೆಲ ಮಾತ್ರವಿರುತ್ತದೆ. ಎಂದರೆ ಮೊದಲು ಕಟ್ಟಿಗೆ (ಇಲ್ಲವೆ ಬೇರೆ ಏನೋ ಒಂದು) ನಂತರ ಸ್ಪಂಜಿನಂತೆ ತೂತು ತೂತಾಗಿರುವ, ಹಗುರವಾಗಿರುವ ರಬ್ಬರು, ದಪ್ಪವಾದದ್ದು, ಬಹಳ ಮೃದುವಾದದ್ದು ನಂತರ ಜಮಖಾನೆ. ಕೇಂದ್ರ ಸ್ಥಳವನ್ನು ಹೊರಪಡಿಸಿ ಎಲ್ಲೆಡೆಯಲ್ಲೂ ಜಮಖಾನೆ ಇರುತ್ತದೆ. ಜನರು ಎಲ್ಲೆಡೆಯಲ್ಲಿ ಕುಳಿತುಕೊಳ್ಳಲು ಶಕ್ತರಾಗುತ್ತಾರೆ. ತಮ್ಮ ಬೆನ್ನುಗಳಿಗೆ ಆಧಾರದ ಆವಶ್ಯಕತೆ ಇದ್ದವರಿಗೆ ಆ ಹನ್ನೆರಡು ದುಂಡು ಕಂಬಗಳಿರುತ್ತವೆ.

**CWM, 13/280–81** **- ಶ್ರೀಮಾತೆ**

*



**ಹೊಸ ಸೃಷ್ಟಿಯ ಪ್ರಗತಿ** (ಅರೋವಿಲೆಯ ಪ್ರಗತಿ)

ಪ್ರತಿಯೊಬ್ಬನೂ ತನ್ನ ಪ್ರಗತಿಗಾಗಿ ಅನುಕೂಲಕರವಾದ ಚಟುವಟಿಕೆಯನ್ನು ಕಂಡುಕೊಳ್ಳಬೇಕು

(ಶ್ರೀಮಾತೆಯವರು ನೀಡಿದ ಆಧ್ಯಾತ್ಮಿಕ ಪ್ರಾಮುಖ್ಯತೆ ಹಾಗೂ ವಿವರಣೆ)

**Botanical Name: Hibiscus rosa-sinensis**

*



**ನಿಶ್ಚಲನೀರವತೆಯಲ್ಲಿ ಹಾಗೂ ಏಕಾಗ್ರತೆಯಲ್ಲಿ ಉಳಿದುಕೊಳ್ಳಲು ಒಂದು ಸ್ಥಾನ**

ಅದು ಹನ್ನೆರಡು ಕ್ರಮಬದ್ಧ ಭಾಗಗಳಿರುವ ಒಂದು ಬಗೆಯ ಗೋಪುರ, ಅವು ವರ್ಷದ ಹನ್ನೆರಡು ತಿಂಗಳುಗಳನ್ನು ಪ್ರತಿನಿಧಿಸುತ್ತವೆ ಮತ್ತು ಅದು ಪರಿಪೂರ್ಣವಾಗಿ ಬರಿದಾಗಿದೆ. ಅದು ನೂರರಿಂದ ಎರಡು ನೂರು ಜನರು ಕುಳಿತುಕೊಳ್ಳಲು ಅನುವು ಮಾಡಿಕೊಡುವುದು ಮತ್ತು ನಂತರ ಮೇಲ್ಛಾವಣಿಗೆ ಆಧಾರ ನೀಡಲು ಅಲ್ಲಿ ಒಳಗೆ (ಹೊರಗಲ್ಲ) ಹನ್ನೆರಡು ದುಂಡು ಕಂಬಗಳಿರುತ್ತವೆ ಮತ್ತು ಕೇಂದ್ರದಲ್ಲಿ ಸರಿಯಾಗಿ, ಸರಿ, ಏಕಾಗ್ರತೆಗಾಗಿ ಇರಬೇಕಾದ ವಸ್ತುವಿರುತ್ತದೆ. ಸೂರ್ಯನ ಸಹಯೋಗದೊಂದಿಗೆ ವರ್ಷದ ಸುತ್ತ ಸೂರ್ಯ ಕಿರಣಗಳ ರೂಪದಲ್ಲಿ ಪ್ರವೇಶಿಸಬೇಕು, ಚದುರಿದ ಪ್ರಕಾಶದ ರೂಪದಲ್ಲಲ್ಲ. ಅದು ಕಿರಣಗಳ ರೂಪದಲ್ಲಿ ಪ್ರವೇಶಿಸುವಂತಾಗುವುದಕ್ಕೆ ಒಂದು ವ್ಯವಸ್ಥೆಯನ್ನು ಮಾಡಬೇಕು. ಆಗ ದಿನದ ಸಮಯದ ಹಾಗೂ ವರ್ಷದ ತಿಂಗಳಿನ ಪ್ರಕಾರ ಆ ಕಿರಣ ತಿರುಗುತ್ತಿರುತ್ತದೆ (ಮೇಲ್ಗಡೆ ಅದಕ್ಕಾಗಿ ವ್ಯವಸ್ಥೆ ಮಾಡಲಾಗಿರುತ್ತದೆ.) ಮತ್ತು ಆ ಕಿರಣವನ್ನು ಕೇಂದ್ರದತ್ತ ನಿರ್ದೇಶಿಸಲಾಗಿರುತ್ತದೆ. ಕೇಂದ್ರದಲ್ಲಿ ಗೋಳಕ್ಕೆ ಆಧಾರ ನೀಡುತ್ತ ಶ್ರೀ ಅರವಿಂದರ ಸಂಕೇತವಿರುತ್ತದೆ. ಹರಳಿನಂತೆ ಪಾರದರ್ಶಕವಾಗಿರುವ ಏನೋ ಒಂದರಿಂದ ಆ ಗೋಳವನ್ನು ಮಾಡಲು ಪ್ರಯತ್ನಿಸುತ್ತೇವೆ. ಅದೊಂದು ದೊಡ್ಡ ಗೋಳವಾಗಿರುತ್ತದೆ ಮತ್ತು ಆಗ

ಏಕಾಗ್ರತೆಯಲ್ಲಿರಲು (ಶ್ರೀಮಾತೆಯವರು ನಗುತ್ತಾರೆ) ಏಕಾಗ್ರತೆಯಲ್ಲಿರುವುದನ್ನು ಕಲಿತುಕೊಳ್ಳಲು ಜನರಿಗೆ ಒಳಗೆ ಪ್ರವೇಶಿಸಲು ಅನುವು ಮಾಡಿಕೊಡಲಾಗುತ್ತದೆ. ಅಲ್ಲಿ ಸ್ಥಿರಪಡಿಸಿದ ಧ್ಯಾನದ ಕಾರ್ಯಕ್ರಮವಿರುವುದಿಲ್ಲ, ಅಂತಹದೇನೂ ಇಲ್ಲ, ಆದರೆ ಅವರು ಅಲ್ಲಿ ನಿಶ್ಚಲನೀರವತೆಯಲ್ಲಿ ಹಾಗೂ ಏಕಾಗ್ರತೆಯಲ್ಲಿ ಇರಬೇಕು.

ಆದರೆ ಆ ಸ್ಥಳ ಸಾಧ್ಯವಿದ್ದಷ್ಟು ಸರಳವಾಗಿರುತ್ತದೆ. ನೆಲ ಹೇಗಿರುತ್ತದೆಂದರೆ ಜನರು ನೆಮ್ಮದಿಯಿಂದಿರುತ್ತಾರೆ, ಹಾಗಾಗಿ ಅದು ಇಲ್ಲಿ ನೋಯಿಸುತ್ತದೆ, ಅಲ್ಲಿ ನೋಯಿಸುತ್ತದೆ ಎಂದು ಯೋಚಿಸುವಂತಿರುವುದಿಲ್ಲ.

ಮಧ್ಯದಲ್ಲಿ ನೆಲದ ಮೇಲೆ ನನ್ನ ಸಂಕೇತವಿರುತ್ತದೆ. ನನ್ನ ಸಂಕೇತದ ಮಧ್ಯದಲ್ಲಿ ಚೌಕಾಕಾರದ ರೀತಿಯಲ್ಲಿ ಶ್ರೀ ಅರವಿಂದರ ನಾಲ್ಕು ಸಂಕೇತಗಳಿರುತ್ತವೆ, ಲಂಬವಾಗಿದ್ದು ಪಾರದರ್ಶಕ ಗೋಳಕ್ಕೆ ಆಧಾರ ನೀಡುತ್ತವೆ. ಅದನ್ನು ನೋಡಲಾಗಿದೆ.

**CWM, 13/284–85** **- ಶ್ರೀಮಾತೆ**

*

**ಮನುಷ್ಯ ತನ್ನ ಪ್ರಜ್ಞೆಯನ್ನು ಕಂಡುಕೊಳ್ಳಲು ಒಂದು ಸ್ಥಳ**

ಅಲ್ಲಿ ಬಾಗಿಲುಗಳಿರುವುದಿಲ್ಲ. ಆಳದಲ್ಲಿ ಕೆಳಗಿಳಿದು ಹೋದಾಗ ಮನುಷ್ಯ ಮತ್ತೆ ದೇಗುಲದತ್ತ ಬರುತ್ತಾನೆ. ಮನುಷ್ಯ ಗೋಡೆಯ ಕೆಳಗಿಳಿದು ಹೋದಾಗ ಮತ್ತೆ ಒಳಭಾಗದಲ್ಲಿ ಮೇಲೆ ಬರುತ್ತಾನೆ. ಮತ್ತೆ ಅದೊಂದು ಸಂಕೇತ. ಪ್ರತಿಯೊಂದು ಸಾಂಕೇತಿಕವಾಗಿರುತ್ತದೆ.

ಅಲ್ಲಿ ಪೀಠೋಪಕರಣಗಳಿರುವುದಿಲ್ಲ. ಆದರೆ ನೆಲದ ಮೇಲೆ ಇಲ್ಲಿದ್ದ ಹಾಗೆ ಬಹುಶಃ ಕಟ್ಟಿಗೆಯಿರುತ್ತದೆ ಮತ್ತು ಆ ಕಟ್ಟಿಗೆಯ ಮೇಲೆ ದಪ್ಪವಾಗಿರುವ ಡನಲಪ್ ಇರುತ್ತದೆ ಮತ್ತು ಅದರ ಮೇಲೆ ಇಲ್ಲಿದ್ದ ಹಾಗೆ ಒಂದು ಜಮಖಾನೆ ಇರುತ್ತದೆ, ಅದರ ಬಣ್ಣವನ್ನು ಇನ್ನೂ ಆಯ್ಕೆ ಮಾಡಿಕೊಳ್ಳಬೇಕಾಗಿದೆ. ಇಡೀ ಸ್ಥಳ ಬಿಳಿ ಬಣ್ಣದ್ದಾಗಿರುತ್ತದೆ. ಶ್ರೀ ಅರವಿಂದರ ಸಂಕೇತಗಳು ಬಿಳಿ ಬಣ್ಣದ್ದಾಗಿರುತ್ತವೆಂಬುದರ ಬಗ್ಗೆ ನನಗೆ ನಿಶ್ಚಿತತೆಯಿಲ್ಲ. ಅದು ಹಾಗಿರುವುದಿಲ್ಲ. ಅವು ಬಿಳಿಯ ಬಣ್ಣದ್ದಾಗಿರುವುದನ್ನು ನಾನು ನೋಡಲಿಲ್ಲ. ಅವು ಬಂಗಾರ ಹಾಗೂ ಕೇಸರಿ ಬಣ್ಣಗಳ ನಡುವೆ ವ್ಯಾಖ್ಯಿಸಲಾಗದ ಬಣ್ಣದಲ್ಲಿದ್ದುದನ್ನು ನಾನು ನೋಡಿದೆ. ಅವು

ಲಂಬವಾಗಿರುತ್ತವೆ, ಅವುಗಳನ್ನು ಕಲ್ಲಿನಲ್ಲಿ ಕೊರೆದು ತೆಗೆಯಲಾಗಿರುತ್ತದೆ. ಅಲ್ಲಿ ಗೋಳವಿರುತ್ತದೆ, ಅದು ಪಾರದರ್ಶಕವಾಗಿರುವುದಿಲ್ಲ, ಆದರೆ, ಅರೆಪಾರ–ದರ್ಶಕವಾಗಿರುತ್ತದೆ. ನಂತರ ಆ (ಗೋಳದ ಕೆಳಗೆ) ಮೇಲ್ಗಡೆಗೆ ನೇರವಾಗಿರಿಸಿದ ಪ್ರಕಾಶವೊಂದಿರುತ್ತದೆ, ಅದು ಗೋಳದಲ್ಲಿ ಚದುರಿದ ರೂಪದಲ್ಲಿ ಹೊಳೆಯುತ್ತಿರುತ್ತದೆ ಮತ್ತು ನಂತರ ಬಾಹ್ಯದಿಂದ ಕೇಂದ್ರದಲ್ಲಿ ಬೀಳುತ್ತಿರುವ ಪ್ರಕಾಶದ ಕಿರಣಗಳಿರುತ್ತವೆ ಮತ್ತೆ ಬೇರೆ ದೀಪಗಳಿರುವುದಿಲ್ಲ, ಕಿಟಕಿಗಳಿರುವುದಿಲ್ಲ. ವಿದ್ಯುತ್ ಗಾಳಿ–ಬೆಳಕುಗಳ ಸಂಚಾರವಿರುತ್ತದೆ. ಅಲ್ಲಿ ಪೀಠೋಪಕರಣದ ಒಂದು ಭಾಗವೂ ಇರುವುದಿಲ್ಲ. ಮನುಷ್ಯ ತನ್ನ ಪ್ರಜ್ಞೆಯನ್ನು ಕಂಡುಕೊಳ್ಳಲು ಪ್ರಯತ್ನಿಸುವುದಕ್ಕಾಗಿ ಆ ಸ್ಥಳವಿರುತ್ತದೆ.

ಬಾಹ್ಯದಲ್ಲಿ (ಶ್ರೀಮಾತೆಯವರು ತಮ್ಮ ಇನ್ನೊಂದು ಯೋಜನೆಯನ್ನು ಬಿಚ್ಚಿತೋರಿಸುತ್ತಾರೆ) ಅದರಂತಹ ಏನೋ ಒಂದಿರುತ್ತದೆ. ಮೇಲ್ಛಾವಣಿ ಸಂಪೂರ್ಣವಾಗಿ ಚೂಪಾಗಿರುತ್ತದೋ ಇಲ್ಲವೆ ಸರಳವಾಗಿರುತ್ತದೋ ನಮಗೆ ತಿಳಿದಿಲ್ಲ. ಆ ಸ್ಥಳ ಎರಡು ನೂರು ಜನರಿಗೆ ಕುಳಿತುಕೊಳ್ಳಲು ಆಸ್ಪದ ಮಾಡಿಕೊಡುತ್ತದೆ.

**CWM, 13/289** **- ಶ್ರೀಮಾತೆ**

*

## ಚಂಪಕಲಾಲನ ದರ್ಶನಗಳು

### ಚಿನ್ನದ ಆಕಾರ (4–1–1979)

ಈ ಸಲ ನಾನು ನೋಡಿದ ಮಾತೃಮಂದಿರ ಮಹಾವೈಭವದಿಂದ ಕೂಡಿತ್ತು, ಕಲ್ಪನಾತೀತವಾಗಿ ಅದ್ಭುತವಾಗಿತ್ತು. ಮಾತೃಮಂದಿರದ ಮೇಲೆ ಇರುವ ಸ್ಥಳಾವಕಾಶದಲ್ಲಿ ಭವ್ಯ ಆಕಾರವೊಂದು ಸ್ವರ್ಗಗಳನ್ನು ತಲುಪುವ ಹಾಗೆ ಅರೋವಿಲೆಯನ್ನು ಆವರಿಸಿಕೊಂಡಂತೆ ನಿಂತುಕೊಂಡಿತ್ತು. ಅತ್ಯಂತ ಗಂಭೀರ ಹಾಗೂ ಮಹೋನ್ನತ, ಅಪರಿಮಿತವಾಗಿ ವಿಶಾಲವಾದದ್ದು, ಬೆರಗುಗೊಳಿಸು–ವಂತಹದು, ಮಿತಿಮೀರಿ ದೇದೀಪ್ಯಮಾನವಾದಂತಹದು, ಥಳಥಳಿಸುವಂತಹದು, ಬಂಗಾರವರ್ಣದ್ದು, ತೇಜೋರಾಶಿಯನ್ನು ಹರಡುವಂತಹದು ಮತ್ತು ಪರಿಪೂರ್ಣ–ವಾಗಿ ಮೋಹಗೊಳಿಸುವಂತಹದು ಎಂದು ಅದನ್ನು ವರ್ಣಿಸಬಹುದಾಗಿತ್ತು.

ಒಂದರ ನಂತರ ಒಂದರಂತೆ ಅಸಂಖ್ಯಾತ ಕೈಗಳು ಆ ದೇಹದ ಪ್ರತಿಯೊಂದು ಭಾಗದಿಂದ ಮೇಲೆದ್ದು ಬಂದವು. ಸ್ವಲ್ಪ ಸ್ವಲ್ಪವಾಗಿ ಆ ಆಕಾರ ಮೇಲ್ಗಡೆಯಿಂದ ಮೇಲ್ಗಡೆಗೆ ಮೇಲೇರಲು ಪ್ರಾರಂಭಿಸಿತು, ಅದು ಅದನ್ನು ಕೈಕೊಳ್ಳುತ್ತಿರುವಂತೆ ಕೈಗಳು ಅದರ ಕೆಳಭಾಗದಲ್ಲೂ ಕೂಡ ಕಾಣಿಸಿಕೊಂಡವು. ಸ್ವಲ್ಪ ಸಮಯದ ನಂತರ ಆ ಆಕಾರ ಕ್ರಮೇಣ ಕೆಳಗಿಳಿಯತೊಡಗಿತು. ಈ ಸಮಯದಲ್ಲಿ ಅದರ ಎಲ್ಲ ಹಸ್ತಗಳು ತೆರೆದುಕೊಂಡಿದ್ದವು ಮತ್ತು ಸ್ಥಳಾವಕಾಶದಲ್ಲಿ ಹರಡಿಕೊಂಡಿದ್ದವು. ಆ ಹಸ್ತಗಳಿಂದ ಸ್ಫಟಿಕದಂತಿರುವ ದ್ರವವೊಂದು ಎಲ್ಲೆಡೆಯಲ್ಲಿ ಹರಡತೊಡಗಿತ್ತು. ಅದು ಬಹಳ ಉಜ್ವಲವಾದ, ಆಗೊಮ್ಮೆ ಈಗೊಮ್ಮೆ ಹೊಳೆಯುವ ದ್ರವವಾಗಿತ್ತು, ಅದು ಎಲ್ಲ ಮಾತೃಮಂದಿರವನ್ನು ಆವರಿಸಿ–ಕೊಂಡಿತು ಮತ್ತು ನಂತರ ಮಾತೃಮಂದಿರದಿಂದಲೇ ಸ್ವತಃ ಸ್ಫಟಿಕದಂತಿರುವ ದ್ರವದ ಪ್ರವಾಹಗಳು ಹೊರಹೊಮ್ಮಲು ಪ್ರಾರಂಭಿಸಿದವು ಮತ್ತು ಅರೋವಿಲೆ ಇಡಿಯಾಗಿ ಆ ದ್ರವದಿಂದ ತುಂಬಿಕೊಂಡ ದೊಡ್ಡ ಕೆರೆಯ ರೂಪಕ್ಕೆ ತಿರುಗಿತ್ತು.

ಬಹಳ ದೂರದಲ್ಲಿ ಅಸಂಖ್ಯಾತ ಜನರು, ಬಾಲಕರು, ಬಾಲಿಕೆಯರು ನಾಲ್ಕೂ ಬದಿಗಳಲ್ಲಿ ಇರುವುದು ಗೋಚರವಾಗುತ್ತಿತ್ತು ಮತ್ತು ಅವರು ಸಂತೋಷದಿಂದ ಸ್ಫಟಿಕದಂತಿರುವ ದ್ರವದ ಕೆರೆಯನ್ನು ಗಮನಿಸುತ್ತಿದ್ದರು. ಕೊನೆಗೆ ಅವರು ಆ ಕೆರೆಯಲ್ಲಿ ಒಬ್ಬರ ನಂತರ ಒಬ್ಬರಂತೆ ಪ್ರವೇಶಿಸಲು ಪ್ರಾರಂಭಿಸಿದರು. ಅವರಲ್ಲಿ ಕೆಲವರು ಮೇಲ್ಮೈಯಲ್ಲಿ ತೇಲಾಡುತ್ತಿದ್ದರು, ಅದು ಹಾಗಿರುವಾಗ ಕೆಲವರು ಒಳಗೆ ಮುಳುಗಿ ಹೋಗಿದ್ದರು, ಆದರೆ ಆ ದ್ರವ ಎಷ್ಟೊಂದು ಪಾರದರ್ಶಕವಾಗಿತ್ತೆಂದರೆ, ಆ ಎಲ್ಲ ವ್ಯಕ್ತಿಗಳು ಗೋಚರಿಸುತ್ತಿದ್ದರು.

ನಂತರ ಆ ಅನೇಕ ಕೈಗಳುಳ್ಳ ಆಕಾರ ಆ ಕೆರೆಯಿಂದ ಹೊರಗೆ ಬಂದಿತು, ಆಗ ಅಲ್ಲಿ ಕೈಗಳ ಬದಲಾಗಿ ಕಣ್ಣುಗಳು ತುಂಬಿಕೊಂಡಿದ್ದವು. ನಂತರ ಚಿನ್ನದ ಪ್ರಕಾಶವಿರುವ ರೂಪದಲ್ಲಿದ್ದ ಆ ಆಕಾರ ಮೇಲಕ್ಕೇರಲು ಪ್ರಾರಂಭಿಸಿತು ಮತ್ತು ಮಧ್ಯ ಮಾರ್ಗದಲ್ಲಿ ಅದು ಸ್ಥಿರಗೊಂಡಿತು. ನಂತರ ಸೂರ್ಯನಿಂದ ಬರುವ ಕಿರಣಗಳ ಹಾಗೆ ಚಿನ್ನದ ಪ್ರಕಾಶ ಆ ಆಕಾರದಿಂದ ಹರಡತೊಡಗಿತು ಮತ್ತು ಸುತ್ತಲೆಲ್ಲ ಹರಡಲು ಪ್ರಾರಂಭಿಸಿತು.

ನಂತರ ಅಗೋ ನೋಡಿರಿ. ಅಲ್ಲಿ ಕೆರೆಯಿರಲಿಲ್ಲ, ಅದರ ಸ್ಥಾನದಲ್ಲಿ ಒಂದು ದೊಡ್ಡ ಸುಂದರ ತೋಟವಿತ್ತು. ಭಿನ್ನ ಜಾಗಗಳಲ್ಲಿ ಕಟ್ಟಡಗಳು ಚಿನ್ನದ

ಪ್ರಕಾಶದಿಂದ ಉಜ್ವಲವಾಗಿದ್ದವು. ಹಲವಾರು ಹೂಗಳಿಂದ ಹೊರಗೆ ಹರಡಿಕೊಳ್ಳುತ್ತಿದ್ದ ಹಲವಾರು ಬಗೆಯ ಪರಿಮಳದಿಂದ ವಾತಾವರಣ ತುಂಬಿಕೊಂಡಿತ್ತು. ಅದರೊಡನೆ ಮಧುರ ಸಂಗೀತದೊಂದಿಗೆ ಜೊತೆಗೂಡಿರುವ ಹಲವಾರು ಗಂಟೆಗಳ ಬಾರಿಸುವಿಕೆ ಕೇಳಿಬರುತ್ತಿತ್ತು.

**ಚಂಪಕಲಾಲನ ದರ್ಶನಗಳು, ಪು.88–89**

*

**ಅರೋವಿಲೆಯ ಪ್ರತಿಷ್ಠಾಪನೆ ಸಮಾರಂಭದ ದರ್ಶನ (21–2–1979)**

ಶ್ರೀಮಾತೆಯವರು ತಮ್ಮ ಪರಮೋಚ್ಚ ಮಧುರ ಮಂದಹಾಸದೊಂದಿಗೆ ತಮ್ಮ ಎಲ್ಲ ಪ್ರೇಮವನ್ನು ಸುರಿಯುತ್ತಿರುವುದನ್ನು ನೋಡಿದೆ. ಮಹಲು ಅವರ ಪರಮೋಚ್ಚ ಪ್ರೇಮದೊಂದಿಗೆ ತುಂಬಿಕೊಂಡಿತ್ತು. ಅವರು ನನ್ನ ಶಿರವನ್ನು ಕೆಲವು ಕ್ಷಣಗಳ ಕಾಲ ತಮ್ಮ ಎರಡೂ ಕೈಗಳಿಂದ ನೇವರಿಸಿದರು ಮತ್ತು ನನ್ನ ಹಣೆಯ ಮೇಲೆ ಮೃದುವಾದ ಮುತ್ತನ್ನು ಕೊಡುವುದರ ಮೂಲಕ ತಮ್ಮ ಮುದ್ರೆಯನ್ನಿರಿಸಿದರು. ನಾನು ಆ ಮಹಲಿನಲ್ಲಿ ಉಜ್ವಲ ಬಂಗಾರ ವರ್ಣದ ಉಜ್ವಲ ಪ್ರಕಾಶದ ಹೊರತಾಗಿ ಬೇರೆ ಏನನ್ನೂ ನೋಡಲಿಲ್ಲ. ಅವರು ಭೌತಿಕ ದೇಹದಲ್ಲಿದ್ದಾಗ ಕೈಕೊಳ್ಳುತ್ತಿದ್ದಂತೆ ನನ್ನ ಎರಡೂ ಕಣ್ಣುಗಳನ್ನು ತಮ್ಮ ಹಸ್ತಗಳಿಂದ ಮುಚ್ಚಿದರು.

ಫೆಬ್ರುವರಿ 28, 1968ರಂದು ನಡೆದ ಅರೋವಿಲೆ ಪ್ರತಿಷ್ಠಾಪನೆ ಸಮಾರಂಭವನ್ನು ನೋಡಿದೆ, ಅದು ಆಗ ಶ್ರೀಮಾತೆಯವರಿಗೆ ವಿವರಿಸಿ ಹೇಳುತ್ತಿದ್ದುದನ್ನು ನಾನು ಕೇಳಿದ ಹಾಗಿತ್ತು. ಆದರೆ ಈಗ ಅದರ ಎಲ್ಲ ಆಂತರಿಕ ಪ್ರಾಮುಖ್ಯತೆಯನ್ನು ನೋಡಿದೆ. ಶ್ರೀಮಾತೆಯವರು ತಮ್ಮ ಪರಮಾನಂದದಾಯಕ, ಮಧುರ, ಪರಮೋಚ್ಚ ಮಂದಹಾಸದೊಂದಿಗೆ ಪ್ರತಿಷ್ಠಾಪನೆ ಸಮಾರಂಭದಲ್ಲಿ ಭಾಗವಹಿಸುತ್ತಿದ್ದ ಪ್ರತಿಯೊಬ್ಬ ತರುಣ ವ್ಯಕ್ತಿಯ ಮೇಲೆ ಸ್ವಲ್ಪ ಎತ್ತರದಲ್ಲಿ ಇರುವುದನ್ನು ನೋಡಿದೆ. ಅವರು ಉಜ್ವಲ ಬಂಗಾರ ವರ್ಣದ ಪ್ರಕಾಶವನ್ನು ಹಾಗೂ ತಮ್ಮ ದೈವೀ ಪ್ರೇಮವನ್ನು ಹೊರಸೂಸುತ್ತಿದ್ದರು. ಇದು ನನಗೆ ಶ್ರೀಕೃಷ್ಣನ ರಸಲೀಲೆಯನ್ನು ನೆನಪಿಗೆ ತಂದುಕೊಟ್ಟಿತು. ಭಾಗವಹಿಸುತ್ತಿದ್ದ ಪ್ರತಿಯೊಬ್ಬನು ಸಿಂಹದ ಮೇಲೆ ಕುಳಿತಿದ್ದನು. ಒಂದು ಕೈಯಲ್ಲಿ ತನ್ನ ದೇಶದ ನಿಶಾನೆಯನ್ನು ಹಾಗೂ ಇನ್ನೊಂದು ಕೈಯಲ್ಲಿ ತನ್ನ ದೇಶದ ಮಣ್ಣನ್ನು ಹಿಡಿದುಕೊಂಡು

ಪ್ರತಿಷ್ಠಾಪನೆಯ ಕರಂಡ (urn)ದತ್ತ ಮುಂದೆ ಸಾಗುತ್ತಿದ್ದನು. ಇಡೀ ದೃಶ್ಯ ಮಹೋನ್ನತವಾಗಿತ್ತು. ಆ ಸಿಂಹಗಳು ಸುಂದರವಾಗಿದ್ದವು, ಹೊಳೆಯುತ್ತಿರುವ ಬಂಗಾರದ ಬಣ್ಣದಲ್ಲಿ ಅತ್ಯಂತ ಗಂಭೀರವಾಗಿದ್ದವು. ಭವ್ಯ ಆಯಾಲುಗಳು ಬಹುಮಟ್ಟಿಗೆ ನೆಲವನ್ನು ಸ್ಪರ್ಶಿಸುತ್ತಿದ್ದವು. ಇಡೀ ವಾತಾವರಣ ಗೋಚರವಾಗದ ದ್ರವ್ಯದಿಂದ ಒಳಗೆ ಹರಡಿಕೊಂಡಿತ್ತು. ಫೆಬ್ರುವರಿ 28, 1968ರ ದಿನ ಜಗತ್ತಿನ ಇತಿಹಾಸದಲ್ಲಿ ಅನನ್ಯವಾಗಿತ್ತು – ಪ್ರಾಚೀನ ಸಂಸ್ಕೃತದ ಹೇಳಿಕೆಯಲ್ಲಿದ್ದ ಹಾಗೆ ಅದು ಮೊದಲು ಎಂದಿಗೂ ಸಂಭವಿಸಿರಲಿಲ್ಲ ಮತ್ತು ಭವಿಷ್ಯತ್ತಿನಲ್ಲಿ ಅದು ಆಗುವುದಿಲ್ಲ.

**ಚಂಪಕಲಾಲನ ದರ್ಶನಗಳು: p.92**

*

## ವಾರ್ತಾಪತ್ರ


## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 26ನೇ ಜನವರಿ 2018ರ ಶುಕ್ರವಾರದಂದು ಮೀರಾಂಬಿಕಾ ಸ್ಕೂಲ್ ಫಾರ್ ನ್ಯೂ ಏಜ್ ಶಿಕ್ಷಣ ಸಂಸ್ಥೆಯಲ್ಲಿ ಗಣ ರಾಜ್ಯೋತ್ಸವವನ್ನು ಆಚರಿಸಲಾಯಿತು. ಸಂಸ್ಥೆಯ ಅಧ್ಯಕ್ಷರಾದ ಶ್ರೀ ಅಜಿತ್ ಸಬ್ನೀಸ್ ಧ್ವಜಾರೋಹಣ ಮಾಡಿದರು. ಶಾಲಾ ವಿದ್ಯಾರ್ಥಿ ವೃಂದ ದೇಶಭಕ್ತಿ ಗೀತೆ ಮತ್ತು ಗಣ ರಾಜ್ಯದ ಮಹತ್ವ ಕುರಿತು ಭಾಷಣ ಮಾಡಿದರು. ನಂತರ ಅಧ್ಯಕ್ಷರು ವಿದ್ಯಾರ್ಥಿಗಳ ಕರ್ತವ್ಯ ಕುರಿತು ಕಿವಿಮಾತು ಹೇಳಿದರು. ಪ್ರಾಂಶುಪಾಲರು, ಶಿಕ್ಷಕ ವೃಂದ ಮತ್ತು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದರು. ವಂದೇ ಮಾತರಂ ಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ದಿನಾಂಕ 29ನೇ ಜನವರಿ 2018ರ ಸೋಮವಾರ ಮೀರಾಂಬಿಕಾ ಸ್ಕೂಲ್ ಫಾರ್ ನ್ಯೂ ಏಜ್ ಶಿಕ್ಷಣ ಸಂಸ್ಥೆಯಲ್ಲಿ "ಶ್ರೀ ಚಂದ್ರಮಣಿ ದತ್ತಿ ಪ್ರಶಸ್ತಿ"ಗಾಗಿ ವಿದ್ಯಾರ್ಥಿಗಳಿಗೆ ಪ್ರಾಮಾಣಿಕತೆ ಮೌಲ್ಯ ವಿಷಯದ ಬಗ್ಗೆ ಕಿರುಪ್ರಹಸನ

ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಸ್ಪರ್ಧೆಯ ತೀರ್ಪುಗಾರರಾಗಿ ಶ್ರೀಮತಿ ಕಮಲಾ ಚಂದ್ರಮಣಿ ಮತ್ತು ಶ್ರೀಮತಿ ಸುಭಾಷಿಣಿ ಆಗಮಿಸಿದ್ದರು. ನಾಲ್ಕು ವಿಭಾಗಗಳ ಮಧ್ಯೆ ಸ್ಪರ್ಧೆ ಏರ್ಪಡಿಸಲಾಗಿತ್ತು. ಮೈತ್ರಿ ವಿಭಾಗದವರು ಪ್ರಥಮ ಸ್ಥಾನವನ್ನು ಗೆದ್ದುಕೊಂಡರು. ದ್ವಿತೀಯ ಸ್ಥಾನವನ್ನು ಶ್ರದ್ಧಾ ಮತ್ತು ಪ್ರಗತಿ ವಿಭಾಗದವರು ತಮ್ಮದಾಗಿಸಿಕೊಂಡರು. ತೃತೀಯ ಸ್ಥಾನವನ್ನು ಪೂರ್ಣ ವಿಭಾಗದವರು ಗೆದ್ದುಕೊಂಡರು. ವಿಜೇತರಿಗೆ ಪ್ರಶಸ್ತಿ ವಿತರಿಸಲಾಯಿತು. ಶ್ರೀ ಅಜಿತ್ ಸಬ್ನೀಸ್, ಅಧ್ಯಕ್ಷರು, ಶಾಲೆಯ ಪ್ರಾಂಶುಪಾಲರು ಉಪಸ್ಥಿತರಿದ್ದರು.



*Keep only my soul to adore eternally*
*And meet Thee in each form*
*and soul of Thee.*

- Sri Aurobindo

**RNI No. 22511/1971**
No. of Pages **64 + 4 (Cov. Page)**
KAR Reg No : RNP/KA/BGS/368/2018-2020
Date of Publication on 7th of Every Month
Permitted to Post 10th of Every Month. Reg. Valid till : 31-12-2020
Licensed to Post at BG PSO, Mysore Road, Bengaluru - 560 026

ಶ್ರೀ ಅರವಿಂದ ಸಂಕೀರ್ಣದಲ್ಲಿ ಅತಿಥಿ ಗೃಹ ಸೌಲಭ್ಯವಿರುತ್ತದೆ. ಶ್ರೀಮಾತಾರವಿಂದರ ಭಕ್ತರು, ಗುರು-ಬಂಧುಗಳು, ಸದಸ್ಯರು ಮತ್ತು ಕೇಂದ್ರ ಹಾಗೂ ಶಾಖೆಗಳ ಪದಾಧಿಕಾರಿಗಳಿಗೆ ಸೌಲಭ್ಯದಲ್ಲಿ ರಿಯಾಯತಿ ಪಡೆಯಬೇಕಾದಲ್ಲಿ ಮುಂಚಿತವಾಗಿ ತಿಳಿಸುವುದು. ಸದಸ್ಯರು ಚಾಲ್ತಿಯಲ್ಲಿರುವ ತಮ್ಮ ಸದಸ್ಯತ್ವದ ಗುರುತಿನ ಚೀಟಿಯನ್ನು ಹೊಂದಿರಬೇಕಾಗುತ್ತದೆ.

**ಸಂಪರ್ಕಿಸಬೇಕಾದ ವಿಳಾಸ:**
ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ, ಬೆಂಗಳೂರು - 560 078.
ದೂರವಾಣಿ: 080 - 22339882, 22459628

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase,Bengaluru - 560 078. Phone : 080 - 2244 9882.